UNIVERSAL LIBRARY
OU_198384
UNIVERSAL LIBRARY

OSMANIA UNIVERSITY
LIBRARY

Call No. K922 Ch53B

Name of Book ಬಸವಣ್ಣನವರು

Name of Author ಚಿಂಚಾಮುರಿ

# ಯುಗಪ್ರವರ್ತಕ

ಮೈಸೂರು

ಯುಗಪ್ರವರ್ತಕ

# ಬಸವಣ್ಣನವರು

(ಹೊಸ ದೃಷ್ಟಿಯ ಏಳು ಪ್ರಬಂಧಗಳ ಸಂಗ್ರಹ)

ಬರೆದವರು :

**ಚಿಂತಾಮಣಿ**

೨೫-೪-೧೯೪೪ —— ೧—೦—೦

ಜೀವನ ಪುಸ್ತಕಾಲಯ

ಮೈಸೂರು

CHECKED. 1951
Checked 1969
Checked 1965

ಮುದ್ರಕರು:
ಉಮಾ ಪ್ರೆಸ್,
ನೀಲಗಿರಿ ರೋಡ್, ಮೈಸೂರು

# ಪರಿವಿಡಿ


| | | |
|---|---|---|
| ೧ | ಮಹಾತ್ಮಾ ಬಸವಣ್ಣನವರ ಮಾನವತಾವಾದ | ೧ |
| ೨ | ಸಫಲಜೀವನದ ರಹಸ್ಯ | ೮ |
| ೩ | ಪ್ರಬಲವಾಗುತ್ತಿರುವ ಪ್ರಜಾಶಕ್ತಿ | ೧೬ |
| ೪ | ಮಹಾತ್ಮಾ ಬಸವಣ್ಣನವರ ಭಾವಚರಿತ್ರ | ೨೯ |
| ೫ | ಮಹಾತ್ಮಾ ಬಸವಣ್ಣನವರ ಭಾವವಾಣಿ | ೪೮ |
| ೬ | ಅಕ್ಕನ ಅಣ್ಣ | ೫೭ |
| ೭ | ಯುಗಪ್ರವರ್ತಕ ಬಸವಣ್ಣನವರು | ೬೪ |

# ಈ ಪುಸ್ತಕಕ್ಕೆ ಸಹಾಯ ಸಲ್ಲಿಸಿದ ಮಹನೀಯರು.

## ಅವರಿಗೆ ಲೇಖಕನು ಅತ್ಯಂತ ಉಪಕೃತನಿರುತ್ತಾನೆ.

| | | | | | |
|---|---|---|---|---|---|
| ೧ | ಶ್ರೀ. | ಎಚ್. ಎ. ಪಾಟೀಲ (ಸರ್‌ಪಂಚರು. ಶಿಗ್ಗಾವಿ) | ೫೦ | ೦ | ೦ |
| ೨ | ,, | ವ್ಹಿ. ಎನ್. ಬಸವನಾಳ ಎಂ.ಎ., ಎಲ್.ಎಲ್.ಬಿ., | ೧೦ | ೦ | ೦ |
| ೩ | ,, | ಎನ್. ಜಿ. ನಾಡಿಗೇರ ಎಂ. ಎ., ಬಿ. ಟಿ. ಪಿ. ಎಚ್. ಇ. ಡಿ., | ೫ | ೦ | ೦ |
| ೪ | ,, | ನಟಭೂಷಣ ಬಸವರಾಜ ಮನಸೂರ | ೫ | ೦ | ೦ |
| ೫ | ,, | ಸಿ. ಎಮ್. ಕುಲಕರ್ಣಿ | | | |
| | ,, | ಎನ್. ಎಸ್. ಗದಗಕರ ಬಿ. ಏ., | ೫ | ೦ | ೦ |
| ೬ | ,, | ಎಸ್. ಡಿ, ಅಗಡಿ | ೫ | ೦ | ೦ |
| ೭ | ,, | ವೀರಪ್ಪ. ಚ. ಅನಾಡ | ೫ | ೦ | ೦ |
| ೮ | ,, | ಸುರೇಶಿ. ಖುರುನಾಪುರ | ೫ | ೦ | ೦ |
| ೯ | ,, | ಎನ್. ವ್ಹಿ. ಗುಡಗುಡಿ | ೫ | ೦ | ೦ |
| ೧೦ | ,, | ಎಸ್. ಎನ್. ಕುಲಕರ್ಣಿ | ೧೦ | ೦ | ೦ |
| ೧೧ | ,, | ಕೆ. ಎಸ್. ದೇಶಪಾಂಡೆ | | | |
| | ,, | ಬಿ. ಆರ್. ಕಟ್ಟಿ | ೫ | ೦ | ೦ |
| ೧೨ | ,, | ಎಲ್. ಟಿ. ದೇಸಾಯಿ | ೫ | ೦ | ೦ |
| ೧೩ | ,, | ಶಿ. ಬಿ. ಪಟ್ಟಣಶೆಟ್ಟಿ | ೧೦ | ೦ | ೦ |
| ೧೪ | ,, | ಡಿ. ಆರ್. ದೇಶಪಾಂಡೆ (ಪೂನಾ) | ೫ | ೦ | ೦ |
| ೧೫ | ,, | ಕೆ. ಎಮ್. ಪದಕಿ (ಪೂನಾ) | ೫ | ೦ | ೦ |
| ೧೬ | ,, | ಆರ್. ಬಿ. ಪೂಜಾರ (ಪೂನಾ) | ೫ | ೦ | ೦ |
| ೧೭ | ,, | ಎಮ್. ಕೆ. ಕುರವತ್ತಿ (ರಾಣೀಬೆನ್ನೂರ) | ೫ | ೦ | ೦ |
| ೧೮ | ,, | ಮಲ್ಲೇಶಪ್ಪ. ಬಂದವ್ವನವರ (ಆರೇ ಮಲ್ಲಾಪುರ) | ೫ | ೦ | ೦ |
| ೧೯ | ,, | ಜಿ. ಎಚ್. ಕುಲಕರ್ಣಿ | ೫ | ೦ | ೦ |
| ೨೦ | ,, | ಜಿ. ಬಿ. ಲಾತೂರಕರ (ಅಧ್ಯಕ್ಷ ಕರ್ನಾಟಕ ಶಿ. ಸಂಘ ಧಾರವಾಡ) | ೫ | ೦ | ೦ |

# ಮುನ್ನುಡಿ

"ಯುಗಪ್ರವರ್ತಕ ಬಸವಣ್ಣನವರು" ಎಂಬ ಈ ಪುಸ್ತಕಕ್ಕೆ ಮುನ್ನುಡಿಯೆಂದು ನಾಲ್ಕು ಮಾತುಗಳನ್ನು ಬರೆಯಲು ನನಗೆ ಬಹು ಸಂತೋಷವೆನಿಸುತ್ತದೆ.

ಕರ್ನಾಟಕದ ಶ್ರೇಷ್ಠ ವಿಭೂತಿಗಳಲ್ಲಿ ಬಸವಣ್ಣನವರೊಬ್ಬರೆಂಬುದು ಎಲ್ಲರೂ ಒಪ್ಪುವಂತಹ ಮಾತಾಗಿದೆ. ವೀರಶೈವವು ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿದೆ ಎಂದು ವಾದಿಸುವ, ಸಾಧಿಸುವ ಜನರು ಹಲವರಿರುವರಾದರೂ, ಅದು ಒಂದು ಸುವ್ಯವಸ್ಥಿತವಾದ, ಸುಸಂಘಟಿತವಾದ, ಸ್ವತಂತ್ರವಾದ ಸಮಾಜವಾಗಿ ಏರ್ಪಟ್ಟುದು ಬಸವಣ್ಣನವರ ಕಾಲದಲ್ಲಿಯೇ ಎಂಬುದಕ್ಕೆ ಸಾಕಷ್ಟು ಆಧಾರಗಳನ್ನು ಕೊಡಬಹುದು. ಈ ಸಮಾಜ ಸಂಘಟನೆಗೆ ಬಸವಣ್ಣನವರೇ ಮೂಲ ಕಾರಣರು, ಮುಖ್ಯ ಕಾರಣರು—ಎಂಬುದಕ್ಕೆ ಅವರ ಕಾಲದ ಹಾಗೂ ಅವರ ತರುವಾಯದ ಶರಣರ, ವಚನಕಾರರ, ಕವಿಗಳ ಮಾತುಗಳನ್ನು ಬೇಕಾದಷ್ಟು ಉದಾಹರಿಸಬಹುದು. 'ಶಿವಸಮಯ ಪ್ರತಿಷ್ಠಾಚಾರ್ಯ' ಎಂದು ಅಲ್ಲಮ ಪ್ರಭುಗಳು, 'ಪ್ರಥಮ ಗುರು' ಎಂದು ಚೆನ್ನಬಸಣ್ಣನವರು, 'ಬಸವಗುರು ಶಿವನಾಗಿ ದೆಸೆಗೆಟ್ಟ ದೇವತಾಪಶುಗಳಿಗೆ ಪತಿಯಾದ' ಎಂದು ಸಿದ್ಧರಾಮ ಶಿವಯೋಗಿಗಳು, 'ಎತ್ತೆತ್ತ ನೋಡಿದತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದೊಡೆ ಲಿಂಗವೆಂಬ ಗೊಂಚಲು, ಒತ್ತಿ ಹಿಂಡಿದೊಡೆ ಭಕ್ತಿಯೆಂಬ ರಸವಯ್ಯ' ಎಂದು ಮಡಿವಾಳ ಮಾಚಿದೇವರು, 'ಅನಾದಿ ಪರಶಿವನು ತಾನೇ ಜಗದ್ಧಿತಾರ್ಥವಾಗಿ ಮರ್ತ್ಯಕ್ಕವತರಿಸಿ ಬಸವನೆಂಬ ನಾಮವನ್ನು ಧರಿಸಿ ವೀರಶೈವವನರುಹಿದಂ' ಎಂದು ಅಕ್ಕಮಹಾದೇವಿಯರು—ಈ ಮುಂತಾದ ಬಸವಣ್ಣನವರ ಒಡನಾಡಿಗಳೆ—ತಮ ತಮಗೆ ಮುಕ್ತಕಂಠರಾಗಿ ಬಸವಣ್ಣನವರನ್ನು ಪ್ರಶಂಸಿಸಿದ್ದಾರೆ; ಅವರ ಕಾರ್ಯದ ಬಗೆಗೆ ತಮ್ಮ ನಿರ್ಣೀತವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಬಸವಣ್ಣನವರ ತರುವಾಯದಲ್ಲಿ, ಅವರನ್ನು—"ಪಾಷಂಡಿ ಭೂಮಿಯೊಳ್ ಶಿವಭಕ್ತಿಯನಾರಂಭಿಸಿ, ಸಾಮರ್ಥ್ಯಮಂ ಬಿತ್ತರಿಸಿ, ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳಂ ಸುಫಲಂ ಮಾಡಲೆಂದು ಬಂದ ಕಾರಣಿಕ" ಎಂದು ಹರಿಹರ ದೇವರೂ, "ವೀರಶೈವ ನಿರ್ಣಯ ಪರಮಾವತಾರ......... ಜಗದಾದಿದೇಶಿಕ, ಪುರಾತನ ಪುಂಗವ"ನೆಂದು ಮಗ್ಗೆಯ ಮಾಯಿ ದೇವರೂ, ಕೊಂಡಾಡಿದ್ದಾರೆ. "ಬಸವ ಮಾಡಿದೊಡಾಯ್ತು ಗುರುನೆಲೆ, ಬಸವ ಮಾಡಿದೊಡಾಯ್ತು ಲಿಂಗವು, ಬಸವ ಮಾಡಿದೊಡಾಯ್ತು ಜಂಗಮ"ವೆಂದು ಚಾಮರಸರು ಬಣ್ಣಿಸಿದರೆ, "ಗುರು ಬಸವಂ, ಲಿಂಗ ಬಸವಂ, ಚರ ಬಸವಂ, ತೀರ್ಥ ಬಸವಂ, ಅಗಣಿತ ಮಹಿಮೋತ್ಕರ ಪ್ರಸಾದ ಬಸವಂ" ಎಂದು ಪಾಲ್ಕುರಿಕೆಯ ಸೋಮೇಶ್ವರರು ಬಸವಣ್ಣನವರನ್ನು ಅಷ್ಟಾವರಣಗಳ ಅಧಿದೇವತೆಯೆಂಬರ್ಥದಲ್ಲಿ ಹೊಗಳಿದ್ದಾರೆ. ಯಾವ ಗ್ರಂಥವನ್ನು ಬರೆಯ ಹೊರಟರೂ 'ಗುರುಬಸವಲಿಂಗಾಯ ನಮಃ' ಎಂದೇ ಆರಂಭ ಮಾಡುವ ಸಂಪ್ರದಾಯ ವೀರಶೈವ ಬರೆಹಗಾರರಲ್ಲೆಲ್ಲ ಅವ್ಯಾಹತವಾಗಿ ನಾಗಿಬಂದಿದೆ—ಎನ್ನುವುದಕ್ಕೆ ತಾಳೆ ಪೋಲೆಯ ಕೈಬರೆಹದ ಪ್ರತಿಗಳು ಸಾಕ್ಷಿಯಾಗಿವೆ. ಬಹಳವೇಕೆ? ಆವ ಆಚಾರ್ಯರಿಗೂ ಲಭಿಸದ ಪದವಿ ಬಸವಣ್ಣನವರದು: ಅವರು ವೀರಶೈವರಲ್ಲಿ ಮಂತ್ರಸ್ಥಾನಾಪನ್ನರಾಗಿದ್ದಾರೆ; ಮಂತ್ರದಲ್ಲಿ ಪ್ರಣವ ಸ್ಥಾನವನ್ನೇ ಪಡೆದಿದ್ದಾರೆ.

ಕನ್ನಡ ಸಮಾಜದ ಪ್ರಧಾನಭಾಗ ವೀರಶೈವ ಸಮಾಜ; ವೀರಶೈವ ಸಮಾಜದ ಬಹುಭಾಗ ಕನ್ನಡಸಮಾಜ; ಆದುದರಿಂದ ಬಸವಣ್ಣನವರು ವೀರಶೈವರಿಗಷ್ಟೇ ಪೂಜ್ಯರೆಂತಲ್ಲ, ಕನ್ನಡಿಗರೆಲ್ಲರಿಗೂ ವಂದ್ಯರಾಗಿದ್ದಾರೆ. ಮೇಲಾಗಿ, ಕನ್ನಡಸಾಹಿತ್ಯವೆಂದರೆ ಹೆಚ್ಚಾಗಿ, ಮುಖ್ಯವಾಗಿ ವೀರಶೈವಸಾಹಿತ್ಯ; ವೀರಶೈವಸಾಹಿತ್ಯದ ವಿಶಿಷ್ಟ ಬಗೆ ವಚನಸಾಹಿತ್ಯ; ಈ ವಚನಸಾಹಿತ್ಯವೇ ಕನ್ನಡವು ವಿಶ್ವಸಾಹಿತ್ಯಕ್ಕೆ ಕೊಟ್ಟ ಅಮೋಘ ಕಾಣಿಕೆಯೆಂದು ಕನ್ನಡಿಗರೆಲ್ಲರೂ ಹೆಮ್ಮೆಪಡಬಹುದಾಗಿದೆ. ಸಂಸ್ಕೃತದ ಹಿರಿಮೆ ಸಡಲಿ, ಕನ್ನಡದ ಹೆಚ್ಚಳ ಬಳೆದುದು ಈ ವಚನಸಾಹಿತ್ಯದಿಂದ; ಪದ್ಯದ ವ್ಯಾಮೋಹ ಸರಿದು ಗದ್ಯಕ್ಕೆ ಪುರಸ್ಕಾರ ದೊರೆತುದುದು ಈ ವಚನಸಾಹಿತ್ಯದಿಂದ. ಬಹುಕಾಲ

ದಿಂದಲೂ ಪಂಡಿತರ ತುತ್ತಾಗಿದ್ದ, ವಿಶಿಷ್ಟ ವರ್ಗದವರ ಸೊತ್ತಾಗಿದ್ದ, ರಾಜ ಲಕ್ಷ್ಮಿಯ ತೊತ್ತಾಗಿದ್ದ ಸರಸ್ವತಿಯ ಸಂಸ್ಕೃತ ಭಂಡಾರವನ್ನು ಕಡೆಗಣಿಸಿ, ತಮ್ಮ ಅನುಭವದ 'ಕಮ್ಮಟ' ದಲ್ಲಿಯೆ ಅಚ್ಚೊತ್ತಿದ್ದ ವಚನನಾಣ್ಯಗಳನ್ನು ಜನಸಾಮಾನ್ಯರೆಲ್ಲರಲ್ಲಿ ಸಲ್ಲುವಂತೆ ಹರಡಿಸಿದವರು ವಚನಕಾರರು. ದೇವ ವಾಣಿಗೆ ಜನವಾಣಿಯಾಗುವುದು ಅಸಾಧ್ಯವಾದಾಗ, ಜನವಾಣಿಯನ್ನೇ ದೇವ ವಾಣಿಯ ಮಟ್ಟಕ್ಕೇರಿಸಿದ ಪವಾಡ ವೀರಶೈವ ವಚನಕಾರರದು. ಈ ವಚನ ಸಾಹಿತ್ಯವಾಹಿನಿಯ ಮೂಲವನ್ನು ಸಂಶೋಧಿಸಲು ಹೊರಟ ಪಂಡಿತರಲ್ಲಿ ಕೆಲ ವರಿಗೆ ಅದರ ಉಗಮವು ಬಸವಣ್ಣನವರಿಗಿಂತಲೂ ಕಿಂಚಿತ್ ಪೂರ್ವವಾಗಿರ ಬಹುದೆಂಬ ಸಂದೇಹ ಉಂಟಾಗಿದ್ದರೂ, ಆ ವಾಹಿನಿ ಕಣ್ಣಿಗೆ ಕಾಣುವನಿತು, ಹೆಸರು ಪಡೆಯುವನಿತು ವಿಶಾಲವಾದುದು ಬಸವಣ್ಣನವರ ಕಾಲದಲ್ಲಿಯೆ, ಅವರ ದೆಸೆಯಿಂದಲೆ—ಎನ್ನುವಲ್ಲಿ ಅಪ ಸಂದೇಹವೂ ಇಲ್ಲ. ಇಡಿಯ ವಚನ ಸಾಹಿತ್ಯಕ್ಕೆ ಎಲ್ಲಂದದಿಂದಲೂ ಏಕಮೇವ ಪ್ರತಿನಿಧಿಯೆಂದರೆ ಬಸವಣ್ಣನವರ ವಚನಗಳು. ಅವುಗಳಲ್ಲಿ ಮಿಡಿಯುವ ಅವರ ವಾಣಿ ಅಮೃತವಾಣಿ; ಅಧರಕ್ಕೂ ಸಿಹಿ; ಉದರಕ್ಕೂ ಸಿಹಿ; ರಸಪರಿಪಾಕವೆಂದು ಅಮೃತ; ಶಾಶ್ವತ ಸಾಹಿತ್ಯವೆಂದು ಅಮೃತ!

ಬಸವಣ್ಣನವರ ಈ ಕಾರ್ಯ, ಈ ಸೇವೆ, ಈ ಸ್ಥಾನಮಾನಗಳನ್ನು ಸಹೃದಯ ರಾದ ಕನ್ನಡ ಚರಿತ್ರಕಾರರಲ್ಲಿ ಹಲವರು ಕಂಡುಕೊಂಡಿರುವರಾದರೂ, ಜಗ ತ್ತಿನ ಜೀವಜ್ಯೋತಿಗಳಲ್ಲಿಯೂ ಬಸವಣ್ಣನವರು ಗಣ್ಯರೆಂಬಅರಿವು ನಮ್ಮ ವರಲ್ಲಿಯೂ ಇತರರಲ್ಲಿಯೂ ಬಲಪಟ್ಟು ನೆಲೆಗೊಳ್ಳಬೇಕಾಗಿದೆ. ಆತ್ಮೋದ್ಧಾ ರದ ಸಮಾಜ ಸಂಸ್ಕರಣದ ತಳಹದಿಯೆಂದು ಬಸವಣ್ಣನವರು ಇಟ್ಟುಕೊಂಡು ಆಚರಿಸಿದ, ಪ್ರಚಾರ ಮಾಡಿದ ತತ್ವಗಳು ಬಹು ವಿಶಾಲವಾದುವೂ, ಕಾಲ ದೇಶಗಳ ಮರ್ಯಾದೆಯನ್ನು ಮೀರಿದುವೂ ಆಗಿರುವುದರಿಂದ ಶಾಂತಿಯನ್ನು ಕಳೆದುಕೊಂಡು ಅರಸುತ್ತಿರುವ ಈಗಿನ ಜಗತ್ತಿಗೆ ಅವುಗಳ ಅಗತ್ಯ ಬಹಳ ವಾಗಿದೆ. ಬುದ್ಧ ಮಹಾವೀರರು ಬಹು ಕಾಲದ ಹಿಂದೆಯೆ ಪ್ರಚುರಪಡಿಸಿದ ಅಹಿಂಸಾತತ್ವವು ಕಾಲಕ್ರಮದಲ್ಲಿ ಮನುಷ್ಯ ಸ್ವಭಾವಕ್ಕನುಗುಣವಾಗಿ, ಸಂಕುಚಿತವಾಗುತ್ತ, ಶುಷ್ಕವಾಗುತ್ತ, ಕೇವಲ ಶಾಬ್ದಿಕವಾಗಿ ಪರಿಣಮಿಸಿದಾಗ, ಅದನ್ನು ಪುನರುಜ್ಜೀವನಗೊಳಿಸಿ ವಿಸ್ತರಿಸಿದವರು ಬಸವಣ್ಣನವರು.

ಪ್ರಾಣಿಗಳೆಂದರೆ ಮೂಕಪ್ರಾಣಿಗಳು ಮಾತ್ರವಲ್ಲ ಮನುಷ್ಯ ಪ್ರಾಣಿಗಳೂ ಅಹುದು; ವಧೆಯೊಂದೆ ಹಿಂಸೆಯುಷ್ಟೆ ಅಲ್ಲ, ಮಾನಸಿಕ ನೋವೂ ಅಹುದು—ಎಂಬ ತಿಳುವಳಿಕೆಯಿಂದಲೆ "ದಯೆಯೆ ಧರ್ಮದ ಮೂಲವಯ್ಯಾ" ಎಂದು ಸಾರಿದರು ಬಸವಣ್ಣನವರು. ಹಿಂಸೆಗೆ ಅಷ್ಟಾಂಗ ಮದದ ವಿವಿಧ ರೂಪಗಳಾದ ಅಧಿಕಾರ—ದರ್ಪ—ಅಹಂಕಾರಗಳೆ ಕಾರಣಗಳು, ವಿಪ್ರ ಮೊದಲಾಗಿ ಅಂತ್ಯಜ ಕಡೆಯಾದ ವರ್ಣ ಭೇದಕ್ಕೆ ಕುಲಮದವೆ ಕಾರಣ; ಸ್ತ್ರೀ ಪುರುಷರೆಂಬ ಲಿಂಗ ಭೇದಕ್ಕೆ ಬಲಮದವೆ ಕಾರಣ— ಎಂದು ಬಗೆದು ಈ ಭೇದ ಭೂತಗಳ ಉಚ್ಚಾಟನಕ್ಕೆ ಕೈ ಹಾಕಿದರು ಬಸವಣ್ಣನವರು. ಹಿಂಸೆಗೆ ಆಶ್ರಯಸ್ಥಾನಗಳಾದ 'ಅರ್ಥ ಪ್ರಾಣಾಭಿಮಾನ' ಗಳನ್ನು ಗುರು ಲಿಂಗ ಜಂಗಮಕ್ಕೆ—ಎಂದರೆ ನೆರೆಹೊರೆಯವರಿಗೆ, ಅರ್ಥಾತ್ ಸಮಾಜಕ್ಕೆ—ಸಮರ್ಪಿಸಬೇಕೆಂದು ಸಾರಿದರು. ಬಸವಣ್ಣನವರು 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದು ನುಡಿದು ಅದರಂತೆಯೆ ನಡೆದು ಭಕ್ತಿ—ಕೈಂಕರ್ಯಗಳ ಅವಶ್ಯಕತೆ ಸಮಾಜ ಸ್ವಾಸ್ಥ್ಯಕ್ಕೆ ಬಹಳ ಇದೆಯೆಂಬುದನ್ನು ಚಿತ್ರಿಸಿದರು ಬಸವಣ್ಣನವರು.

'ಕಾಯಕವೇ ಕೈಲಾಸ'ವೆಂಬ ಬಸವಣ್ಣನವರ ವಚನ ಸಾರಾಯವನ್ನು ಒಂದು ಮಾತೆಂದು ಹೇಳಬಹುದೇ? ವಿಚಾರವರರಿಗೆ ಎಷ್ಟೊಂದು ತತ್ವಗಳು ಹುದುಗಿವೆ ಅದರಲ್ಲಿ! ಕಾಯಕವನ್ನು ಅಂಗೀಕರಿಸಿದವರಿಗೆ ಪಿತ್ರಾರ್ಜಿತದ ಹಂಗಿಲ್ಲ; ಒಡಲೊಡವೆಯವರಕ್ಕಾಗಲಿ, ಮಡದಿ ಮಕ್ಕಳಿಗಾಗಲಿ, ಇಂದಿಂಗೆಂತು ನಾಳಿಂಗೆಂತೆಂದು ಕುದಿ ಕುದಿದು ಕೋಟಲೆಗೊಳ್ಳುವ ಕಾರಣವಿಲ್ಲ. ಅಂದಂದಿಂಗೆ ದುಡಿದುದು ಅಂದಂದಿಂಗೆ ಮಾತ್ರ ಬಳಸಲು ಯೋಗ್ಯ, ಉಳಿದರೆ ಮರುದಿವಸಕ್ಕೆ ತಂಗುಳವೆಂದ ಮೇಲೆ ಆಸ್ತಿ ಸೊತ್ತುಗಳ ಮಾತೆಲ್ಲಿ? ಕಾಯಕದಿಂದಲೆ ದುಡಿದುಣಬೇಕೆಂದಮೇಲೆ ಬೌದ್ಧಿಕ ಶ್ರಮಕ್ಕೆ ಆರ್ಥಿಕ ಫಲಾಪೇಕ್ಷೆ ಬಿಕ್ಕೆಯಾಗಿ ಪರಿಣಮಿಸುವುದಿಲ್ಲವೇ? ಹೀಗೆ ವಿವರಿಸುತ್ತ ಹೋದರೆ ಚಿಕ್ಕದೊಂದು ಹೊತ್ತಗೆಯಾಗಬಹುದು. ಅಂತೂ, ಕುಲ—ವಿದ್ಯಾ—ಧನಗಳಿಂದ ಸಮಾಜದಲ್ಲಿ ಉಂಟಾಗುವ ಬಗೆಬಗೆಯ ವಿಷವೃತ್ತಿಗಳ ಮೂಲಕ್ಕೆ ಕುಠಾರ ರೂಪವಾಗಿರುವುದು ಈ ಕಾಯಕ ತತ್ವ.

ಬಸವಣ್ಣನವರು ಪ್ರತಿಪಾದಿಸಿದ ತತ್ವಗಳಿಗೆಲ್ಲ ಈಗಿನ ಪಾಶ್ಚಾತ್ಯ ರಾಜಕೀಯ ಪಾರಿಭಾಷಿಕ ವೇಷವನ್ನು ತೊಡಿಸಿ, ಇದು ಸಾಮ್ಯವಾದ, ಇದು ಸಮತಾವಾದ, ಎಂದು ಮುಂತಾಗಿ ಹೇಳಬಹುದಾದರೂ, ಪಾಶ್ಚಾತ್ಯ ತತ್ವಗಳಿಗೆ ಧಾರ್ಮಿಕ ಹಿನ್ನೆಲೆ ಇರದೆ ರಾಜಕೀಯ ಇಲ್ಲವೆ ಆರ್ಥಿಕ ಮುನ್ನೆಲೆಯೆ ಇದೆ ಎಂಬುದನ್ನು ನೆನಪಿನಲ್ಲಿಡತಕ್ಕುದಾಗಿದೆ.

ಈ ಚಿಕ್ಕ ಪುಸ್ತಕಕ್ಕೆ ಸ್ವಲ್ಪ ದೊಡ್ಡವಾದ ಈ ಮುನ್ನುಡಿಯನ್ನು ಬರೆಯಲು ಕಾರಣವೆಂದರೆ ಇದರಲ್ಲಿ ಶ್ರೀ 'ಚಿಂತಾಮಣಿ'ಯವರು ಇಟ್ಟುಕೊಂಡಿರುವ ದೃಷ್ಟಿಕೋನ ಬಹ್ವಂಶದಿಂದ ಹೊಸತು. ಇದು ಜನರಲ್ಲಿ ಹೆಚ್ಚಾಗಿ ಪ್ರಚಾರವಾಗುವುದು ಅವಶ್ಯವಿದೆ. ಯುಗಪ್ರವರ್ತಕರ ಮಾಲಿಕೆಯಲ್ಲಿ ಬಸವಣ್ಣನವರೂ ಸೇರತಕ್ಕವರಾಗಿದ್ದಾರೆಂಬ ನೋಟದಿಂದ ಈ ಗ್ರಂಥವನ್ನು ಸ್ವಾರಸ್ಯವಾಗಿ ಬರೆದುದಕ್ಕೆ ಶ್ರೀ 'ಚಿಂತಾಮಣಿ'ಯರಿಗೆ ನನ್ನ ಹೃತ್-ಪೂರ್ವಕ ಅಭಿನಂದನೆಗಳು.

**ಶಿ. ಶಿ. ಬಸವನಾಳ.**

# ನನ್ನ ನುಡಿ

ಬರೆಯುವದೇ ನನ್ನ ಉದ್ಯೋಗವಲ್ಲದಿದ್ದರೂ ಉದ್ಯೋಗ ಬಿಟ್ಟು ಬರೆಯುವ ಈ ಕಾಯಕದಲ್ಲಿ ಒಂದು ಯತ್ನವಿದೆ. ಜಗದಂತರ್ಯಾವನರಿವ ಜಿಜ್ಞಾಸು ತನ್ನ ತಾನರಿವ ಪ್ರಯತ್ನದಂತೆ ಕನ್ನಡಿಗನಾಗಿ ಮಾನವೀಯ ಗುರಿ–ನಿರಿಯ ಕಡೆಗೆ ನೋಡ ಬಯಸುವಾಗ ಕನ್ನಡದ ಕುಲಗುರುವಾದ ಮಹಾತ್ಮಾಬಸವಣ್ಣನವರನ್ನು ಬಹುವಿಧದಿಂದ ಕಾಣುವ ಪ್ರಯತ್ನದ ಫಲವೇ ಈ ಕಿರಿ ಹೊತ್ತಿಗೆ. ಜಗದ ಜಾಣರ ವಿಚಾರರೂಪೀ ತುಂತುರ್ವನಿಗಳ ಮಧ್ಯ ತೂರಿಬರುವ ಬಸವಸೂರ್ಯನ ಕಿರಣಗಳಿಂದ ಮೂಡಿದ ಕಾಮನ ಬಿಲ್ಲಿನ ಸಪ್ತ ವರ್ಣಗಳ ವರ್ಣನೆಯನ್ನು ಈ ಹೊತ್ತಿಗೆಯಲ್ಲಿನ ಏಳು ನಿಬಂಧಗಳಲ್ಲಿ ತರುವ ಯತ್ನವಿದೆ. ಕಾಮನಬಿಲ್ಲಿನ ಬಣ್ಣಗಳ ಅಸ್ಪಷ್ಟತೆಯ ರೀತಿಯೇ ನನ್ನ ಈ ನಿಬಂಧಗಳಲ್ಲಿ ಕೆಲಮಟ್ಟಿಗೆ ಬಂದಿದೆ ಎನ್ನಿಸಿದರೆ ಸಿದ್ಧಹಸ್ತಸಾಹಿತಿ ನಾನಲ್ಲದ್ದು ಕಾರಣವಿರಬಹುದು. ಸೂತ್ರರೂಪದಲ್ಲಿ ಹೇಳಬಯಸಿದ ಬಸವಣ್ಣನವರ ವಿವಿಧ ದರ್ಶನದ ವಿಷಯನಿರೂಪಣೆಯಲ್ಲಿ ಪ್ರಾಮಾಣಿಕ ಪ್ರಯತ್ನ ನನ್ನದು; ಪರಿಣಾಮವು ಪ್ರತಿಫಲವೀಯುವ ಜನತಾ ಜನಾರ್ದನನದು.

ಸ್ವಯಂ ವೇದ್ಯವಿಷಯವಿದ್ದರೂ ವಿಷಯಪ್ರತಿಪಾದನೆ ಹೊಸಹಾದಿಯ ದಿದ್ದರೆ ಪ್ರಥಮತಃ ಬೆಚ್ಚಿಬೀಳುವವರನೇಕರಿರಬಹುದು. ಸತ್ಯದ ಆಭಾಸದ ಮೇಲೆಯೇ ಕಾಲೂರಿ ನಿಲ್ಲುವ ರೂಢಿಯಿದ್ದ ಲಲಿತ ಸಾಹಿತ್ಯಕಾರರು. ಈ ಹೊಸಹಾದಿಯೂ ಕೂಡ ಸತ್ಯಾ–ಭಾಸದ್ದೇ ಎಂದು ತಿಳಿಯುವ ತಪ್ಪುಮಾಡುವ ಸಂಭವವಿಲ್ಲದಿಲ್ಲ. ಬಸವಣ್ಣನವರ ದೃಷ್ಟಿಯಲ್ಲಿ ಸಮಾಜವಾದ ವನ್ನೆಳೆಯು ವಂತೆ, ಸಮಾಜವಾದದ ದೃಷ್ಟಿಯಲ್ಲಿಯೂ ಅವರನ್ನು ತಂದರೆ ತಪ್ಪಲ್ಲ. ಒಪ್ಪು ವಂತಾಗಬೇಕಿಷ್ಟೇ! ಪರಡಿಗಳ ಅದಲು ಬದಲಾಗುತ್ತಲೇ ತೂಕ ತಪ್ಪಬಾರ ದಲ್ಲವೇ? ಸಮಾಜವಾದದ ಆದರ್ಶದ ದೃಷ್ಟಿಯಲ್ಲಿಯೂ ಬಸವಣ್ಣನವರು ಎಷ್ಟು ಎದ್ದು ಕಾಣುತ್ತಾರೆಂಬದನ್ನು ಈ ಚಿಕ್ಕ ಹೊತ್ತಿಗೆಯಲ್ಲಿ ತೋರಿಸು ವದಿದೆ. ಇದೇ ಬಗೆಯ ಪ್ರಯತ್ನ ಭಗವದ್ಗೀತೆಯ ಶ್ರೀಕೃಷ್ಣನ ವಿಚಾರ

ವಾಗಿಯೂ ಅನೇಕರಿಂದ ಮಾಡಲಾಗಿದೆ. ಆದರೆ ಸಮಾಜವಾದದ ದೃಷ್ಟಿಯಲ್ಲಿ ಗೀತೆಯನ್ನು ಕಾಣುವಾಗ ಮಹಾತ್ಮಾ ಗಾಂಧೀಜಿಯಂತಹರನ್ನು ಬಿಟ್ಟರೆ ದಾರಿಯಲ್ಲಿ ಮುಗ್ಗರಿಸಿದವರೇ ಹೆಚ್ಚು. ಶ್ರೀ ಕೃಷ್ಣನ ದೃಷ್ಟಿಯಲ್ಲಿ ಸಮಾಜ ಧರ್ಮವನ್ನು ಹೇಗೂ ಅಳಿದು ಸಮಂಜಸತೆಗೆ ನಿಲುಕಿದರೂ, ಸಮಾಜವಾದದ ದೃಷ್ಟಿಯಿಂದ ಕಾಣುವಾಗ ಮಾತ್ರ ಶ್ರದ್ಧೆಗೆ ಕೈಯಾರಿ (ಫಾಸಿಸ್ಟ) ಸರ್ವಾಧಿ ಕಾರಿಗಳ ಮಾಲೆಯಲ್ಲಿ ಅವನನ್ನು ನಿಲ್ಲಿಸಿಬಿಡುವ ಭಯವೇ ಹೆಚ್ಚು. ಇಲ್ಲಿ ಬಸವಣ್ಣನವರ ವಿಚಾರ ಹಾಗಿಲ್ಲವೆಂಬದನ್ನು ಯಾರೂ, ಮನಗಾಣಬಹುದು.

ಕೊನೆಯ ನಿಬಂಧದಲ್ಲಿ ಇಂದಿನ ಕರ್ನಾಟಕದ ರಾಜಕೀಯ ಜೀವನದ ಕಡೆಗೆ ಹೊರಳಿದ ಕಾರಣವೆಂದರೆ ಯಾವದೇಶದ್ದೋ ಬಾಡಿಗೆಯ ವಿಚಾರ ಗಳಿಂದ ನಮ್ಮ ನಾಡಿನ ಸ್ಥಿತಿಗತಿಗಳನ್ನಳೆಯುವದಕ್ಕಿಂತ ಒಂದುಕಾಲಕ್ಕೆ ಇಂದಿನಂತೆಯೇ ಗಂಡಾಂತರದಲ್ಲಿದ್ದ ಮಾನವತೆಗೆ ಒಳ್ಳೆಯ ಮಾರ್ಗತೋರಿದ ಕ್ರಾಂತಿ ತಂತ್ರವು ಹೇಗೆ ಇಂದಿನ ತೊಡಕಿಗೆ ದಾರಿತೋರಿಸಬಹುದೆಂಬದನ್ನು ನೋಡಿಕೊಳ್ಳುವದಾಗಿದೆ. ಇಂದಿನವರೆಗೂ "ಅನುಲ್ಲೇಖ" ದ ಶಸ್ತ್ರವನ್ನು ಬಸವಣ್ಣನವರಮೇಲೆ ಪ್ರಯೋಗಿಸಿದ್ದರೂ ಆ ಶಸ್ತ್ರವೇ ಜಂಗು ತಿಂದಿದೆಯಲ್ಲದೇ ಆ ಮಹಾ ಆತ್ಮಕ್ಕೆ ಕಚ್ಚುಕೂಡ ಬಿದ್ದಿಲ್ಲ. ಕ್ರಿ. ಶ. ೧೧೫೦ ರಿಂದ ೧೯೫೦ ರ ವರೆಗೆಂದರೆ ೮೦೦ ವರ್ಷಗಳ ಸುದೀರ್ಘ ಅವಧಿ ಸಂದಿದ್ದರೂ ರಾಷ್ಟ್ರದ ಆಯುಷ್ಯದಲ್ಲಿ ತಿರುಗಿಬರುವ ಇತಿಹಾಸ ಮತ್ತೆ ಮತ್ತೆ ಬರಲು ಸಾಧ್ಯವಿರು ವದಿಲ್ಲ. ಇನ್ನು ಆರುವರುಷಕ್ಕೆ ತುಂಬುವ ಆ ಮುಹೂರ್ತವಾದರೂ ಕನ್ನಡಿ ಗನ ಶುದ್ಧ ಜೀವನದ ಸುಮುಹೂರ್ತವಾಗಬೇಕು ಎಂಬ ಹಿರಿಯಾಸೆ ನನ್ನನ್ನೀ ಸಾಹಸಕ್ಕೆ ಪ್ರೇರಿಸಿರಬೇಕೆಂದು ಹೊರಟಿದ್ದೇನೆ. ಆ ಹಿರಿಯಾಸೆಯನ್ನು ವ್ಯಕ್ತಗೊಳಿಸುವ ಕಾರ್ಯ ನನ್ನಂತಹ ಚಿಕ್ಕವನ ಪ್ರಯತ್ನದಿಂದ ಎಷ್ಟು ಸಾಧಿಸಿದೆಯೋ ಆ ಮಾತು ಬೇರೆ.

ಪ್ರಯತ್ನ ನನ್ನದೆಂದು ಹೇಳುವಾಗ ಅದಕ್ಕನುವು ಮಾಡಿಕೊಟ್ಟ ಹಿರಿಯರ ಹಾಗೂ ಗೆಳೆಯರ ನೆರವು ಮರೆಯಲುಂಟೇ? ಸಾಹಿತ್ಯ ಸಹಾಯ ದಿಂದ ಮೊದಲುಗೊಂಡು ಧನಸಹಾಯದವರೆಗೂ ನೆರವುನೀಡಿದವರ ಉಪಕಾರ ನೆನೆಯದೇ ನಡೆಯಲಾರದವನಾಗಿದ್ದೇನೆ. ಈ ಚಿಕ್ಕ ಪುಸ್ತಕದಲ್ಲಿ ಪ್ರಕಟವಾದ

ಏಳು ನಿಬಂಧಗಳಲ್ಲಿ ಮೊದಲಿನದು ಕವಿಭೂಷಣ ಕೃಷ್ಣಶರ್ಮರ ಸಂಪಾದಕತ್ವದಲ್ಲಿ ಹೊರಡುತ್ತಿರುವ "ಜಯಂತಿ"ಯಲ್ಲಿ ಪ್ರಕಟವಾದುದು. ಮುಂದಿನ ನಾಲ್ಕು ಪ್ರೊ. ಬಸವನಾಳರ ಸಂಪಾದಕತ್ವದಲ್ಲಿ ಹೊರಡುತ್ತಿರುವ "ಜಯ ಕರ್ನಾಟಕ"ದಲ್ಲಿ ಪ್ರಕಟವಾದವುಗಳು. ಮುಂದಿನ ಎರಡು ಹಿಂದಿನಿಂದ ಬರೆದವುಗಳು. ಅವುಗಳನ್ನು ತೆಗೆದುಕೊಂಡುದಕ್ಕಾಗಿ ಮಾನ್ಯ ಸಂಪಾದಕದ್ವಯರಿಗೆ ನಾನು ಆಭಾರಿಯಾಗಿದ್ದೇನೆ. ಮೇಲಿಂದ ಮೇಲೆ ಚರ್ಚೆಮಾಡುತ್ತ ತೊಂದರೆ ಕೊಟ್ಟುದನ್ನು ಸಹಿಸಿಕೊಂಡು ತಮ್ಮ ಅಮೌಲ್ಯವಾದ ಸಲಹೆ ಸೂಚನೆಗಳನ್ನಿತ್ತದ್ದಲ್ಲದೇ ವಿದ್ವತ್ಪೂರ್ಣ ಮುನ್ನುಡಿಯೊಂದನ್ನು ಬರೆದು ನನ್ನ ಚಿಕ್ಕ ಕೃತಿಯನ್ನು ಶಿಂಗರಿಸಿದ್ದಕ್ಕೆ ಶ್ರೀಮಾನ್ ಶಿ. ಶಿ. ಬಸವನಾಳ ಅವರಿಗೆ ನಾನು ಚಿರಋಣಿ.

ಪ್ರಕಟನೆಯ ಕಾರ್ಯಕ್ಕೆ ಮುಂದೆ ಬಂದ ಜೀವನಪುಸ್ತಕಾಲಯದೊಡೆಯರೊಂದಿಗೆ, ಹಲವುರೀತಿಯಿಂದ ನೆರವನಿತ್ತ ನನ್ನ ಜೀವದಗೆಳೆಯರಿಗೆ ಧನ್ಯವಾದಗಳನ್ನರ್ಪಿಸುತ್ತಿದ್ದಂತೆಯೇ, ನನ್ನ ಕಾರ್ಯದಲ್ಲಿ ಬಿಡುವುಮಾಡಿಕೊಟ್ಟ ವ್ಯವಸಾಯ ಬಂಧುಗಳಿಬ್ಬರಿಗೂ ಹಾರ್ದಿಕ ಅಭಿವಂದನೆಗಳನ್ನು ಅರ್ಪಿಸುತ್ತೇನೆ.

ಬಸವಜಯಂತಿ }
೧೯೪೪ }

"ಚಿಂತಾಮಣಿ"

# ಮಹಾತ್ಮ ಬಸವಣ್ಣನವರ ಮಾನವತಾವಾದ

---

'ಜೀವನದ ಕಲ್ಪನೆಯಿಲ್ಲದೆ, ಸಾಯುವುದಕ್ಕಾಗಿಯೇ ಹುಟ್ಟಿದವರೆಂಬ ಅಂಧಕಲ್ಪನೆಯ ಕತ್ತಲೆಯಲ್ಲಿ ದಾರಿಗಾಣದೆ ತೊಳಲುತ್ತಿರುವ ಬಹುಜನ ಸಮಾಜವನ್ನು ದಾರಿಗೆ ತರುವುದಕ್ಕಾಗಿ, ಮಹಾತ್ಮರಾಗಿಯೇ ಹುಟ್ಟಿ ಮಹಾತ್ಮರಾಗಿಯೇ ಬೆಳೆದು ಮಹಾತ್ಮರಾಗಿಯೇ ಉಳಿದ ಮಹದ್ವಿಭೂತಿಗಳಲ್ಲಿ ಬಸವಣ್ಣನವರು ಅಗ್ರಗಣ್ಯರು. ಅವರ ಬಗ್ಗೆ ಅಭಿಮಾನಪಡುವವರು ಧರ್ಮ ಸಂಸ್ಥಾಪಕರೆಂದು ಪೂಜಿಸಲಿ, ಅವರ ತೋರಿಸುವವರು ಕನ್ನಡದ ಇತಿಹಾಸದ ಕಾರಣಪುರುಷರೆಂದು ಹೆಮ್ಮೆಪಡಲಿ; ನಿಜವಾದ ಬಸವಣ್ಣನವರನ್ನು ಗುರುತಿಸಿದವರು ಮಾತ್ರ ಅವರನ್ನು ಕನ್ನಡ ಕುಲದ ಕ್ರಾಂತಿಪುರುಷರೆಂದೇ ಹೇಳಬೇಕು. ಸತ್ಯದ ಸಂಸ್ಕಾರವಿಲ್ಲದ ಇತಿಹಾಸವು, ಅವರನ್ನು ಬಚ್ಚಿಡುವುದಕ್ಕಾಗಿ ಬೇಕಾದಂತೆ ಪ್ರಯತ್ನಿಸಿರಲಿ. ಕೋಳಿಯನ್ನು ಬಚ್ಚಿಟ್ಟರೆ ಬೆಳಗಾಗದಿರುವುದೆ? ಇತಿಹಾಸವು ಬಸವಣ್ಣನವರನ್ನು ಮತಾಚಾರ್ಯರ ಬಣ್ಣ ಬಳಿದು ಎಷ್ಟೇ ಮುಚ್ಚಿಟ್ಟಿರಲಿ, ಅವರ ಕರ್ಮದ ರೀತಿ, ಅವರ ನಿಜವಾದ ರೂಪವನ್ನು ಖಂಡಿತ ಹೊರಕ್ಕೆ ಹಾಕುತ್ತದೆ. ಮಾನವ ಪ್ರಪಂಚಕ್ಕೆ ನಿತ್ಯ ನೂತನತೆಯನ್ನೂ ಹೊಸ ಚೈತನ್ಯವನ್ನೂ, ಚಿರಯೌವನವನ್ನೂ ತುಂಬುತ್ತಲಿರುವ ಬಸವಣ್ಣನವರ ವಿಚಾರಾವತಾರ ಆಗಾಗ ಲೋಕವಲ್ಲಿ ಆಗುತ್ತದೆ ಆಗ ನಿನ್ನಿನವನೇ ಸೂರ್ಯ, ನಿನ್ನಿನದೇ ಜಗತ್ತು ಎಂದು ನಿರಾಶೆಯ ಉಸಿರನ್ನೆಳೆಯದೆ ಹೊಸ ಹುರುಪಿನಿಂದ ಚಿಲಿ-ಪಿಲಿಗೊಡುವ ಸಜೀವ ಪಕ್ಷಿಗಳಂತೆ, ಜೀವಂತತನದ ಲಕ್ಷಣಗಳುಳ್ಳ ಮಾನವ ಪ್ರಾಣಿಗಳೆಲ್ಲರೂ ಮರ ಮರಳಿ ಬರುತ್ತಲಿದ್ದ ಆ ವಿಚಾರಾವತಾರದ ದರ್ಶನದಿಂದ ಮತ್ತೆ ಮತ್ತೆ ಕರ್ತವ್ಯ ಜಾಗೃತರಾಗುತ್ತಾರೆ.'

ಹದವರಿತು ತತಿನೋಡಿ ಬಿತ್ತುವ ತಜ್ಞ ರೈತನಂತೆ, ಸಮಾಜದಲ್ಲಿ ಕ್ರಾಂತಿಯ ಬೀಜಬಿತ್ತಿದ ಬಸವಣ್ಣನವರು, ತಮ್ಮ ಕಾಲದ ಭಾರತದ ಜೀವನಾಡಿಯನ್ನು ಎಷ್ಟು ಚೆನ್ನಾಗಿ ಅರಿತಿದ್ದರೆಂಬುದು ಅವರ ಕಾರ್ಯವಿವರಣೆಯಿಂದ

ತೋರುವುದು. ೧೨ ನೆಯ ಶತಮಾನದ ಕರ್ನಾಟಕವನ್ನು ನೆನೆದರೆ, ಇಡೀ ಭಾರತದ ಚಿತ್ರವನ್ನು ಕಲ್ಪಿಸಲು ಯಾವ ತೊಂದರೆಯೂ ಇಲ್ಲ. ರಾಜ್ಯ ರಾಜ್ಯಗಳಲ್ಲಿಯ ವೈಮನಸ್ಸುಗಳು, ವೈದಿಕಧರ್ಮದ ಸಾಮ್ರಾಜ್ಯವಾದಕ್ಕೆ ಬೇಸತ್ತ ಜನಜಂಗುಳಿ, ಸ್ವಕೀಯರಿಂದಲೆ- ಬೌದ್ಧ ಜೈನಧರ್ಮಗಳ ರೂಪದಲ್ಲಿ —ಬಂದ ಪ್ರತ್ಯಾಘಾತಗಳು ಇವೆಲ್ಲ ಸೇರಿ ಭಾರತದ ಜನ–ಮನವನ್ನು ದಿಗ್ಭ್ರಮೆಗೊಳಿಸಿಬಿಟ್ಟಿದ್ದುವು. ಇವುಗಳಲ್ಲಿ ಒಂದೊಂದೇ ಕಾರಣಗಳು ಸಮಾಜದ ಕಟ್ಟನ್ನು ಸಡಿಲಿಸಿಬಿಡಲು ಸಾಕಾಗಿರುವಾಗ, ಎಲ್ಲವುಗಳನ್ನೂ ಎದುರಿಸುವ ಶಕ್ತಿ ವೈದಿಕಧರ್ಮಕ್ಕೆ ಹೇಗೆ ಬರಬೇಕು? ಆದರೂ ಧೈರ್ಯದಿಂದ, ಸಿಸ್ತಿನಿಂದ, ಮೊದಲೇ ನಿರ್ಣಯಿಸಿದವರಂತೆ ಅದರ ಹಿಂದೆಹಿಂದೆ ಸರಿಯುತ್ತಲಿತ್ತು. ಅದೇ ಕಾಲವನ್ನೇ ಬಸವಣ್ಣನವರು ಆರಿಸಿಕೊಂಡರು. ನಿರಾಶೆಯ ಮುಸುಕಿನಿಂದ ಮುಚ್ಚಿದ ಸಮಾಜ ಜೀವನವನ್ನು ಕ್ರಾಂತಿಯ ಕೂಗಿನ ಝಂಜಾವಾತದಿಂದ ಬಡಿದೆಬ್ಬಿಸಿದರು. ಅಂಧತಮಸ್ಸಿನಲ್ಲಿ ಮುಳುಗಿದ ಮಾನವತೆಗೆ ಬೆಳಕನ್ನು ತೋರಿಸಿದರು. ಭಾರತ ಸಂಸ್ಕೃತಿಯನ್ನು ಮತ್ತೆ ಬೆಳಗಿಸಲು ಯತ್ನಿಸಿದರು. ಎಲ್ಲ ವಾದ (ಇಝಂ) ಗಳನ್ನೂ ಮೀರಿ ನಿಲ್ಲುವ ಮಾನವತಾವಾದವನ್ನು ಸ್ಥಾಪಿಸಲು ಮನಸ್ಸು ಮಾಡಿದರು; ಎಂದಿನಿಂದಲೂ ನಡೆದುಬಂದ ವಿಗ್ರಹದ ವರ್ಗಗಳನ್ನೇ ಸ್ವಗ್ರಹದ ವರ್ಗಗಳನ್ನಾಗಿ ಮಾರ್ಪಡಿಸಿದರು. ಸಾಮ್ರಾಜ್ಯವಾದದ ಸಂಗಡ ಹೋರಾಡಿ ದೊರಕಿಸಿದ ಸ್ವರಾಜ್ಯವನ್ನೇ ಸುರಾಜ್ಯವನ್ನಾಗಿ ಮಾಡಲು ಯತ್ನಿಸಿದರು. ಕಾಲದ ಹಿಂದಿನ ಕಾಣದ ಕೈಯ ಪ್ರಭಾವದಿಂದ ಆ ಸುರಾಜ್ಯದ ಸ್ಪಷ್ಟ ದರುಶನ ನಮಗೆ ಇಲ್ಲದಿದ್ದರೂ, ಇಂದಿನ ಜೀವನದ ಮೇಲಿನ ಅದರ ಪ್ರಭಾವವು ಸಣ್ಣದಲ್ಲ. ಹೇಡಿ ಸಾಮ್ರಾಜ್ಯವಾದದ ಯಶಸ್ವಿ ಹಿನ್ನಡೆಗಿಂತ ಶೂರ ಮಾನವತಾವಾದದ ಅಯಶಸ್ವಿ ಪ್ರತಿಧಾಳಿಯು ಹೆಚ್ಚು ಪ್ರಭಾವಯುಕ್ತವಾದದ್ದಲ್ಲವೆ?

ಅತಿ ಪ್ರಾಚೀನ ಕಾಲದಿಂದ ಅತ್ಯಾಧುನಿಕ ಕಾಲದವರೆಗೆ ಮಾನವ ಜನಾಂಗದ ಇತಿಹಾಸವು ಅರ್ಥಾತ್ ಗತಿಯುಕ್ತ ಸಮಾಜದ ಪ್ರಗತಿಯು, ವರ್ಗವಿಗ್ರಹದ ಮೇಲೆ ನಿಂತಿದೆಯಾಗಿ ಅನೇಕರು ಅಭಿಪ್ರಾಯಪಡುತ್ತಿದ್ದಾರೆ. ಆರ್ಯ-ಅನಾರ್ಯರ ವರ್ಗ ಕಲಹದಿಂದ ಹಿಡಿದು ಇಂದಿನ ಕರಿ-ಬಿಳಿ ಜನಾಂಗಗಳ ಕಲಹದವರೆಗೂ ಅದೇ ಮಾರ್ಗವನ್ನು ಎತ್ತಿ ತೋರಿಸುತ್ತ ಸಾಧಾರವಾಗಿ

ಸಿದ್ಧಗೊಳಿಸುತ್ತಲಿದ್ದಾರೆ. ಇದೇ ಆಧಾರದ ಮೇಲೆಯೇ ಬಸವಣ್ಣನವರು ಸಮತಾವಾದವನ್ನು ಸ್ಥಾಪಿಸಲು ಯತ್ನಿಸಿದಂತ ಭಾರತದ ಸಮತಾವಾದಿಗಳಲ್ಲಿ ಅಭಿಪ್ರಾಯವಾಗುತ್ತಿರುವಂತಿದೆ. ಕಂಸ, ರಾವಣಾದಿಂತಹ ಸರ್ವತಂತ್ರ ಸ್ವೇಚ್ಛಾಧಿಕಾರಿಗಳನ್ನು ನಿರ್ಮೂಲಗೊಳಿಸಿ ಸಾಮ್ರಾಜ್ಯವಾದವನ್ನು ಸ್ಥಾಪಿಸಿದ ಕೃಷ್ಣ-ರಾಮರ ಕಾಲದಿಂದಲೂ, ಭಾರತದಲ್ಲಿ ಸಾಮ್ರಾಜ್ಯವಾದದ ಹಿಡಿತ ಕಡಿಮೆಯಾಗಿಲ್ಲವೆಂದು ವಾದಿಸುವವರಿಗೆ ಕೊರತೆಯಿಲ್ಲ. ಪರಿಸ್ಥಿತಿಯ ಪ್ರಭಾವದಿಂದಾಗಲಿ, ಅನಿವಾರ್ಯವಾದ ಅವಶ್ಯಕತೆಯಿಂದಾಗಲಿ, ಜಾಗತಿಕ ಇತಿಹಾಸದಲ್ಲಿಯ ಸಾಮಾಜಿಕ ಸ್ಥಿತ್ಯಂತರ ಕ್ರಮಕ್ಕನುಸರಿಸಿ—ಭಾರತವು ಸಾಮ್ರಾಜ್ಯವಾದದ ಮುಂದಿನ ಮೆಟ್ಟಿಲಾದ ಸಮತಾವಾದಕ್ಕೆ ಬರಲೇಬೇಕೆಂಬುವರು ಅನೇಕರಿದ್ದಾರೆ. ಅವರು ಕೂಡ ತಮ್ಮ ಬೆಂಬಲಕ್ಕೆ ಮಹಾತ್ಮಾ ಬಸವಣ್ಣನವರು ಹಿಂದೆಯೇ ಮಾಡಿದ ಕ್ರಾಂತಿಯನ್ನು ಎತ್ತಿ ತೋರಿಸುವರು. (ಇತಿಹಾಸದ ಪುನರಾವೃತ್ತಿಯೇನೋ ಎನ್ನುವಂತೆ ಇಂದಿನ ಬ್ರಾಹ್ಮಣ-ಲಿಂಗಾಯತ ಕಲಹದಲ್ಲಿಯ ಜಾತೀಯತೆಯ ದುರ್ಗಂಧವನ್ನು ತೆಗೆದೊಗೆದರೆ, ಶುದ್ಧ ಸಮತಾವಾದವೇ ದೃಷ್ಟಿಗೋಚರವಾಗುವುದಾಗಿ ಅವರು ತೋರಿಸುವರು. ಆದರೆ ಈ ಬಗೆಯ ಸಮತಾವಾದಿಗಳ ಹಾಗೂ ಬಸವಣ್ಣನವರ ಧ್ಯೇಯವೇನೋ ಒಂದೇ ಇದ್ದಂತಿದ್ದರೂ, ಧೋರಣದಲ್ಲಿ ಹೆಚ್ಚು ಅಂತರವಿದೆ. ಅಂತೆಯೇ ಭಾರತದ ಜೀವನಾಡಿಯ ಸಂಸ್ಕೃತಿಯ ಸ್ಪಷ್ಟ ದರ್ಶನವಿಲ್ಲದವರು, ರಶಿಯಾದಂತಹ ಸಮತಾವಾದವೇ ಭಾರತಕ್ಕೂ ಅವಶ್ಯವೆಂದು ಹೇಳುತ್ತಿದ್ದಾರೆ. ಅವರಲ್ಲಿಯೇ ಕೆಲವು ಜನ ಬುದ್ಧಿವಂತರು, ಅಷ್ಟು ಸ್ಪಷ್ಟವಿಲ್ಲದೆ ಹೋದರೂ ಭಾರತದಲ್ಲಿ ಬರುವ ಸಮತಾವಾದವು ರಶಿಯದ್ದಿರದೆ ಶುದ್ಧ ಸಮತಾವಾದವಾಗಿರುತ್ತದಾಗಿ ಹೇಳುತ್ತಿರುವುದನ್ನು ಕಾಣಬಹುದು.

ಇಂದಿನ ಸಮತಾವಾದಿಗಳ ಧ್ಯೇಯದ ಸಾಧನೆಯೊಂದರ "ವರ್ಗ ಕಲಹ" ಅದರ ಪರಿಣಾಮವನ್ನು ಕೂಡ ಅವರು ಬಸವಣ್ಣನವರಿಗಿಂತ ಬೇರೆಯಾಗಿಯೇ ಅಪೇಕ್ಷಿಸುತ್ತಾರೆ. ಧನವಂತರು ಹಾಗೂ ದರಿದ್ರರ ಕಲಹದಲ್ಲಿ ಧನವಂತರನ್ನು ನಿರ್ನಾಮಮಾಡಿ, ಕೇವಲ ದರಿದ್ರನಾರಾಯಣ ರಾಜ್ಯವನ್ನೇ ಪಡೆಯಬೇಕೆನ್ನುತ್ತಾರೆ. ಅದಕ್ಕಾಗಿ ಅನೇಕ ತರ್ಕಶುದ್ಧ ತತ್ವಗಳನ್ನು ಪ್ರತಿಪಾದಿಸುತ್ತಾರೆ. ತರ್ಕಶುದ್ಧವಿದ್ದದ್ದೆಲ್ಲವೂ, ಕೃತಿಸಿದ್ಧವಾಗಿಯೇ ತೀರುವುದೆಂಬ ನಿಯಮವಿಲ್ಲದ್ದರಿಂದ, ಭಾರತದಲ್ಲಿ ಅವರ ವಾದವು ಮುಗ್ಗರಿಸುತ್ತಿದೆ.

ಧ್ಯೇಯಸಾಧನೆಯ ಆತುರದಲ್ಲಿ ಧನವಂತರನ್ನು ನಿರ್ಮೂಲಗೊಳಿಸಿ, ಅವರ ಬರಿದಾದ ಸ್ಥಾನವನ್ನು ತುಂಬದೆ ಬಿಟ್ಟರೆ, ಆ ಭಯಾನಕ ಡೊಗರಿನಲ್ಲಿ ಇನ್ನೊಂದು ಅದಕ್ಕೂ ಭಯಂಕರವಾದ ಶಕ್ತಿಯು ಸೇರಲಾರದೆಂದು ಹೇಗೆ ಹೇಳಬೇಕು? ರಶಿಯವನ್ನೇ ತೆಗೆದುಕೊಂಡರೆ, ಅಲ್ಲಿಯ ಧನವಂತರನ್ನು ನಿರ್ಮೂಲಗೊಳಿಸಿದೆವೆಂದು ಹೇಳುವ ಸರಕಾರವು, ತಾನೇ ದೊಡ್ಡ ಧನವಂತವಾಗಿ, ತನ್ನನ್ನೆದುರಿಸುವ ಪ್ರತಿಯೊಂದು ಶಕ್ತಿಯನ್ನೂ ನಿರ್ನಾಮಗೊಳಿಸುವುದಕ್ಕಾಗಿ ಕೊಲೆಯಂತಹ ಕ್ರೂರತೆಯನ್ನು ಕೈಕೊಂಡಿದೆಯಲ್ಲ! — ಎಂಬ ಆಕ್ಷೇಪಕ್ಕೆ ಸರಿಯಾದ ಸಮಾಧಾನ ಸಿಕ್ಕಿಲ್ಲ. ಅಂತೆಯೇ ವಿರೋಧ ಶಕ್ತಿಯ ವಿಷಯವಾಗಿ ಅವರ ಧೋರಣಕ್ಕೂ, ಬಸವಣ್ಣನವರ ಧೋರಣಕ್ಕೂ ಅಂತರವಿದೆಯೆಂದು ಹೇಳಿದುದು. ರಾವಣನನ್ನು ಕೊಂದು ವಿಭೀಷಣನನ್ನು ಪಟ್ಟಗಟ್ಟುವುದಕ್ಕಿಂತ, ರಾವಣನನ್ನೇ ವಿಭೀಷಣನನ್ನಾಗಿ ಮಾರ್ಪಡಿಸುವ ಧೋರಣ ಬಸವಣ್ಣನವರದು. ಸಮಾನ ಶಕ್ತಿಯ ಸಹೃದಯಗಳು ಒಂದನ್ನೊಂದು ಅನುಸರಿಸುತ್ತಿರುವುವೇನೋ ಎನ್ನುವಷ್ಟು ಸಾಮ್ಯವನ್ನು ತೋರಿಸುತ್ತಿರುವಂತೆ ಇಂದಿನ ಮಹಾತ್ಮಾ ಗಾಂಧಿಯವರೂ ಅಂದಿನ ಮಹಾತ್ಮಾ ಬಸವಣ್ಣನವರೂ ಒಂದೆಯಾಗಿ ಕಾಣುವುದಕ್ಕೆ, ಈ ಧೋರಣ ಸಾಮ್ಯವೇ ಹೆಚ್ಚು ಕಾರಣವಾಗಿದೆ. ಅಂದಿನ ನಿಜವಾದ ಬಸವಣ್ಣನವರನ್ನು ಕಾಣಬೇಕಾದರೆ ಇಂದಿನಿಂದ ೮—೯ ನೂರು ವರುಷಗಳ ಹಿಂದೆ ಹೋಗಬೇಕಾಗುತ್ತದೆಂಬುದನ್ನು ನೋಡಿದರೆ, ಬರಬಹುದಾದ ತೊಂದರೆಗಳ ಕಲ್ಪನೆ ಬರುವುದು. ಆದಕ್ಕಾಗಿ ಬಸವಣ್ಣನವರ ಪರಿಚಯರೂಪದಲ್ಲಿ ಲಿಪಿಬದ್ಧವಾಗಿ ಉಪಲಬ್ಧವಿರುವ ಅತಿ ಸಮರ್ಥ ಶಕ್ತಿಯ ಅಸಮರ್ಥ ಶಬ್ದಚಿತ್ರಕ್ಕಿಂತ ನೂರಾರು ವರ್ಷಗಳಿಂದ ಪವಾಡಪುರುಷರೆಂದು ಅವರನ್ನು ಪೂಜಿಸುತ್ತ ಕನ್ನಡ ಕುಲಕ್ಕಾಗಿ ಉಳಿಸಿಕೊಂಡು ಬಂದ—ಸಾವಿರಾರು ಜನರ ಜೀವನದ ಕಡೆಗೆ ನೋಡಬೇಕು.

ನಮ್ಮ ತೀರ ಪ್ರಾಚೀನ ಕಾಲದ ಸಮಾಜಜೀವನವನ್ನು ನೋಡುತ್ತ ಬಂದರೆ, ಧರ್ಮ–ರಾಜಕಾರಣಗಳನ್ನು ಬೇರೆ ಬೇರೆ ನೋಡುವವರು ಸಿಕ್ಕುವುದು ಅಪರೂಪ. ಅಂದಿನವರ ಆಡಳಿತ, ಕಟ್ಟಳೆ (ರಾಜ್ಯತಂತ್ರ), ಪರಂಪರೆ, ಅಧಿಕಾರ ಸ್ವದೇಶಭಾವನೆಗಳೆಲ್ಲವೂ ಧರ್ಮದಲ್ಲಿಯೆ ಅಡಕವಾಗಿದ್ದುವು.

ಅಂತೆಯೇ ಅಂದಿನ ಧರ್ಮವೆಂದರೆ ಸಂಕುಚಿತಾರ್ಥದ ರೂಢಧರ್ಮವಾಗಿರಲಿಲ್ಲ. ವಿಶಾಲ ಸಮಾಜದ ವಿಕಾಸಜೀವನದ ಸಾಮಾಜಿಕ ಸುವ್ಯವಸ್ಥೆಯ ತಂತ್ರಕ್ಕೆಯೇ ಧರ್ಮವೆಂದು ಕರೆಯಲಾಗುತ್ತಿತ್ತು. ಇಡಿ ಸಮಾಜದ ಬಿಡಿವ್ಯಕ್ತಿಯ ಎಲ್ಲ ಕರ್ತವ್ಯಗಳಿಗೆಯೂ 'ಸ್ವಧರ್ಮಪಾಲನ' ಎಂದು ಹೇಳಲಾಗುತ್ತಿತ್ತು. ಇದರಿಂದಲೇ ಸರ್ವಸುಖ, ಸಮಭಾವ, ವ್ಯಕ್ತಿವಿಕಾಸಗಳು ಸರಿಯಾಗಿ ಸಾಧಿಸುತ್ತಿದ್ದವು. 'ಹೀಗಿದ್ದರೂ ಬಹುಜನ ಸಮಾಜವು ವೈದಿಕ ಧರ್ಮದ ಸಾಮ್ರಾಜ್ಯವಾದಕ್ಕೆ ಬೇಸತ್ತದ್ದೇಕೆ?'—ಎಂಬ ಪ್ರಶ್ನೆ ಸಹಜವಾಗಿಯೇ ಏಳಬಹುದು. ಉತ್ತರವನ್ನು ಹುಡುಕುವುದಕ್ಕಾಗಿ ಬಸವಣ್ಣನವರ ಕಾಲಕ್ಕಿಂತಲೂ ಹಿಂದೆ ಹೋಗಿ, ಹಿಂದೀ ಸಂಸ್ಕೃತಿಯನ್ನು ನೋಡಬೇಕು. ಅಂದಿನ ಸಂಸ್ಕೃತಿ ಇಂದಿನಂತೆ ನಗರದ್ದಾಗಿರದೆ ಹಳ್ಳಿಯದಾಗಿತ್ತು. ಅರಸು ನಗರಗಳಲ್ಲಿ ರಾಜ್ಯವಾಳುತ್ತಿದ್ದರೂ, ಸಂಸ್ಕೃತಿಯ ಸೂತ್ರ ಮುನಿಪುಂಗವರ ಕೈಗಳಲ್ಲಿತ್ತು. ಅರಸುಗಳ ಪಟ್ಟಾಭಿಷೇಕದ ಕಾಲಕ್ಕೆ "ಇದೋ ಪ್ರಜೆಗಳೇ, ಇವನು ನಿಮ್ಮ ಅರಸು! ನಮ್ಮ ಅರಸು ಸೋಮು!' ಎಂದು ಮುನಿವರ್ಯರು ಹೇಳುತ್ತಿದ್ದರು. ರಾಜ್ಯ ಸೂತ್ರಕ್ಕಿಂತಲೂ ಸಂಸ್ಕೃತಿ ಸೂತ್ರಕ್ಕೆ ಬೆಲೆ ಹೆಚ್ಚಿತ್ತು. ಅದರ ದುರುಪಯೋಗವಾಗುತ್ತ ಬಂದಂತೆ ಆ ಶಕ್ತಿ ಕ್ಷೀಣಿಸುತ್ತಾ ಬಸವಣ್ಣನವರ ಕಾಲದವರೆಗೆ ಎಂದರೆ ರಾಜ್ಯಸೂತ್ರದ ಅಧೀನವಾಗಿ, ಅರಸರ ಆಡಳಿತದ ಕೈಗೊಂಬೆಯಾಗುತ್ತ ನಡೆದಿತ್ತು. ಅಂದಿನಿಂದಲೂ ಜನಸಾಮಾನ್ಯರ ಶ್ರದ್ಧೆ ಅದರ ಮೇಲಿಂದ ಹಾರುತ್ತ ನಡೆಯಿತು. ಅಂದೆಯೆ ಸಮಾಜ ಧರ್ಮದ ಉದಯವಾಯಿತು. ಅಂದಿನ ಸ್ಥಿತಿಗೂ ಇಂದಿನ ಪರಿಸ್ಥಿತಿಗೂ ಸಾಮ್ಯವನ್ನು ಬಹುಮಟ್ಟಿಗೆ ಕಾಣಬಹುದು. ಇಂದಿನಂತೆಯೆ ಅಂದಿನ ಮಹಾತ್ಮಬಸವಣ್ಣನವರು, ಬುದ್ಧ-ಜೈನ ಧರ್ಮಗಳಂತಹ ಪರದಾಳಿಗಳನ್ನು ಎದುರಿಸುತ್ತ, ವೈದಿಕಧರ್ಮದ ಮುಸುಕಿನಲ್ಲಿ ಸಾಮ್ರಾಜ್ಯಶಾಹಿಯ ಬೆಂಬಲವಾಗಿ ನಿಂತ ರೂಢಧರ್ಮವನ್ನು ಎದುರಿಸುವ ಉಭಯ ಸಂಕಟ ಬಂದಿತ್ತು: ಅಂತೆಯೆ ಬಸವಣ್ಣನವರ ಆಂದೋಲನವು, ವೈದಿಕಧರ್ಮದ ವೈರಿಯ ರೂಪದಲ್ಲಿ ಪ್ರಚಾರ ಪಡೆಯಿತು. ರಶಿಯದಲ್ಲಿಯ ಸಮಾಜ ಕ್ರಾಂತಿಯು ಕೂಡ ಧರ್ಮದ ವೈರಿಯೆಂದೇ ಅನೇಕ ರೀತಿಯಲ್ಲಿ ಪ್ರಚಾರ ಹೊಂದಿದೆ. ಝಾರ್ ಶಾಹಿಯ ಬೆಂಬಲವಾಗಿ ಬೆಳೆದು ನಿಂತ ಅಧರ್ಮವು ಧರ್ಮದ ಹೆಸರಿನಿಂದ ನಡೆಯಿಸಿರುವ ಅತ್ಯಾಚಾರವೇ ಅದಕ್ಕೆ ಮೂಲವಾಯಿತಲ್ಲದೆ, ಕೇವಲ ಅದರ

ಮೇಲಿನ ವೈರದಿಂದಲ್ಲವೆಂದು ಅನೇಕ ಸಮತಾವಾದಿಗಳು ಹೇಳುವ ಮಾತನ್ನೇ ತಮ್ಮ ಕ್ರಾಂತಿಯನಂತರ— ತುಸುದಿನಗಳವರೆಗಾದರೂ ಬಸವಣ್ಣನವರು ಬಾಳಿದ್ದರೆ— ಹೇಳಬಹುದಾಗಿತ್ತಲ್ಲವೇ? ಬಸವಣ್ಣನವರು ದುಷ್ಟನಲ್ಲಿಯ ದುಷ್ಟತನವನ್ನು ದ್ವೇಷಿಸುವರಲ್ಲದೆ ವ್ಯಕ್ತಿಯನ್ನಲ್ಲವೆಂಬುದನ್ನು ಮರೆಯಲಾಗದು.

ಇಂದಿನ ಮಹಾತ್ಮಾ ಗಾಂಧಿಯವರು ಕೇಳುವ ಸಮತೆಯ ಬೇಡಿಕೆಗೆ ಸಾಮ್ರಾಜ್ಯಶಾಹಿಯು ಇತ್ತ ಸಮಾಧಾನದಂತೆ, ಬಸವಣ್ಣನವರ ಕಾಲಕ್ಕೂ "ಸರ್ವೇಜನಾಃ ಸುಖಿನೋಭವಂತು" ಎಂಬ ವೈದಿಕಧರ್ಮದ 'ಅಟ್ಲಾಂಟಿಕ್ ಘೋಷಣೆ' ಯು ಸದಾಸಿದ್ಧವಿತ್ತು. ಜಗತ್ತಿನ ಶಾಂತಿಯ ಮಾತಿದ್ದರೂ ಅದು ಅನ್ವಯಿಸುವ ಕ್ರಮವನ್ನು ತಾವೇ ಹೇಳಬೇಕಾಗಿರುವಂತೆ 'ಸರ್ವೇಜನಾಃ ಸುಖಿನೋಭವಂತು' ಘೋಷಣೆಯಲ್ಲಿಯ ಸರ್ವಜನರೆಂದರೆ ಯಾರೆಂಬುದೂ ನಿರ್ಣಯವನ್ನು ಕಾಣದೆ ಇದ್ದಿತು. ನಿಷ್ಠುರ ಸತ್ಯದ ಇಂದಿನ 'ಅಟ್ಲಾಂಟಿಕ್ ಘೋಷಣೆ' ಗೂ ಅಸ್ಪಷ್ಟ ಅಸತ್ಯದ ಆ ಘೋಷಣೆಗೂ ಅಂತರವಿದ್ದರೆ ಕೇವಲ ಶಾಬ್ದಿಕ. ಒಂದು ವೇಳೆ ಆ ಘೋಷಣೆಯೇ ನೂರಕ್ಕೆ ನೂರರಷ್ಟು ನಿಜವಿದ್ದರೆ, ಜನಸಾಮಾನ್ಯರ ಚಿಕಿತ್ಸಕ ದೃಷ್ಟಿಯಲ್ಲಿ ಅಸಾಮಾನ್ಯ ಬಸವಣ್ಣನವರ ದಯದ ಧರ್ಮದ ಪ್ರಚಾರವೇಕೆ ಪ್ರಭಾವಿಯಾಗಬೇಕು?

'ದಯವೇ ಧರ್ಮದ ಮೂಲವಯ್ಯಾ' ಎಂಬುದಾಗಿ ಮಾನವಧರ್ಮದ ಮೂಲವನ್ನೇ ಕಂಡುಹಿಡಿದ ಬಸವಣ್ಣನವರ ತಪಸ್ಸಿದ್ಧಿ ಎಷ್ಟು ಶುದ್ಧವಾಗಿರಬೇಕು? ದಯವು ಹೃದಯದಿಂದ ಬರಬಹುದಲ್ಲದೆ ನ್ಯಾಯದಿಂದಲ್ಲ. ಮಾನವನ ಸುಖ-ದುಃಖಗಳ ನಿರ್ಣಯವು ತರ್ಕದ ನ್ಯಾಯಮಂದಿರದಲ್ಲಲ್ಲ; ಭಾವನೆಯ ಹೃದಯಮಂದಿರದಲ್ಲಿ. ಬಸವಣ್ಣನವರು ಹೃದಯಧರ್ಮದ ತಳಹದಿಯ ಮೇಲೆ ಸ್ವಯಂಪೋಷಿತ ಸ್ವಾವಲಂಬಿ ಸಮಾಜವನ್ನು ಕಟ್ಟಿದ್ದನ್ನು ಕಂಡು, ಅದರ ಅನುಕರಣ ಮಾಡುತ್ತ ತಮ್ಮಲ್ಲಿಯೂ ಅನೇಕ ಸಮಾಜಗಳು ಪರಿವರ್ತನ ಮಾಡಿಕೊಂಡದ್ದನ್ನು ಕಾಣಬಹುದು. ದೂರವೇಕೆ? ಬಸವಣ್ಣನವರ ವಿರೋಧಿಗಳಂತೆಯೆ ಇದ್ದ ವೈದಿಕ ಧರ್ಮಾಭಿಮಾನಿಗಳು ತಮ್ಮಲ್ಲಿಯೆ ವೈದಿಕರು, ಗೃಹಸ್ಥರು ಎಂಬ ಭೇದಮಾಡಿಕೊಂಡು ಸ್ವಯಂಪೋಷಿತ ಸಮಾಜವನ್ನಾಗಿ ಮಾಡಿಕೊಳ್ಳಲು ಯತ್ನಿಸಿಲ್ಲವೆ? ಅದೇನೆ

ಇಂಥ ಜಗತ್ತನ್ನೇ ಮೆಚ್ಚಿಸಬಹುದಾದ ಒಂದು ಅದ್ಭುತಶಕ್ತಿ ಕರ್ನಾಟಕದಲ್ಲಿ ಬೆಳಗಿ ಬಾಳಿದೆಯೆಂದ ಮೇಲೆ, ಕನ್ನಡಕುಲವು ಧನ್ಯವೆಂದೇ ಹೇಳಬೇಕು. ಅನೇಕರು ಹೇಳುವಂತೆ ಇನ್ನುಮುಂದೆ ಜಾಗತಿಕ ಸ್ಥಿತ್ಯಂತರಗಳಿಗೆ ಭಾರತವು ನಾಟ್ಯರಂಗವಾಗುವುದಿದ್ದರೆ, ಕನ್ನಡದ ಕುಲಗುರುವಾದ ಬಸವಣ್ಣನವರ ಪ್ರೇರಣೆಯಿಂದ ಶಕ್ತಿ ಪಡೆದ ಕರ್ನಾಟಕವು ಮುಖ್ಯಪಾತ್ರ ವಹಿಸಬೇಕಾಗಿದೆ ಯೆಂಬುದು ಸ್ವಯಂಸಿದ್ಧವಲ್ಲವೇ ? ಆ ಪಾತ್ರವನ್ನು ಯಶಸ್ವಿಯಾಗಿ ಅಭಿನಯಿಸುವುದಕ್ಕಾಗಿ ಕನ್ನಡಕುಲವು ಇಂದಿನಿಂದಲೇ ಸಿದ್ಧತೆಯನ್ನು ನಡೆಯಿಸುತ್ತಾ, ಮಹಾತ್ಮಾ ಬಸವಣ್ಣನವರ ನಿಜವಾದ ಜೀವನದ ಜ್ಯೋತಿಯನ್ನು ಅರಿತು, ಆಚರಿಸಲಿ !

---

೩

# ಸಫಲ ಜೀವನದ ರಹಸ್ಯ

ಜೀವಿಸುವುದು ಎಲ್ಲ ಪ್ರಾಣಿಗಳ ಸಮಸ್ಯೆಯಲ್ಲ: ತಮ್ಮ ಜೀವನಕ್ಕಾಗಿ ನಿಸರ್ಗವನ್ನೇ ಮೊರೆಹೊಕ್ಕ ಪ್ರಾಣಿಗಳಿಗೆ ಜೀವನ ಅಷ್ಟೊಂದು ತೊಡಕಿನ ಸಮಸ್ಯೆಯಾಗಿಲ್ಲ. ನಿಸರ್ಗದ ಮೇಲೆಯೇ ಪ್ರಭುತ್ವ ಪಡೆಯುವೆನೆಂಬ ಹೆಮ್ಮೆಯುಳ್ಳ ಮಾನವ ಪ್ರಾಣಿಗೆ ಮಾತ್ರ ಜೀವನ ಒಂದು ಸಮಸ್ಯೆಯಾಗಿ ಕುಳಿತಿದೆ. ಅದಕ್ಕಾಗಿ ಮಾನವನು ಪಟ್ಟ ಪಾಡು ಅಷ್ಟಿಷ್ಟಲ್ಲ. ತನ್ನ ಜೀವನಕ್ಕಾಗಿ ಇನ್ನೊಬ್ಬರ ಜೀವನವನ್ನಾಹುತಿಗೊಳ್ಳುವುದರಿಂದ ಹಿಡಿದು ಇನ್ನೊಬ್ಬರಿಗಾಗಿ ತನ್ನ ಜೀವನವನ್ನಾಹುತಿಗೊಡುವವರೆಗೆ ಅವನಲ್ಲಿ ರೀತಿಗಳಿವೆ. ದುರ್ದೈವದಿಂದಲೊ ಸುದೈವದಿಂದಲೊ ಭಾರತಕ್ಕೆ ಕೆಲವೆ ರೀತಿಗಳು ಪರಿಚಯವಿದ್ದುವು. ಭಾರತೀಯನು ತನಗೆ ಇನ್ನುಳಿದ ಜಗತ್ತಿನ ಪರಿಚಯ ಹೆಚ್ಚಾದಂತೆ, ಅಲ್ಲಿಯವರ ರೀತಿ–ನೀತಿಗಳನ್ನು ಕಂಡು ಅಚ್ಚರಿಪಡುತ್ತಿದ್ದಂತೆಯೇ ಎಚ್ಚರತಪ್ಪತೊಡಗಿದನು. ಆ ಎಚ್ಚರ ತಪ್ಪಿದ ಕಾಲವೇ ಅವನ ಹ್ರಾಸದ ಕಾರಣ, ಅಥವಾ ಪ್ರಾರಂಭ. ಅವನಿಗಾವರೆಗೆ ಗೊತ್ತಿದ್ದ ರೀತಿಗಳೆಂದರೆ ತನ್ನ ಮಟ್ಟಿಗೆ ತಾನು ಜೀವಿಸುವುದು, ಅದಕ್ಕೂ ಹೆಚ್ಚೆಂದರೆ ಯಾವನಿಗಾಗಿಯೋ ಪ್ರಾಣನೀಗುವುದು—ಇಷ್ಟುಮಾತ್ರ ಪರಿಚಯವಿದ್ದುವು. ಕೊನೆಯದಾದ ಈಗೀಗ ಪ್ರಪಂಚದಲ್ಲಿ ಪ್ರಚಂಡವಾಗಿ ಬಳಕೆಯಲ್ಲಿದ್ದ ಇನ್ನೊಬ್ಬನ ಮೇಲೆ ಜೀವಿಸುವದೆಂದರೆ (ಎಂದರೇನೇ) ಜೀವನ ಎನ್ನುವ ಕ್ರಮವನ್ನು ಭಾವಜೀವಿ ಭಾರತೀಯನು ಎಷ್ಟೋ ದಿನ ಅರಿತಿರಲಿಲ್ಲ ಕೂಡ. ಈ ಕ್ರಮವು ತನ್ನ ನಾಡಿನಲ್ಲಿಯೇ ಎಷ್ಟೋ ಕಾಲ ನಡಿದಿದ್ದರೂ ಅದರ ಕಡೆಗೆ ಕಣ್ಣೆತ್ತಿ ನೋಡಿರಲಿಲ್ಲ. ಅತ್ತ ಲಕ್ಷ್ಯವನ್ನೆಳೆಯುವುದಕ್ಕಾಗಿ ಅನೇಕ ಪುಣ್ಯಪುರುಷರು ತಮ್ಮ ಪ್ರಾಣವನ್ನು ಪಣಕ್ಕಿಟ್ಟಿದ್ದರೂ ಪರಿವೆ ಇರಲಿಲ್ಲ.

ಅನೇಕ ಸಲ ಭಾರತದ ಜನಜೀವನದಲ್ಲಿ ಜಂಜಡ ಮುಸುಕಿದಾಗ ಎದುರಿಸಿದ ಸಮಸ್ಯೆಗಳ ತೊಡಕನ್ನು ಬಿಡಿಸಿ ಸಫಲ ಜೀವನದ ರಹಸ್ಯವನ್ನು ತೋರಿಸುವುದು ಸುಲಭವಿರಲಿಲ್ಲ. ಅನೇಕರು ಅನೇಕ ಸಲ ಪ್ರಯತ್ನಿಸಿ ಸಫಲರೋ ವಿಫಲರೋ ಆಗಿದ್ದಾರೆ. ತನ್ನ ತಾವರಿತವರು ಕೂಡ ಜೀವನ

ರಹಸ್ಯ (ಮುಕ್ತಿಮಾರ್ಗ) ವನ್ನು ವಿಶ್ವಸಾಹಸಪಟ್ಟು ಜನಜೀವನದಲ್ಲಿಳಿಸಲು ಪ್ರಯತ್ನಪಟ್ಟರೂ, ಆಗ ಸಫಲತೆಯನ್ನು ಪಡೆಯದೆಹೋದರೂ ತಮ್ಮ ಕಾರ್ಯದ ರಹಸ್ಯವನ್ನು ಸಜೀವವಾಗಿಟ್ಟು ತಾವು ಅಸ್ತರಾದರು-ಐಕ್ಯರಾದರು. ಸಂಜೆ ಬರುತ್ತಲೆ ಸೂರ್ಯನೇನೋ ಅಸ್ತನಾಗಬಹುದು: ಉಷಃಕಾಲ ಬರುತ್ತಲೇ ಉದಯಿಸಲೇ ಬೇಕಲ್ಲವೆ? ಅಸ್ತನಾಗುವದೆಂದರೆ ನಾಶನಾಗುವ ದೆಂದರ್ಥವಲ್ಲವಷ್ಟೇ? ಹಳ್ಳ ಹೊಳೆಗಳು ಸಮುದ್ರದಲ್ಲಿ ಅಸ್ತವಾಗುವುವು; ನಾಶವಾಗುವುದಿಲ್ಲ. ಅಲ್ಪದಲ್ಲಿ ಹುಟ್ಟಿ ಅನಂತದಲ್ಲಿ ಲೀನವಾಗುವ ಪುಣ್ಯ ನದಿಗಳ ರೂಪದಲ್ಲಿ ಜೀವನ ಪ್ರವಾಹವನ್ನು ಪಡೆದ ಪುಣ್ಯಾತ್ಮರು ಅನೇಕ ರೀತಿಯಲ್ಲಿ ಜೀವನದ ರೀತಿಯನ್ನು, ರಹಸ್ಯವನ್ನು, ಸಜೀವವಾಗಿ ಇತಿಹಾಸದ ಮಡಿಲಲ್ಲಿ ಮುಂದಿನ ಪೀಳಿಗೆಗಾಗಿ ಕಾಯ್ದಿಟ್ಟು ಹೋಗಿದ್ದಾರೆ. ಅವರಿಟ್ಟ ಇತಿಹಾಸ ರಗಟೆಗಳಿಂದ ಮಾಡಿದ ಪುಸ್ತಕಗಳ ಹಾಳೆಗಳಲ್ಲಿಲ್ಲ; ಭಾರತದ ಜನಜೀವನದಲ್ಲಿದೆ.,

ಜೀವನ ಸಾಫಲ್ಯದ ವಿಚಾರವಾಗಿ ಕಲ್ಪನೆಗಳನ್ನಿತ್ತ ಇತರರಿಗಿಂತಲೂ ಕನ್ನಡದ ಕುಲಗುರುವಾದ ಮಹಾತ್ಮಾ ಬಸವಣ್ಣನವರಿತ್ತ ಕಲ್ಪನೆಯ ವಿಷಯವಾಗಿ ಇಂದು ನಾವು ಹೆಚ್ಚು ಲಕ್ಷ ಕೊಡಬೇಕಾಗಿದೆ. ಅದಕ್ಕಾಗಿ ಅವರ ಸ್ಥಾನಮಾನಗಳನ್ನು ಇನ್ನೂ ಹೆಚ್ಚಾಗಿ ಅರಿತುಕೊಂಡು ಜಗತ್ತಿಗೆ ತಿಳಿಸುವುದು ನಮ್ಮ ಕರ್ತವ್ಯವಾಗಿದೆ. ಹಾಗೆ ತಿಳಿಸಬೇಕಾಗಿದೆ ಎಂದು ಬಸವಣ್ಣನವರನ್ನು ಕರೆತಂದು ಪುಣ್ಯಪುರುಷರ ಪಟ್ಟ ಕಟ್ಟಬೇಕಾಗಿಲ್ಲ ಅಜ್ಞಾನಕ್ಕಿಂತಲೂ ಹೆಚ್ಚಾಗಿ ಕುಜ್ಞಾನದ ಮುಸುಕಿನಲ್ಲಿ ಮರೆಯಾದ ಜನ ಸಾಮಾನ್ಯರನ್ನು ಎಳೆತಂದು ಅವರ ದರ್ಶನ ಮಾಡಿಸಬೇಕಾಗಿದೆ. ಇನ್ನು ಅವರ ವಿಚಾರದ ಕಡೆಗೆ ಹೊರಳೋಣ.

ಜೀವನ ಸಾಫಲ್ಯ (ಮುಕ್ತಿ) ವನ್ನು ಯಾವುದೇ ರೀತಿಯಲ್ಲಿ ಕರೆದರೂ ಅದು ಜೀವನದ ಸಾಧ್ಯವೆಂಬುದು ಸರ್ವಸಮ್ಮತವಷ್ಟೇ? ಆ ಸಾಧ್ಯದ ಸಾಧನೆಯ ವಿಷಯವಾಗಿ ಭಾರತದಲ್ಲಿದ್ದಷ್ಟು ಭಿನ್ನಾಭಿಪ್ರಾಯ ಇನ್ನೆಲ್ಲಿಯೂ ಇದ್ದಂತಿಲ್ಲ. ಈ ಭಿನ್ನಾಭಿಪ್ರಾಯದ ತಿಕ್ಕಾಟದಲ್ಲಿ ಬಳಕೆಯಾಗುತ್ತಿರುವ ಅನೇಕ ಶಬ್ದಗಳು ಕೂಡ ತಮ್ಮ ಶಕ್ತಿಯನ್ನು ಕಳೆದುಕೊಂಡಿವೆ. ಅರ್ಥ ವನ್ನು ತೀರ ವ್ಯವಹಾರಕ್ಕೆಳೆದದ್ದರಿಂದ ತಮ್ಮ ಶಕ್ತಿ ಕಳೆದುಕೊಂಡ ಶಬ್ದ ಗಳಲ್ಲಿ ಈ "ಜೀವನ ಸಾಫಲ್ಯ" ವೂ ಒಂದಾಗಿರಬೇಕು. ಆ ಮಾತಿರಲಿ.

ಜೀವನ ಸಾಫಲ್ಯಕ್ಕಾಗಿ ಉಪಯೋಗವಾಗುವ ಅನೇಕ ಸಾಧನಗಳಲ್ಲಿ ತಮತಮಗುಚಿತವಾದ ಸ್ಥಾನಗಳನ್ನಿತ್ತು ಅನೇಕರು ತೋರಿಸುತ್ತಿದ್ದರೂ ಬಸವಣ್ಣನವರು ತೋರಿಸಿದ ಸಾಧನದಷ್ಟು ಗಟ್ಟಿಮುಟ್ಟಾದ ಸಾಧನ ಈವರೆಗೆ ಸಿಕ್ಕಿಲ್ಲ; ಮುಂದೆ ಸಿಕ್ಕುವ ಲಕ್ಷಣವಿಲ್ಲ. ಸಾಧ್ಯ ಮುಖ್ಯವಾಗಿರುವಾಗ ಸಾಧನಕ್ಕೆ ಚಿಂತೆಯೇಕೆ ? ನಿಜ; ಎಷ್ಟೋ ಸಲ ಬರಬಹುದಾದ ಕಲ್ಪನೆ. ಸಾಧ್ಯ ಪ್ರಸಾಧಿಸಿದಾಗ ಅದರ ಸಂಗಡ ಸಾಧನವೂ ಮಹತ್ವದ್ದಾಗಿ ಎಣಿಕೆಯಾಗುತ್ತಿರುವಾಗ ಸಾಧನಕ್ಕಾಗಿ ಹಟವೇಕೆ ? ಅದೂ ನಿಜ; ಆದರೆ ಒಂದು ಮುಖ್ಯವಾದ ಮಾತನ್ನು ಕುರಿತು ನಡೆಯುವ ದುರ್ಧರ ಪ್ರಸಂಗ ಇಲ್ಲಿದೆ. 'ಒಳ್ಳೆಯದನ್ನು ಪಡೆಯುವುದಕ್ಕಾಗಿ ಒಳ್ಳೆಯದನ್ನೆ ಸಾಧನವನ್ನಾಗಿ ಉಪಯೋಗಿಸಬೇಕಲ್ಲವೆ? ಒಂದು ವೇಳೆ ಒಳ್ಳೆಯದಕ್ಕಾಗಿ ಕೆಟ್ಟ ಸಾಧನವನ್ನುಪಯೋಗಿಸಿದಾಕ್ಷಣಕ್ಕೆ ಆ ಸಾಧನ ಒಳ್ಳೆಯದಾಗಬಹುದೇ? ಹಾಗಾದರೆ ಸಾಧ್ಯ ಮುಖ್ಯವೆಂಬ ಮಾತೆಲ್ಲಿ ಬಂತು ? ನಿಜವಾದ ಮಾತೆಂದರೆ ಸಾಧ್ಯ ಮುಖ್ಯವಲ್ಲ. ಸಾಧನ ಮುಖ್ಯವೆಂಬ ಬಸವಣ್ಣನವರ ತತ್ವವೇ ಹೆಚ್ಚು ಸಯುಕ್ತಿಕವಾದದ್ದು. ಒಳ್ಳೆಯ ಕಾರ್ಯದ ಫಲ ಕೆಟ್ಟದ್ದಾದರೂ ಆಗಬಹುದೇ ? ಗೋದಿಯನ್ನು ಬಿತ್ತಿದರೆ ಮುಳ್ಳುಗಳ್ಳಿ ಬೆಳೆದು ಬರಬಹುದೇ ? ಹಾ ! ಕಾರ್ಯದ ಫಲ ಬರಬೇಕಾದಲ್ಲಿ ವೇಳೆ ಹಿಡಿಯಬಹುದು. ಒಂದು ಸಲ ಕೆಟ್ಟ ಸಾಧನದಿಂದ ಒಳ್ಳೆಯದರ ಫಲಾಭಾಸವು ತೀವ್ರ ಸಾಧಿಸಿತೆಂದಿಟ್ಟುಕೊಂಡರೂ ಅದು ಒಳ್ಳೆಯದರಲ್ಲೆಣಿಕೆ ಸಲ್ಲದು. ಯಜ್ಞದಂತಹ ಪವಿತ್ರ ಕಾರ್ಯಕ್ಕಾಗಿ ಹೋತಿನ ಬಲಿ ಕೊಡುವಂತಹ ಅಧಮಸಾಧನವು ಉತ್ತಮವಾಗಬಲ್ಲದೆ? ಅಂತೆಯೇ ಅದರ ವಿರುದ್ಧ ಬಸವಣ್ಣನವರು ಬಂಡನ್ನೆಬ್ಬಿಸಿದರು. "ಶಾಸ್ತ್ರವನ್ನೋದಿದವರ ಮುಂದೆ ಆಳು ಕಂಡೆಯಾ ಹೋತೆ !" ಎಂದು ಅನುತಾಪ ವ್ಯಕ್ತಗೊಳಿಸಿದರು.

"ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" ಕರ್ಮಫಲ ಬಿಟ್ಟು ಕರ್ಮ ಮಾಡು.' ಅಂದರೆ ಕರ್ಮಫಲ ಮುಖ್ಯವಲ್ಲ ಕರ್ಮ ಮುಖ್ಯವೆಂದು ಎಂದೋ ಹೇಳಿರುವಾಗ ಬಸವಣ್ಣನವರು ಹೊಸದೇನನ್ನು ಹೇಳಿದರು? ಎಂದು ಕೇಳಬಹುದು. ಹಾಗೆ ಕೇಳುವಲ್ಲಿ ಒಂದು ದಂಭವಿದೆ. ನಿಷ್ಕಾಮ ಕರ್ಮ ಮಾಡು, ಅದರಿಂದ ನಿನಗೆ ಮುಕ್ತಿ ಎಂದು ಹೇಳಿದಂತೆ ಈ ವರೆಗಿನ ತಿಳಿವಳಿಕೆ ಇರುವಾಗ ಅದರಲ್ಲಿ ನಿಷ್ಕಾಮವೆಲ್ಲಿ ಬಂತು ? ಮುಕ್ತಿಯ ಕಾಮನೆ

ಇಲ್ಲಿಯೂ ಇದ್ದಂತಿಲ್ಲವೆ? ಬಸವಣ್ಣನವರು 'ನಿಷ್ಕಾಮ ಕರ್ಮದಿಂದ ಮುಕ್ತಿ' ಎಂದು ಹೇಳದೆ 'ನಿಷ್ಕಾಮ ಕರ್ಮವೇ ಮುಕ್ತಿ' ಎಂದು ಹೇಳಿದರು. ಕಾಯಕದಿಂದ ಕೈಲಾಸವೆಂದು ಹೇಳದೆ 'ಕಾಯಕವೇ ಕೈಲಾಸ' ಎಂದು ಹೇಳಿದ್ದಾರೆ.

ಈ ರೀತಿ ಸಾಧನವೇ ಮುಖ್ಯವೆಂದೊಪ್ಪಿದಾಗಲೂ ಕೂಡ ಕರ್ಮ ಒಂದೇ ಸಾಧನವೇಕೆ? ಇನ್ನುಳಿದ ಸಾಧನಗಳು ಹೆಚ್ಚಿನವುಗಳಾಗಿಲ್ಲವೇ? ಎಂಬ ವಾದವು ಎಷ್ಟೋ ಕಾಲದವರೆಗಿದ್ದಿರಬೇಕು. ಕರ್ಮ ಮಾರ್ಗಕ್ಕಿಂತಲೂ ಜ್ಞಾನಮಾರ್ಗ ಶ್ರೇಷ್ಠ, ಜ್ಞಾನ ಮಾರ್ಗಕ್ಕಿಂತಲೂ ಭಕ್ತಿಮಾರ್ಗ ಶ್ರೇಷ್ಠ ಎನ್ನುವ ತೀವ್ರವಾದಕ್ಕೂ ಕೊರತೆ ಇರಲಿಲ್ಲವೆನ್ನಿಸುತ್ತದೆ. ಶರಣರೆಂಬುವರು ಜ್ಞಾನ, ಕರ್ಮ ಸಮುಚ್ಚಯದಿಂದಾದ ಆದರ್ಶ ಸಿದ್ಧಾಂತವನ್ನು ಭಕ್ತಿಯಿಂದ ಅಚಲ ಶ್ರದ್ಧೆಯಿಂದ ಜೀವನ ರಂಗದಲ್ಲಿ ಆಚರಣೆಗೆ ತರುತ್ತಿದ್ದವರಿಂದ ಮತ ಭೇದಗಳು ಬಹುಮಟ್ಟಿಗೆ ಶಕ್ತಿಗುಂದಿದವೆಂದು ಹೇಳಬಹುದು. ಮಹಾತ್ಮ ಬಸವಣ್ಣನವರಾದರೂ ಜ್ಞಾನಿಗಳಾಗಿದ್ದರು. ಅವರ ಜ್ಞಾನವೆಂದರೆ ಪುಸ್ತಕದ ಜ್ಞಾನವಾಗಿರಲಿಲ್ಲ. ವ್ಯಾವಹಾರಿಕ ಜಾಣತನದ ರೂಪ ಪಡೆದಿರಲಿಲ್ಲ. ಚತುರತೆಯು ಪರಾಕಾಷ್ಠೆಯಾಗಿರಲಿಲ್ಲ. ಬಸವಣ್ಣನವರು ಭಕ್ತಿಭಂಡಾರಿಗಳಾಗಿದ್ದರು. ಆದರೆ ಅವರ ಭಕ್ತಿಗೆ ರೂಢಿಜನ್ಯ ಸಂಸ್ಕಾರಗಳ ಕಟ್ಟುಕಟ್ಟಲೆಗಳಿರಲಿಲ್ಲ. ಮನವನ್ನು ಆತ್ಮದಲ್ಲಿಟ್ಟು, ವಚನವನ್ನು ಆದರ್ಶ ಸಿದ್ಧಾಂತಗಳಲ್ಲಿಟ್ಟು, ಕಾಯಕವನ್ನು ಲೋಕ ಕಲ್ಯಾಣದಲ್ಲಿಟ್ಟ ಬಸವಣ್ಣನವರ ಕಾಯಕವೇ ಕೈಲಾಸವಾಗಿತ್ತು "ಲಿಂಗನಿಷ್ಠೆ, ಪೂಜೆಯಲ್ಲಿ ಬಯಲಾಯಿತ್ತು, ಭಕ್ತಿ ನಿಷ್ಠೆ ಆಚರಣೆಯಲ್ಲಿ ಬಯಲಾಯಿತ್ತು, ಪ್ರಸಾದನಿಷ್ಠೆ ಬೆರಿಕೆಯಲ್ಲಿ ಬಯಲಾಯಿತ್ತು, ಒಂದೊಂದರ ನಿಷ್ಠೆ ಅಂದಂದಿಗೆ ಬಯಲಾಯಿತ್ತು. ಕೂಡಲ ಸಂಗಮದೇವ ತ್ರಿಜಗವನಾಳಿಕೊಂಡಿತ್ತು."

ಸಾಧ್ಯದ ಸಿದ್ಧಿಗಿಂತಲೂ ಸಾಧನದ ಶುದ್ಧಿಯ ಕಡೆಗೇ ಹೆಚ್ಚು ಗಮನ ಇತ್ತ ಬಸವಣ್ಣನವರು, ಆರಿಸಿಕೊಂಡ ತತ್ವಗಳಾವರೂ ಸನಾತನವಾದವುಗಳು. ಸತ್ಯ, ದಯೆ, ಅಹಿಂಸೆ, ವಿಶ್ವಬಂಧುತ್ವ ಮೊದಲಾದ ಅವರ ತತ್ವಗಳನ್ನು ಯಾರೂ ತಪ್ಪೆಂದು ಒಪ್ಪಬಹುದ. ಆದರೆ ಸದಿಚ್ಛೆಯಿಲ್ಲದ ಸಾಧನಗಳಂತೆಯೇ ಸಾಧನ ಶೂನ್ಯ ಸದಿಚ್ಛೆಗಳು ಬೆಲೆ ಕಾಣದೇ ಹೋಗಬಹುದು. ಮುಖ್ಯ ಕಾರ್ಯವೆಂದರೆ ಅವುಗಳನ್ನು ಕಾರ್ಯರಂಗಕ್ಕೆ ಸುವ್ಯವಸ್ಥಿತವಾಗಿ

ಇಳಿಸುವದು. ಅದರಲ್ಲಿಯೇ ನಿಜವಾದ ಜಾಣ್ಮೆ ಇದೆ. ಆ ಜಾಣ್ಮೆಯೇ ಬಸವಣ್ಣನವರನ್ನು ಅವತಾರ ಪುರುಷರನ್ನಾಗಿ ಮಾಡಿತ್ತು; ಅಥವಾ ಅವರು ಅವತಾರ ಪುರುಷರಿದ್ದರೆಂತಲೇ ಆ ಜಾಣ್ಮೆ ಅವರಲ್ಲಿ ಮನೆ ಮಾಡಿತ್ತೆಂದು ಹೇಳಿದರೂ ಸಲ್ಲುವದು.

ಒಂದು ಕಾಲಕ್ಕೆ ಮಾನವನ ಸಾವು-ನೋವುಗಳು ತಮ್ಮ ಮೇಲಿನ ಹರಳು ಕೆಟ್ಟಿದ್ದ ಹೊದಿಕೆಗಳನ್ನು ಹರಿದೊಗೆದು ನಗ್ನ ಸ್ವರೂಪದಲ್ಲಿ ಬುದ್ಧ ಭಗವಾನನೆದುರು ನಿಂತಂತೆ ಅವನತರುವಾಯ ಭಗವಾನ್ ಬಸವೇಶ್ವರನೆದುರು ನಿಂತಿದ್ದವೆಂದು ಹೇಳಬಹುದು. ಆ ಸಾವು-ನೋವುಗಳ ಸ್ಪಷ್ಟದರುಶನ ದಿಂದಲೇ ಬಸವಣ್ಣನವರು ಜನಸಮಾಜವನ್ನು ಜಾಗ್ರತಗೊಳಿಸುವ ಮಹ ತ್ಕಾರ್ಯದ ಪ್ರೇರಣೆ ಪಡೆದರು. ಸಾಮಾಜಿಕ, ರಾಜಕೀಯ, ಆರ್ಥಿಕ ಎಲ್ಲ ಕ್ಷೇತ್ರಗಳಲ್ಲಿಯೂ ಕ್ರಾಂತಿಯನ್ನೆಬ್ಬಿಸಿದರು. ಅವರೆಬ್ಬಿಸಿದ ಕ್ರಾಂತಿಯಿಂದ ಬಾಹ್ಯಜಗತ್ತಿನಲ್ಲಿ ಅವರ ಜೀವನವು ಮೇಘಗಂಭೀರವಾಗಿ ಕಂಡರೂ ದೀನ ದರಿದ್ರರಿಗಾಗಿ ಮಿಡಿಯುತ್ತಿರುವ ಕರುಣೆ ತುಂಬಿದ ಕರುಳಿನ ಮಿಡಿತದಿಂದ ಅವರ ಆಂತರಿಕಜೀವನವು ಅಷ್ಟೇ ಮೀಣಾಮಧುರವಾಗಿತ್ತಾಗಿ ಕಂಡುಬರುವದು. 'ತರ್ಕದ ಬೆನ್ನಿಗೆ ಬಾರಕೋಲನೆತ್ತುವೆ" ಎಂಬ ಗರ್ಜನೆ ಒಂದು ಕಡೆ "ಅಯ್ಯಾ, ಅಯ್ಯಾ ಎಂದು ಒರಲುತ್ತಲಿದ್ದೇನೆ" ಎಂಬ ಕರುಣಕಾವ್ಯ ಇನ್ನೊಂದು ಕಡೆ. ಪ್ರತಿಯೊಂದು ಮಾತಿಗೂ ಎದುರಾಗುವ ತಡೆ-ತೊಂದರೆ ಗಳಿಂದ ಅವರ ಉತ್ಸಾಹ ಕುದುರುತ್ತಿದ್ದಿತೆ ನಿನಾ ಕುಗ್ಗುತ್ತಿರಲಿಲ್ಲ. ತತ್ವ ಚಿಂತನೆಯಲ್ಲಿಯ ಸಂಶಯದ ಸಂತಾಪದಿಂದ, ವಿಚಾರಗಳ ವೇದನೆಯಿಂದ ಅವರ ಜೀವನ ಪುಟಕ್ಕಿಟ್ಟ ಚಿನ್ನವಾಗಿತ್ತು. ಅಂಥವಾದ ವ್ರತರಾಷ್ಟ್ರವನ್ನೇ ಸ್ಫೈರಣೆಯುಳ್ಳ ಸ್ವತಂತ್ರ ರಾಷ್ಟ್ರವನ್ನಾಗಿ ಮಾಡುವ ಹವ್ಯಾಸ ಅವರದಿತ್ತು. ಕೇವಲ ಒಂದು ಧರ್ಮ ಸ್ಥಾಪಿಸಬೇಕೆಂದಾಗಲಿ ತಮ್ಮದೊಂದು ಪಂಥವನ್ನು ಕಟ್ಟಬೇಕೆಂದಾಗಲಿ ಅವರ ಮನೀಷೆ ಇರಲಿಲ್ಲವೆಂಬುದನ್ನು ಎಲ್ಲೆಲ್ಲಿಯೂ ತೋರಿಸಿಕೊಟ್ಟಿದ್ದಾರೆ. ಅಂತೆಯೇ ಅವರ ಯಾವ ಗುಣಗಳು ಕಣ್ಮರೆಯಾ ಗಿದ್ದರೂ ಮಾನವ ಹೃದಯವನ್ನೆಚ್ಚರಿಸುವ ಅಗಾಧ ಶಕ್ತಿ ಇಂದಿಗೂ ನಮ್ಮನ್ನು ಮೋಹಿಸುತ್ತಿದೆ. ಜನಸಾಮಾನ್ಯರನ್ನು ಕಾಲ ಕಸವಾಗಿ ತಿಳಿ ಯುವ ಕಾಲದಲ್ಲಿ ಅದಕ್ಕೆ ದೇವತ್ವವನ್ನು ತಂದುಕೊಟ್ಟವರವರು. ಅಂದಿನಂತಹ ಜಂಜಡದ ದಿನಗಳಲ್ಲಿಯೂ ಜನತೆಯೇ ಜನಾರ್ದನನೆಂದು ಜಗತ್ತಿನೆದುರು

ಧೈರ್ಯವಾಗಿ ಇಟ್ಟವರವರು. ತನ್ನ ವಚನ ಪಾಲಿಸುವಲ್ಲಿ ಪ್ರಜಾಹಿತವನ್ನು ಕಡೆಗಾಣಿಸುವದು, ತನ್ನ ಸ್ವಾರ್ಥಕ್ಕೆ ಪ್ರಜೆಗಳನ್ನೇ ಪಣಕ್ಕಿಡುವ ಪರಂಪರೆಯ ಜಾಲದಿಂದ ಪಾರುಗೊಳಿಸಿ, ಪ್ರಜಾಸ್ವಾತಂತ್ರ್ಯದ ಜಯಭೇರಿಯನ್ನು ಮೊಳಗಿಸಿದರವರು. ಜುಲುಮೆಯ ಬಲದಿಂದ ಮದಾಂಧವಾದ ರಾಜಧರ್ಮದ ಬಲುಮೆಗೆ ಬೇಸತ್ತ ಜನತೆಗೆ ದಾರಿ ತೋರಿದರವರು. "ಯಾವ ರಾಜನಾದರೇನು ರಾಗೀ ಬೀಸುವದು ತಪ್ಪಿದ್ದಲ್ಲ"ವೆಂಬ ನಿರಾಶೆಯ ನುಡಿಯುಳ್ಳ ಅಬಲರನ್ನೇ ಪ್ರಬಲರನ್ನಾಗಿ ಮಾಡಿ 'ಯಾವ ಪ್ರಜೆಯಾದರೇನು? ಹೀಗೆ ಆಳುವದಾದರೆ ಲಾಭವೇನು?' ಎಂಬ ಪರಾಭವ ಮನೋವೃತ್ತಿಯು ರಾಜಧರ್ಮದಲ್ಲಿ ಬರುವಂತೆ ಮಾಡಿದರು. ಈ ಬಗೆಯ ಬಸವಣ್ಣನವರ ಅಚಲ ಶ್ರದ್ಧೆಯ ಪ್ರಯತ್ನದ ಫಲವಾಗಿಯೇ ಇಂದಿಗೂ ಭಾರತದ ಜೀವನಾಡಿಯು, ಸಂಸ್ಕೃತಿಯ ತ್ರಾಣ ಕಡಿಮೆಯಾಗಿದ್ದರೂ ಪ್ರಾಣ ಉಳಿದಿದೆ.

ಅಂದಿನ ದಿನಗಳಲ್ಲೇನೋ ಬಸವಣ್ಣನವರು ಸಫಲ ಜೀವನದ ರಹಸ್ಯವನ್ನು ಜನತೆಯ ಎದುರು ಸಹಜವಾಗಿ ಕಾಣುವಂತಿಟ್ಟಿದ್ದರೂ ಅದರ ಪ್ರತಿಫಲ ಆಗ ಸಿಕ್ಕದಿದ್ದರ ಕಾರಣ ಅವರ ಸಾಧನದ ಅಪೂರ್ಣತೆಯಲ್ಲ; ಜಗತ್ತಿನ ಅಪೂರ್ಣತೆ. ಜಗತ್ತಿನ ರೀತಿಯೇ ಒಂದು ತೆರನಾಗಿದೆ. ಇಲ್ಲಿ ವೇಳೆ ಒಳ್ಳೆಯದಿದ್ದಾಗ ಎಂಥ ಕೆಟ್ಟ ಸಾಧನದಿಂದಾವರೂ ಒಳ್ಳೆಯ ಕಾರ್ಯ ಅಶಾಶ್ವತವೇಕೆ ಆಗಲೊಲ್ಲದು- ತೀವ್ರ ಸಿದ್ಧಿಸುವುದು. ವೇಳೆ ಒಳ್ಳೆಯದಿಲ್ಲವೋ! ಎಂಥ ಒಳ್ಳೆಯ ಸಾಧನವಿರಲಿ ಅದರ ಫಲ ಆಗೆಂದಿಗೂ ಸಿಕ್ಕದು. ಬಸವಣ್ಣನವರಾದರೋ ಆಗ ಒಳ್ಳೆಯದಕ್ಕಾಗಿ ಒಳ್ಳೆಯ ಸಾಧನದಿಂದಲೇ ಪ್ರಯತ್ನಿಸಿದರು. ಜಗತ್ತಿನಲ್ಲಿ ವೇಳೆ ಒಳ್ಳೆಯದಿರಲಿಲ್ಲ. ಈ ವರೆಗೆ ನಾವು ಕಾಯಬೇಕಾಯಿತು. ಏನಾಗುವದೋ ಅದು ನಮ್ಮ ಒಳ್ಳೆಯದಕ್ಕಾಗುವದೆಂಬ ಪಾಠದಿಂದ ಆದದ್ದರಲ್ಲಿಯೇ ಒಳ್ಳೆಯದನ್ನು ತೆಗೆಯುವ ಗುಣ ಬೆಳೆದು ಬರುವಂತೆ ನಮಗೆ ಕಲಿಸಿದ್ದರವರು. ಈಗ ಜಗತ್ತಿನಲ್ಲಿ ವೇಳೆ ಒಳ್ಳೆಯದಿದೆ. ಕೆಟ್ಟ ಸಾಧನಗಳಿಂದಲೂ ಒಳ್ಳೆಯದನ್ನು ಪಡೆಯುತ್ತಿರುವ ಈ ಕಾಲದಲ್ಲಿ ಒಳ್ಳೆಯದರಿಂದ ಒಳ್ಳೆಯದಾಗಲಾರದೇ? ಕಾರ್ಯಸಾಧನೆಯ ಆತುರದಲ್ಲಿ ಕೆಟ್ಟ ಸಾಧನವನ್ನುಪಯೋಗಿಸುವ ಕಾತರ ಬಹುಜನರಿಗಿದ್ದರೂ ಬಸವಣ್ಣನಂತಹರಿಂದ ಜನಜೀವನದಲ್ಲಿ ಸಜೀವವಾಗಿದ್ದ ಒಳ್ಳೆಯ ಸಾಧನದ ಪ್ರೇರಣೆ ಹಾಗೆ ಮಾಡಗೊಟ್ಟಿಲ್ಲವೆಂಬುದಕ್ಕೆ ಇಂದಿನ ಮಹಾತ್ಮಾ ಗಾಂಧಿಜಿಯವರೇ ಸಾಕ್ಷಿ.

ನಿಜವಾಗಿ ನೋಡಿದರೆ ಮಹಾತ್ಮಾ ಗಾಂಧೀಜಿಯವರಿಗೆ ಸತ್ಯಶೋಧನೆಯ ಪ್ರೇರಣೆಗಾಗಿ ಭಾರತ ಬಿಟ್ಟು ಹೊರಕ್ಕೆ ಹೋಗುವ ಕಾರಣವಿರಲಿಲ್ಲವೆನ್ನಿಸುತ್ತದೆ. ಮಾನವ ಹೃದಯದ ಪರಿಚಯಕ್ಕಾಗಿ ಥೋರೋನನ್ನು ತರಬೇಕಾಗಿರಲಿಲ್ಲ. ಟಾಲಸ್ಟಾಯರನ್ನು ಟಿಪ್ಪಣಿ ಮಾಡಿಕೊಳ್ಳಬೇಕಾಗಿರಲಿಲ್ಲ. ಹಿತ್ತಲ ಗಿಡ ಮದ್ದಲ್ಲವೇನೋ! ದುರ್ದೈವದಿಂದ ನಮ್ಮ ಮಧ್ಯದಲ್ಲಿರುವ ಶಕ್ತಿಯೇ ನಮ್ಮ ಪರಿಚಯದ್ದಿಲ್ಲದಿರುವಾಗ ಅವರ ಪರಿಚಯವನ್ನು ಜಗತ್ತಿಗೆ ಮಾಡಿಕೊಡುವದೆಲ್ಲಿಯ ಮಾತೋ! ಆದರೂ ಇಂದಿನ ಮಹಾತ್ಮಾ ಗಾಂಧೀಜಿಯವರ ಭಾರತೋದ್ಧಾರದ ಕಾರ್ಯವೆಂದರೆ ಹಿಂದಿನ ಬಸವಣ್ಣನವರ ತಿದ್ದಿ ಬೆಳಸಿದ ಆವೃತ್ತಿಯಂತಿರುವದನ್ನು ಕಾಣಬಹುದ. ಜೀವನ ಸಾಧನ, ಸಾಫಲ್ಯದ ವಿಷಯವಾಗಿ ಗಾಂಧೀಜಿಯವರಿಗೂ ಸಮಸ್ಯೆಗಳೆದುರಾಗದೇ ಇಲ್ಲ. ಹಿಂಸೆಯೋ ಅಹಿಂಸೆಯೋ? ಎಂಬ ಸಮಸ್ಯೆ ಬಂದಾಗ ಜೀವನ ಸಾಫಲ್ಯದಂತಹ ಪವಿತ್ರ ಸಾಧ್ಯಕ್ಕಾಗಿ ಅಹಿಂಸೆಯಂತಹ ಅಪವಿತ್ರ ಸಾಧನವೇ? ಎಂದು ಕೇಳಿಕೊಂಡಿರುವದರಿಂದಲೇ ಅವರ ಅನಾಸಕ್ತಿಯೋಗದ ದಾರಿಯಲ್ಲಿ ಅಹಿಂಸೆಯೇ ಊರುಗೋಲಾಗಿದೆ.

ಬಸವಣ್ಣನವರು ತಮ್ಮ ಕಾಲಕ್ಕೆ ಸಫಲ ಜೀವನದ ರಹಸ್ಯವನ್ನು ಜನತೆಯ ಎದುರು ಇಟ್ಟವರು. ಅಷ್ಟಕ್ಕೆ ಬಿಟ್ಟು ವ್ಯಕ್ತಿ ಧರ್ಮಕ್ಕಂಟಿಕೊಳ್ಳಲಿಲ್ಲ. ಜನತೆಯೇ ಜನಾರ್ದನನೆಂದು ತಿಳಿದು ಜನಸೇವೆಯೇ ಈಶಸೇವೆಯೆಂದು ಹೇಳಿದವರು ಸ್ವಾರ್ಥಕ್ಕಂಟಿಕೊಳ್ಳಲು ಸಾಧ್ಯವೇ? ಅವರಿಗೆ ತಮ್ಮ ಧರ್ಮವನ್ನು ಬೆಳಸಬೇಕಾಗಿರಲಿಲ್ಲ; ಮಾನವ ಧರ್ಮವನ್ನುಳಿಸಬೇಕಾಗಿದ್ದಿತು. ಪಂಥವನ್ನು ಕಟ್ಟಬೇಕಾಗಿರಲಿಲ್ಲ; ಜನತೆಯಿಂದ ಜನರಿಗಾಗಿ ಜನತೆಯಲ್ಲಿ ಜನರೇ ಕಟ್ಟುವ ವಿಜಯ ಸಾಮ್ರಾಜ್ಯವನ್ನು ಕಟ್ಟಬೇಕಾಗಿತ್ತೆಂದು ಬೇಕಾದರೆ ಹೇಳಿಕೊಳ್ಳಬಹುದು. ಅದಕ್ಕಾಗಿ ಅವರು ಜನರಿಗೆ ಶಿಕ್ಷಣಕೊಡುವ ಕ್ರಮ ಕೈಕೊಂಡಿದ್ದರು. ಅನುಭವ ಮಂಟಪದ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ಅದರ ಆಚಾರ್ಯ (ಚಾನ್ಸೆಲರ್)ರಾಗಿದ್ದರು. ಜಂಗಮರೆಂಬ ಪ್ರಾಧ್ಯಾಪಕರನ್ನು ಅರ್ಧ ಭಾರತವನ್ನಾಕ್ರಮಿಸಿದ್ದ ಕರ್ನಾಟಕದ ಮೂಲೆಮೂಲೆಗೆ ಕಳುಹಿಸಿದ್ದರು. ಅಂದಿನ ಅವರ ಶಿಕ್ಷಣ ಜೀವನದಾಯೀ ಶಿಕ್ಷಣವಾಗಿತ್ತು. ಮಾತೃಭಾಷೆಯಲ್ಲಿ ಶಿಕ್ಷಣವೆಂಬ ಮಾತಿಗೆ ಬಸವಣ್ಣನವರೇ ಮೂಲಪುರುಷರು ಮಾತ್ರ ಇಂದು ತಿಳಿದಿರುವ ಮಾತೃಭಾಷೆಗೂ ಅಂದು ಅವರು ಹೇಳಿದ

ಮಾತೃಭಾಷೆಗೂ ಅಜಗಜಾಂತರ. ಕೇವಲ ಲಿಪಿಬದ್ಧ ಭಾಷೆಗಳಿಗೆ ಬಸವಣ್ಣನವರು ಪ್ರಾಧಾನ್ಯ ಕೊಟ್ಟಿರಲಿಲ್ಲ. ಭಾಷೆಗಳೆಂದರೂ ಎಷ್ಟು? ಆಚಾರ ಧಾರ್ಮಿಕತೆಯ ಭಾಷೆ, ವಾಣಿ ವಿಚಾರದ ಭಾಷೆ; ಕಲೆ ಭಾವನೆಯ ಭಾಷೆ. ಈ ತ್ರಿಭಾಷೆಗಳಿಂದಲೇ ಅಂದರೆ ಮಾತೃಭಾಷೆಯಿಂದಲೇ ಶಿಕ್ಷಣದ ಕಾರ್ಯ ನಡೆಯುತ್ತಿದ್ದರು. 'ಬಾಟಲಿ' (ಕೃತ್ರಿಮ ಮೊಲೆ) ಯಿಂದ ಕೊಡುವ ಹಾಲಿಗೆ ಮಾತೆಯ ಹಾಲಿನ ಗುಣವೆಲ್ಲಿ? ಮಾತೆಯ ಮೊಲೆಹಾಲಿನ ಅಭಾವದಿಂದಾಗಲೀ, ಕುಭಾವದಿಂದಾಗಲೀ ಕೃತ್ರಿಮ ಮಿದುಳಿನ ಆಹಾರ ಪಡೆದವರಿಗೆ ಬಸವಣ್ಣನವರ ಮಾತೃಭಾಷೆಯ ಅರ್ಥ ಹೇಗಾಗಬೇಕು? ಅಂತೆಯೇ ಇಂದಿನ ಶಿಕ್ಷಣದ ಸಮಸ್ಯೆ ಗಹನವಾಗಿ ಕುಳಿತಿರಬೇಕೆನ್ನಿಸುತ್ತದೆ. ಬಸವಣ್ಣನವರ ಶಿಕ್ಷಣದ ಗುರುಮಂತ್ರ "**ಕಾಯಕವೇ ಕೈಲಾಸ**"ವೆಂಬುದಾಗಿತ್ತು. 'ಅವರ ಕಾಯಕವೇ ಕೈಲಾಸ'ವೆಂದರೆ ಕೈಲಾಸದಲ್ಲಿ ಕುಳಿತು ಕಾಯಕ ಮಾಡುವ 'ಕಾರಕೂನಿಕೆ'ಯಾಗಿರದೆ ಮಾಡುತ್ತಿರುವ ಕಾಯಕದಲ್ಲಿಯೇ ಕೈಲಾಸ ಕಾಣುವ ಕಾಯಕವೇ ಕೈಲಾಸವಾಗುತ್ತೆಂಬುದನ್ನು ಮರೆಯಲಾಗದು.

ಸ್ವಲ್ಪ ಸೂಕ್ಷ್ಮವಾಗಿ ನೋಡಿದರೆ ಆ ಗುರುಮಂತ್ರ ಇನ್ನು ಮುಂದೆ ಕೇವಲ ಕನ್ನಡಿಗರದಾಗುಳಿಯದೇ ಅಖಿಲ ಭಾರತದ ಅಷ್ಟೇಕೆ ಅಖಿಲ ವಿಶ್ವದ ಗುರುಮಂತ್ರವಾಗಬಹುದು, ಆಗಬೇಕು. ಇಂದಿನ ಸ್ಥಿತಿಯಲ್ಲಂತೂ ಅದೇ ಗುರುಮಂತ್ರ ಅವರಲ್ಲಿಯೇ ಸಫಲ ಜೀವನದ ರಹಸ್ಯ. ಅರ್ಥಾತ್ ಮುಕ್ತಿ.

೩

# ಪ್ರಬಲವಾಗುತ್ತಿರುವ ಪ್ರಜಾಶಕ್ತಿ

(ಭಾರತಕ್ಕೆ ಉಜ್ವಲವಾದ ಇತಿಹಾಸ ಹಿಂದೆ ಇತ್ತೆ? ಮುಂದೆ ಇದೆಯೋ? ಎಂದು ಕೇಳುವವರಿಗೆ ಇತಿಹಾಸವೆಂದರೇನೆಂದು ಪ್ರಶ್ನಿಸುವ ಪ್ರಸಂಗವಿದೆ. ಹಾಗಾದರೆ ಇತಿಹಾಸವೆಂದರೇನು ? ರಾಜ್ಯ ರಾಜ್ಯಗಳಲ್ಲಿನ ಬಡಿದಾಟ, ಕಿರೀಟಗಳ ಉರುಳಾಟ, ಸಾಮ್ರಾಜ್ಯಗಳ ಮುಳುಗಾಟಗಳ ವ್ಯವಸ್ಥಿತ ವರ್ಣನೆ ಎಂದರೆ ಇತಿಹಾಸವೇ ? ಅಲ್ಲ. ಫಲಶ್ರುತಿಯ ದೃಷ್ಟಿಯಿಂದ ಅಂಥ ಇತಿಹಾಸದಿಂದ ಆಗಬೇಕಾದ್ದೇನೂ ಕೂಡ ಇಲ್ಲ. ನಿಜವಾದ ಇತಿಹಾಸವೆಂದರೆ ಮಾನವಕುಲವನ್ನೆದುರಿಸಿದ ಸಮಸ್ಯೆಗಳ ಸ್ಪಷ್ಟವರ್ಣನೆ. ಅಂತಹ ಇತಿಹಾಸ ಯಾವ ಜನಾಂಗದಲ್ಲಿ ಸಿಕ್ಕುತ್ತದೆಯೋ ಅವರ ಮುಂದಿನ ಇತಿಹಾಸ ಉಜ್ವಲವಾಗುವುದರಲ್ಲಿ ಸಂಶಯವಿಲ್ಲ. ಸತ್ಯಸೂರ್ಯನ ಪ್ರಕಾಶದಿಂದ, ಅಸತ್ಯದ ಕಗ್ಗತ್ತಲೆಯಲ್ಲಿ ಸಿಕ್ಕಿಬಿದ್ದ ದಾರಿಹೋಕನ ಮಾರ್ಗ ಸುಗಮವಾದಂತೆ, ಹಿಂದಿನ ಇತಿಹಾಸದ ಅರಿವಿನಿಂದ ಮುಂದಿನ ಜನಾಂಗದ ಜೀವನಜ್ಯೋತಿ ಜಾಜ್ವಲ್ಯವಾಗುವುದು. ಜಗತ್ತಿನಲ್ಲಿ ಎಷ್ಟೋ ರಾಷ್ಟ್ರಗಳು ನಾಗರಿಕತೆಯ ಮೆಟ್ಟಿಲನ್ನು ಕೂಡ ಮುಟ್ಟದಿದ್ದಾಗ ಸುಸಂಸ್ಕೃತ ನಾಗರಿಕತೆಯ ಅತ್ಯುಚ್ಚ ಶಿಖರವನ್ನೇರಿ ನಿಂತಿದ್ದ ಭಾರತದ ಇತಿಹಾಸ ಬರಹದಲ್ಲಿಲ್ಲದ್ದು ಸ್ಪಷ್ಟವಿದೆ. ಮಾನವ ಕುಲಕ್ಕೆದುರಾದ ಸಮಸ್ಯೆಗಳನ್ನು ಕೇವಲ ಬರೆದಿಟ್ಟು ಮುಂದೆ ಸಾಗುವದಿರುವದಿಲ್ಲ. ಅವುಗಳ ನಿರ್ಣಯ ಆಗಲೇ ಕೊಡಬೇಕಾಗುತ್ತದೆ. ನಿರ್ಣಯವಾಗದ ಕೆಲವೇ ಸಮಸ್ಯೆಗಳನ್ನು ಮತಭೇದಗಳ ರೂಪದಲ್ಲಿ ಹಾಗೆ ಇಟ್ಟುಕೊಂಡು, ಅವುಗಳನ್ನು ಕಾಯ್ದಿಡುವ ಕ್ರಮವನ್ನನುಸರಿಸಬೇಕಾಗುತ್ತದೆ. ಆ ಕ್ರಮವೆಂದರೆ ಬರೆದಿಡುವದೊಂದೇ ಎಂದು "ಭಾರತದ ಇತಿಹಾಸ ಬರಹದಲ್ಲಿಲ್ಲ"ವೆನ್ನುವ ಆಕ್ಷೇಪಕರ ಕಲ್ಪನೆ ಇದೆ. ಮಾತ್ರ ನಮ್ಮ ಕ್ರಮ ಬೇರೆ ಇತ್ತು. ಅವರಂತೆ ನಾವು ಬರೆದಿಡುತ್ತಿದ್ದರೂ ಅವರದು ಪುಸ್ತಕಗಳಲ್ಲಿದ್ದರೆ ನಮ್ಮದು ಹೃದಯದಲ್ಲಿರುತ್ತಿತ್ತು. ಇಷ್ಟೇ ಭೇದ. ಒಂದು ಕಾಲಕ್ಕೆ ನಮ್ಮಲ್ಲಿ ದರ್ಶನಶಾಸ್ತ್ರದಲ್ಲಿ ಮತ ಭೇದವಾದ್ದರಿಂದ ದ್ವೈತಾದ್ವೈತ ಮಾರ್ಗಗಳನ್ನೇ ಕಲ್ಪಿಸಿಕೊಂಡು ಅವುಗಳ ನಿರ್ಣಯವನ್ನು ಅನುಭವಕ್ಕೆ ಬಿಟ್ಟು ಮುಂದೆ ಸಾಗಿದೆವು. ಜ್ಯೋತಿಷ್ಯ

ಶಾಸ್ತ್ರದಲ್ಲಿ ಮತಭೇದವಾದ್ದರಿಂದ ಸ್ಮಾರ್ತ, ಭಾಗವತ ಸಂಪ್ರದಾಯಗಳನ್ನು ನಿರ್ಮಿಸಿಕೊಂಡೆವು. ಹೀಗೆ ಇತಿಹಾಸವನ್ನು ಕಾಯ್ದಿಡುವದು ನಮ್ಮ ಪರಂಪರೆ. ಅದರ ಬೆನ್ನುಮೂಳೆ ಮುರಿಯುವವರೆಗೂ ಆ ಇತಿಹಾಸ ಸಜೀವವಾಗಿತ್ತು. ನಮ್ಮ ಮೇಲಾದ ಪರಕೀಯ ದಾಳಿಯ ಹೊಡೆತದಿಂದ ನುಗ್ಗುನೂರಾದಾಗ ಎಲ್ಲವೂ ಗವಿ ಸೇರಿದರೆ ಇತಿಹಾಸದ ಪಾಡೇನು? ಹೃದಯದಲ್ಲಿ ಬರೆದಿಟ್ಟ ಇತಿಹಾಸದ ಗತಿಯೇ ನಿರ್ಗತಿಯಾದಾಗ ಪುಸ್ತಕಗಳಲ್ಲಿ ಬರೆದಿಟ್ಟ ಇತಿಹಾಸ ಯಾರು ಕೇಳಬೇಕು? ಮೇಲಾಗಿ (ಇಂದಿನವರೆಗಿನ ಅನುಭವದ ಮೇಲಿಂದ ಬರೆದಿಟ್ಟ ಇತಿಹಾಸವೆಂದರೆ ಅಸತ್ಯದ ಮುಟ್ಟೆಯಾಗಿರುವ ಏಕಪಕ್ಷೀಯ ಸದೋಷ ದೃಷ್ಟಿಯ ಶಬ್ದಚಿತ್ರವಾಗಿರುವಾಗ ಅದಕ್ಕೆ ಇತಿಹಾಸವೆಂದಾದರೂ ಏಕೆ ಕರೆಯಬೇಕು?)

ಅಂದ ಮೇಲೆ ಇತಿಹಾಸವಿಲ್ಲ. ಇತಿಹಾಸವಿಲ್ಲದೇ ಪ್ರಗತಿ ಇಲ್ಲ. ಪ್ರಗತಿ ಸಾಧನ ಇತಿಹಾಸ ಸಿಕ್ಕುವಂತಿಲ್ಲ. ಮುಂದೇನು? ಚಿಂತಿಸುವ ಕಾರಣವಿಲ್ಲ. ಈ ವರೆಗಿನ ಏಕಪಕ್ಷೀಯ ದೃಷ್ಟಿಯಿಂದ ನೋಡುವ ಅಸತ್ಯಕ್ರಮಕ್ಕಿಂತ ಸತ್ಯ ದೃಷ್ಟಿಯಿಂದ ನೋಡುವ ಸತ್ಯಕ್ರಮ ಇನ್ನೊಂದಿದೆ. ಆ ಕ್ರಮವೇ ಈ ವರೆಗುತೂ ಸತ್ಯವಾದ ಇತಿಹಾಸವನ್ನು ತೋರಿಸುತ್ತಿದೆ; ಅಥವಾ ಇತಿಹಾಸದ ಸತ್ಯವನ್ನು ಹೇಳುತ್ತಿದೆ.

ಉತ್ಕ್ರಾಂತಿಯ ಕ್ರಮದಂತೆ ಮಂಗನಿಂದ ಮನುಷ್ಯನಾದನೋ! ಮೀನದಿಂದ ಮನುಷ್ಯನಾದನೋ! ನಿರ್ಣಯಿಸುವ ಗೊಂದಲಕ್ಕಿಂತ, ಮಾನವೇತರ ಪ್ರಾಣಿಗಳಿಗಿಂತ ವಿಶಿಷ್ಟವಾದ ರೀತಿಯಲ್ಲಿ ಜೀವನ ಕ್ರಮವನ್ನು ಅವನು ಪಡೆದದ್ದಂತೂ ಸತ್ಯವೇ? ಹಾಗೆ ಅನ್ಯಸ್ಥಿತಿ ಪಡೆದಿದ್ದರೂ, ವನ್ಯಸ್ಥಿತಿ ಮಾತ್ರ ಅವನಿಗೆ ಎಷ್ಟೋ ದಿನ ಇತ್ತು. ಯಾವ ಪ್ರಾಣಿಗಳಿಗಿಂತ ಅನ್ಯಸ್ಥಿತಿ ಪಡೆದನೋ ಅಂತಹ ವನ್ಯ ಪ್ರಾಣಿಗಳನ್ನೇ ಬೇಟೆಯಾಡಿ ಎಷ್ಟೋ ಕಾಲ ಬದುಕಿದ್ದನಲ್ಲವೇ? ಗುಂಪುಗುಂಪಾಗಿ ಜೀವಿಸಿಕೊಂಡಿದ್ದವನೇ ಭೂಗೋಲಿಕ ಕಾರಣದಿಂದ ಜನಾಂಗವಾಗಿ ಮಾರ್ಪಟ್ಟರೂ ಅವನ ಜೀವನದ ಮಟ್ಟವು ಪಶುಪಕ್ಷಿಗಳಿಗಿಂತಲೂ ಸುಧಾರಿಸದ ಸ್ಥಿತಿ ಎಷ್ಟೋ ಕಾಲವಿತ್ತು. (ಬಡವ, ಬಲ್ಲಿದ, ದಾನಿ, ದರಿದ್ರ ಮೊದಲಾದ ಮೇಲುಕೀಳುಗಳು ಪಶು ಪಕ್ಷಿಗಳಲ್ಲಿ ಇಂದಿಗೂ ಇಲ್ಲದಂತೆ ಆದಿಮ ಮಾನವ ಸಮಾಜದಲ್ಲಿಯೂ ಇದ್ದಿರಲಿಕ್ಕಿಲ್ಲ.

ಸ್ತ್ರೀ ಪುರುಷ, ಉದ್ದ, ಗಿಡ್ಡ, ಕರಿ, ಬಿಳಿ ಮೊದಲಾದ ನೈಸರ್ಗಿಕ ಭೇದಗಳಂತೆಯೇ ದಾನಿ ದರಿದ್ರ ಎನ್ನುವ ಭೇದವೂ ನೈಸರ್ಗಿಕವೆನ್ನುವ ಕಲ್ಪನೆ ಆಗ ಕನಸಿನಲ್ಲಿಯೂ ಬರಲಶಕ್ಯವಿತ್ತು. "ಚಾತುರ್ವರ್ಣ್ಯಂ ಮಯಾಸೃಷ್ಟಂ" ಎನ್ನುವ ವಿಚಾರವತಾರ ಅಂತಹ ಸಮಾಜದಲ್ಲಿ ಉದಯಿಸುವದು ಶಕ್ಯವಿರಲಿಲ್ಲ. ಆನುವಂಶಿಕ ಜಾತಿಭೇದ, ಆರ್ಥಿಕ ವರ್ಗಭೇದಗಳ ಸಂಕಲೆಯಲ್ಲಿ ಸಿಕ್ಕಿ ಒದ್ದಾಡುತ್ತಿರುವ ಇಂದಿನ ನಮಗೆ ಹೀಗೂ ಇದ್ದಿರಬಹುದೇ ಅನ್ನುವ ಕಾಲವದು. ಆ ಕಾಲದ ಮುಂದಿನ ಬೆಳವಣಿಗೆಯ ವಿವರಣೆಯಿಂದ ಈ ನಮ್ಮ ಮಂಕು ಮರೆಯಾಗಬಹುದು.

ಮಾನವನು ನೆಲ ಉತ್ತಿ, ಬೀಜ ಬಿತ್ತಿ, ಬೆಳೆ ಪಡೆಯುವದನ್ನರಿತಂತೆ ಅನ್ನ ಕುದಿಸಲೂ ಕಲಿತ. ಇದ್ದದರಲ್ಲಿಯೇ ಸಭ್ಯವಾದ ವನ್ಯಪಶುಗಳನ್ನು ಹಿಡಿದುತಂದು ಶಿಕ್ಷಣಕೊಟ್ಟು ತನ್ನ ದಾಸ್ಯದಲ್ಲಿಟ್ಟುಕೊಳ್ಳಹತ್ತಿದನು. ಅಂದೇ ಶ್ರಮವಿಭಾಗದ ಅನುಕೂಲತೆಯಿಂದ ಸಹಜ ಜೀವನ ಸಾಗಹತ್ತಿತು. ಮನೆಯ ಕೆಲಸ ಸ್ತ್ರೀಯರಿಗೆ, ಅನ್ನದುತ್ಪತ್ತಿ ಪುರುಷರಿಗೆ, ವಿಭಾಗವಾಯಿತು ಶ್ರಮ. ಅವರಲ್ಲಿಯೇ ಕೆಲವರಿಗೆ ಒಂದೆಡೆ ಕಲೆತು ನಿಂತ ಗುಂಪುಗಳ ಸಂರಕ್ಷಣೆಯ ಹೊಣೆಯೂ ಬಿತ್ತು. ಈ ರೀತಿಯ ಶ್ರಮವಿಭಾಗವು ಸುಸ್ಥಿತಿಯಲ್ಲಿರುವವರೆಗೂ ಯಾವ ಕಿಲ್ಮಿಷವು ಸಮಾಜ ಶರೀರವನ್ನು ಸೇರಲಿಲ್ಲ. ಮಾನವನ ಮಂಕು ಬುದ್ಧಿಯ ಮೌಢ್ಯದಿಂದಾಗಿ ಸಮಾಜ ರಕ್ಷಣೆಯ ಹೊಣೆ ಹೊತ್ತ ಶೂರ, ಧೀರರು ಕೇವಲ ಕಾಯಕಷ್ಟ ಮಾಡುತ್ತಿರುವವರಿಗಿಂತ ಶ್ರೇಷ್ಠರೆಂಬ ಭಾವನೆ ಬಂದ ದಿನವೇ ಸಾಮಾಜಿಕ ದಾಸ್ಯ ಪ್ರಾರಂಭವಾಯಿತೆಂದು ಹೇಳಬಹುದು. ಆ ದಾಸ್ಯದ ಮುಖ್ಯ ಏಟು ಬಿದ್ದದ್ದು ಮೊಟ್ಟಮೊದಲು ಸ್ತ್ರೀಯರಿಗೆ; ಅನಂತರ ದುರ್ಬಲರಾದ ಪುರುಷರಿಗೆ. ನ್ಯಾಯವಿರಲಿ, ಅನ್ಯಾಯವಿರಲಿ ಅದೊಂದು ಸ್ಥಿತ್ಯಂತರ. ಶ್ರಮವಿಭಾಗದ ಸುಧಾರಣೆಯಾದಂತೆ ಆ ಸ್ಥಿತ್ಯಂತರವೇ ಇನ್ನೂ ರೂಪುಗೊಂಡಿತು. ಅನ್ನೋತ್ಪಾದನೆಯೇ ಧನೋತ್ಪಾದನೆಯಾಯಿತು. ಈ ಧನೋತ್ಪಾದನೆಯನ್ನು ಇದರಿಂದ ಸಂಚಿತವಾದ ಧನವನ್ನು ರಕ್ಷಿಸುವ ಭಾರವೂ ಅದಕ್ಕಾಗಿ ಬಡಿದಾಟಗಳೂ ಬೆಳೆದವು. ಈ ಬಡಿದಾಟಗಳಲ್ಲಿ ಸೋತ ಗುಂಪು ಗೆದ್ದ ಗುಂಪಿನ ದಾಸವಾಗಿರಬೇಕು. ಪುಕ್ಕಟೆಯಾಗಲಿ ಸುಲಭ ವೆಚ್ಚದಲ್ಲಾಗಲೀ ದುಡಿವ ದಾಸ ಸಿಕ್ಕಿದ್ದರಿಂದ

ಧನೋತ್ಪಾದನೆ ಇನ್ನಷ್ಟು ಬೆಳೆಯಿತು) ಆ ವರೆಗೆ ಬಾಧಿಸುತ್ತಿದ್ದ ಹೊಟ್ಟೆಯ ಚಿಂತೆ ಹಿಂಗುತ್ತಲೇ ಉಚ್ಚ ಸಂಸ್ಕೃತಿಯ ದ್ಯೋತಕಗಳೆಂದು ಹೇಳಿಸಿಕೊಳ್ಳುವ ಧರ್ಮ, ಕಲೆ, ಕೈಗಾರಿಕೆ, ಸಾಹಿತ್ಯ, ಸಂಗೀತಗಳ ಕಡೆಗೆ ಲಕ್ಷ್ಯ ಕೊಡುವುದ ಕ್ಕಾಗಿ ಕೆಲ ಜನರಿಗಾದರೂ ಸಾಧ್ಯವಾಗಿರಬೇಕು.

ತಮ್ಮ ಶೂರ, ಧೀರತನದಿಂದ ಇಷ್ಟೆಲ್ಲ ಅನುಕೂಲತೆಗಳನ್ನೊದಗಿಸಿ ಕೊಟ್ಟವರ ಪ್ರಸಿದ್ಧಿ ಬೆಳೆದಂತೆ, ನಿಸರ್ಗದ ನಿರೀಕ್ಷಣೆಯಿಂದ ಮಳೆ, ಗಾಳಿಗಳ ಗುಟ್ಟನ್ನರಿತವರ, ಹಾಗೂ ಗ್ರಹ ಗತಿ, ದಿಕ್ಕುದಿಶೆಗಳನ್ನರಿತ ಜ್ಯೋತಿಷಿಗಳ ಪ್ರತಿಷ್ಠೆಯೂ ಬೆಳೆಯಿತು. ಧನೋತ್ಪಾದನೆಯ ಕಾರ್ಯ ಕೈಗೊಂಡವರಲ್ಲಿ ತಮ್ಮ ಕಾರ್ಯದಲ್ಲಿ ಹೆಚ್ಚು ಅನುಕೂಲವಾಗಬಹುದಾದ ಮಳೆ, ಗಾಳಿಗಳ ದೇವತೆಗಳನ್ನು ಪ್ರಾರ್ಥನೆಗಳಿಂದ ಒಲಿಸಿಕೊಂಡ ಪುರೋಹಿತ ವರ್ಗದ ವರ್ಚಸ್ಸು ಹೆಚ್ಚಾಗಿದ್ದರೆ ಆಶ್ಚರ್ಯವಲ್ಲ. ( ನಿರೀಕ್ಷಕ, ಉತ್ಪಾದಕ, ಸಂರಕ್ಷಕ, ಸೋತ ದಾಸ, ಈ ಚತುಷ್ ಕ್ರಮವನ್ನು ಸುಯಂತ್ರಿತವಾಗಿ ಸಾಗಿಸು ತ್ತಿದ್ದಾಗಲೇ ಚಾತುರ್ವರ್ಣಗಳ ಉದಯವಾಯಿತು./ ಎಷ್ಟೋ ಸಲ ಸುಯಂತ್ರಿತವಾಗಿದ್ದದ್ದು ಸುಯೋಗ್ಯವೂ ಆಗಿಲ್ಲದಿರಬಹುದಾಗಿದೆಯಲ್ಲವೇ? (ಯಾವುದೇ ವ್ಯವಸ್ಥೆಯಲ್ಲಿ ದಾಸ್ಯವು ಅಯೋಗ್ಯವೆಂದು ಒಪ್ಪುವುದಾದರೆ ಅಂದಿನ ಸಾಮಾಜಿಕ ಸುಯಂತ್ರತೆಯ ಸುಯೋಗ್ಯದಲ್ಲಿಯೂ ಅಯೋಗ್ಯ ದಾಸ್ಯದ ಪಾಲು ಹೆಚ್ಚಾಗಿ ಬೆಳೆದು ಬಂದಿತೆಂಬುದನ್ನು ಒಪ್ಪಲೇಬೇಕು. ಬಹುಸಂಖ್ಯಾಕ ಜನತೆಯ ಕಾಯಕಷ್ಟದ ಫಲವಾಗಿ ಸಿಕ್ಕುತ್ತಿದ್ದ ಧನೋತ್ಪಾ ದನೆಯ ಉಪಭೋಗ ಮುಂದೆ ಅಲ್ಪಸಂಖ್ಯಾಕರಾದ ಮೇಲ್ವರ್ಗದವರಿಗೇ ಸಿಕ್ಕುತ್ತಿತ್ತು. ( ಈ ಬಗೆಯ ದುಷ್ಟರೂಢಿಗಳ ವಿರುದ್ಧ ಬಂಡುಗಳೇಳುವ ಲಕ್ಷಣ ಕಂಡಾಗೆಲ್ಲ ವರ್ಣವ್ಯವಸ್ಥೆಯ ಅರ್ಥಾತ್ ಧರ್ಮದ ಕೈಯೇ ಮೇಲಾ ಗುತ್ತಿತ್ತು. ಭಾರತದ ಅಂದಿನ ದಾಸ್ಯದ ವಿರುದ್ಧ ಬುದ್ಧನು ಬಂಡು ಹೂಡಿ ದಾಗ ತುಸುಕಾಲ ಅದಕ್ಕೆ ಯಶಸ್ಸು ಸಿಕ್ಕರೂ ಕೊನೆಗೆ ವರ್ಣಾಶ್ರಮ ವೈದಿಕ ಧರ್ಮದ ರಾಜ್ಯವೇ ಪ್ರಬಲವಾಯಿತು. ಅಂತೆಯೇ ಆ ವರೆಗಿನ ಕಾಲಕ್ಕೆ ಅರ್ಥಪೂರ್ಣವಾಗಿ ಧಾರ್ಮಿಕ ಯುಗವೆಂದು ಹೆಸರು ಬಿದ್ದಿರಲು ಸಾಕು.)

ಸೃಷ್ಟಿಯು ಜಡವಾದರೂ ಸಮಾಜ ಚೈತನ್ಯವುಳ್ಳದ್ದಾಗಿದೆ. ಚೈತ ನ್ಯದ ಸ್ವಭಾವ ಯಾವಾಗಲೂ ಪರಿವರ್ತನಶೀಲವಾದುದು. ಪರಿವರ್ತನಹೊಂದುವಂತಹದೂ ನಿತ್ಯ

ಸಾವಿನ್ಯವನ್ನು ಪಡೆಯುವಂಥದೂ ಆಗಿರುವದರಿಂದ, ಅದನ್ನು ಯಾವುದೇ ಸ್ಥಿತಿಯಲ್ಲಿ ನಿಲ್ಲಿಸಹೋದರೂ ಸುಲಭಸಾಧ್ಯವಲ್ಲ. ಜಾಗತಿಕ ಇತಿಹಾಸದ ಸಾಮಾಜಿಕ ಸ್ಥಿತ್ಯಂತರ ಕ್ರಮದಂತೆ ಧಾರ್ಮಿಕ ಯುಗದಿಂದ ಅದು ಮುಂದು ವರಿಯಲೇಬೇಕಾಯಿತು. ಅನ್ನ ನೀರುಗಳನ್ನು ಪಡೆಯಲು ಅನುಕೂಲ ಮಾಡಿಕೊಡುವ ಪುರೋಹಿತ ವರ್ಗಕ್ಕಿಂತ, ತಮ್ಮನ್ನೂ ತಾವು ಗಳಿಸಿದ ಸಿರಿ-ಸಂಪತ್ತನ್ನೂ ಸಂರಕ್ಷಿಸುವ ಶಕ್ತಿಯುಳ್ಳ ವೀರರ (ಕ್ಷತ್ರಿಯರ) ಪ್ರಾಧಾನ್ಯ ಬೆಳೆಯತೊಡಗಿತು. ಅನುಭವದಿಂದ ದೇವತೆಗಳೆಂದು ತಿಳಿದ ಗ್ರಹಗಳು ನೈಸರ್ಗಿಕವಾಗಿವೆ ಎಂದಾಗಲೀ, ಧನೋತ್ಪಾದನೆಯು ಬೆಳೆದು ಗಳಿಸುವದ ಕ್ಕಿಂತ ಉಳಿಸುವ ಅಥವಾ ಉಳಿಸಿಕೊಡುವ ಶಕ್ತಿಯ ಅವಶ್ಯಕಥೆಯು ಹೆಚ್ಚಾಯಿತಾಗಲೀ ಬ್ರಾಹ್ಮಣರ ವರ್ಚಸ್ಸು ಕಡಿಮೆಯಾಗಿ ಕ್ಷತ್ರಿಯರ ಬಲ ಬೆಳೆಯಿತು. ಧಾರ್ಮಿಕ ದಾಸ್ಯ ಯುಗದಿಂದ ಮಾನವಸಮಾಜ ಒಂದು ಮೆಟ್ಟಲು ಮುಂದೆ ಸರಿಯಿತು. ಹಿಂದೆ ಧರ್ಮ ಛತ್ರದ ಕೆಳಗಿದ್ದ ಧರ್ಮ ಮಾರ್ತಾಂಡರು ಹೊಸ ಮನ್ವಂತರದ ರಾಜ್ಯ ಶಕ್ತಿಯ ಸಮರ್ಥನೆಯಲ್ಲಿ ಸಂರಕ್ಷಣೆ ಪಡೆಯುವ ದಾರ್ಶನಿಕರ ಪಟ್ಟಶಿಶ್ಯರಾದರು. ದೇವಶಕ್ತಿಯ ಪೂಜೆಯೇ ರಾಜಶಕ್ತಿಯ ಪೂಜೆಯಾಯಿತು. ಅದೇ ಬರಬರುತ್ತ ವೀರ ಪೂಜಕವಾಯಿತು. ರಾಜನು ಪ್ರತ್ಯಕ್ಷ ದೇವನಾದನು. ಎನಾದರೂ ಅಪ್ರತ್ಯಕ್ಷ ದೇವನ ಅಸ್ತಿತ್ವಕ್ಕೆ ಧಕ್ಕೆ ಬಂದಿರಲಿಲ್ಲ. ಧಾರ್ಮಿಕಯುಗದ ಮುಂದಿನ ದಾರ್ಶನಿಕ ಯುಗದಲ್ಲಿಯೂ ದೇವತೆಗಳ ಅಸ್ತಿತ್ವ ಯಥಾಪ್ರಕಾರವಾಗಿತ್ತು, ಆದ ಅದಲುಬದಲು ಕೇವಲ ಸತ್ತೆಯ ಹಿರಿತನದಲ್ಲಾಯಿತು. ಧರ್ಮಗುರು ಗಳ ಕೈಲಿದ್ದ ಸಮಾಜಸತ್ತೆ ರಾಜರ ಕೈಲಿ ಬಂತು. ಸತ್ತೆಯನ್ನು ಕಳೆದು ಕೊಂಡ ಧರ್ಮ ಗುರುಗಳು ರಾಜಗುರುಗಳಾದರು. ಇನ್ನಷ್ಟು ಅನುಕೂಲ! ಹೊಣೆ ಕಡಿಮೆ! ಹಿರಿತನ ಹೆಚ್ಚು! ಪ್ರಯೋಜನಕಾರೀ ಪ್ರಗತಿ ಯಾರಿಗೆ ಬೇಡ?

ಹೀಗೆ ಸ್ಥಿತ್ಯಂತರವಾದರೂ ದಾಸ್ಯತ್ವ ಕಡಿಮೆಯಾಗಲಿಲ್ಲ. ಒಂದು ಅನುಕೂಲ ಮಾತ್ರ ಬಂತು. ಬಲವುಳ್ಳ ರಾಜನ ಪ್ರಜರ ದಾಸ್ಯಕ್ಕೆ ತುಸು ವಿರಾಮ ಸಿಕ್ಕಿತು. ತನ್ನ ಪ್ರಭುಶಕ್ತಿ ಇನ್ನೊಂದು ನಾಡನ್ನು ಗೆದ್ದಾಗ, ಆ ನಾಡಿಗೆ ನಾಡೇ ಬಿಟ್ಟಿಯಾಗಿ ಸಿಕ್ಕುತ್ತಿದ್ದರೆ, ಅವರ ಗುಳಿತೆ ಗೆದ್ದ ನಾಡಿನ

ಗುಲಾಮನೂ ಪ್ರಭುವೇ! ಈ ಮಬ್ಬಿನಲ್ಲಿಯೇ ಪ್ರಭುಶಕ್ತಿ ಪ್ರಾಬಲ್ಯ ಪಡೆದದ್ದು. ಆಗ ಇನ್ನೊಂದು ನಾಡನ್ನು ಗೆಲ್ಲುವುದಕ್ಕೆ ಕೇವಲ ಶಸ್ತ್ರಬಲದ ಸ್ವಾರ್ಥ ಒಂದೇ ಹೊಡೆದಾಡದೇ ಅದಕ್ಕೆಲ್ಲಾ ಧರ್ಮವೂ ಬೆಂಬಲವಾಗಿ ನಿಂತಿದ್ದಿತೆಂಬು ದನ್ನು ಲಕ್ಷದಲ್ಲಿಡಬೇಕಾಗಿದೆ. ಒಂದು ರಾಜ್ಯ ಇನ್ನೊಂದು ರಾಜ್ಯಕ್ಕೆ ದಂಡೆತ್ತಿ ಹೋಗುವದು ಧರ್ಮಕ್ಕಾಗಿ. ಅದು ಇನ್ನೊಂದು ರಾಜ್ಯವನ್ನು ಗುಲಾಮ ಗೊಳಿಸುವುದಕ್ಕಾಗಿ ಮಾಡುವ ಯುದ್ಧ: ಧರ್ಮಯುದ್ಧ. (ಜಿಹಾದ) ಕೆಲಕಾಲ ಈ ಆಟ ಮಾನವಕುಲಕ್ಕೆ ಸುಖವಾಗಿ ಕಂಡಿರಬೇಕು. ಮುಂದೆ ಬರಬರುತ್ತ ಗೆದ್ದ ನಾಡೇ ಒಂದೊಂದು ಸಲ ಸೋತು ತಾನೇ ಗುಲಾಮ ವಾಗುವ ವೇಳೆಗೆ ಬಂದಾಗ ಬಡಿದಾಡಿದ ರಾಜಶಕ್ತಿ ನಿರ್ನಾಮವಾದರೂ ಅನು ಭವಿಸಲು ಪ್ರಜಾಶಕ್ತಿ ಜೀವಂತವಿರುತ್ತಿತ್ತಷ್ಟೇ? (ಗೆದ್ದರಾಷ್ಟ್ರ ಸೋಲುವದು, ಸೋತರಾಷ್ಟ್ರ ಗೆದೆಯುವುದು ನಡೆದಂತೆ ಪ್ರಜೆಗಳಲ್ಲಿ ವಿವೇಕೋದಯವಾಗ ಹತ್ತಿತು. ಅದಕ್ಕೆ ರಾಜಶಕ್ತಿಯಂತೆ ಸಶಸ್ತ್ರ ಯುದ್ಧ ಸಾಧ್ಯವಿರಲಿಲ್ಲ. ಕಾರಣ ವೆಂದರೆ ಅದಕ್ಕೆ "ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ' ಎಂದು ತಾನು ಸ್ಥಾಪಿಸಿದ ಚಾತುರ್ವರ್ಣ್ಯಗಳನ್ನು ಮುಟ್ಟಹೋದವರನ್ನು ಮುಕ್ಕಲು ಬರುವೆನೆಂಬ ಆಶ್ವಾಸನವಿದ್ದಿತಲ್ಲವೇ? ತ್ರಿಕಾಲಾಭಾಧಿತವೆಂದು ನಿಯಮಿಸಿ ಕೊಟ್ಟ ಕರ್ತವ್ಯವನ್ನು ಬಿಟ್ಟು ಪ್ರಜಾಧರ್ಮವೇ ರಾಜಧರ್ಮದ ಮೇಲೆ ಕೈಮಾಡುವದೆಂವರೇನು? ಸಿರಿ ಬರಲಿ, ಉರಿ ಬರಲಿ, "ಸ್ವಧರ್ಮೇ ನಿಧನಂ ಶ್ರೇಯಃ" ಸರಿ. ಈ ಮಾತು ಪ್ರಬಲಸಾದ ಪ್ರಭುಶಕ್ತಿಗೆ ಮಾತ್ರ ಅನ್ವಯಿಸಲಿಲ್ಲ. ಕೆಲಸಲ ಅದಕ್ಕೆ ಪ್ರಜಾಶಕ್ತಿ ಸಶಸ್ತ್ರವಾಗಿ ಬುದ್ಧಿಗಲಿಸು ವುದರಲ್ಲಿ ಸೋತರೂ ನಿಶ್ಶಸ್ತ್ರ ಕ್ರಾಂತಿಯನ್ನು ಕೂಡ ಮಾಡಿ ಬುದ್ಧಿಗಲಿಸ ಲೆತ್ನಿಸಿದೆ. ಅದೆಷ್ಟೋ ಸಲ ಸೋಲುವೆನೆಂದು ಕಂಡಾಗ ಪ್ರಭುಶಕ್ತಿಯು ಧರ್ಮವನ್ನು ಮುಂದೆ ಮಾಡಿದೆ. ಮತ್ತೆ ಎಚ್ಚತ್ತ ಪ್ರಜಾಶಕ್ತಿಯನ್ನು ರಾಜ ಕೀಯ ಮೋಹಜಾಲದಿಂದೆಳೆದು ಧರ್ಮದ ಅಫುವಿನ ಗುಳಿಗೆಗಳಿಂದ ಪ್ರಜ್ಞೆ ತಪ್ಪಿಸಿದೆ. ಆ ಪ್ರಜ್ಞೆ ತಪ್ಪಿದ ಕಾಲದಿಂದೆಚ್ಚತ್ತು ಮತ್ತೆ ಮುನ್ನಗ್ಗಬೇಕೆಂದಾ ಗಲೇ ಭಾರತದ ಭವಿಷ್ಯ ಪುರಾಣ, ಬೆಳಗಾದ್ದರಿಂದ, ಅಲ್ಲಿಯೇ ನಿಂತಿತು. ಧಾರ್ಮಿಕ ದಾಸ್ಯದಿಂದ ಮುಂದೆ ಸರಿದೆವೆನ್ನುವುದರಲ್ಲಿಯೇ ರಾಜಕೀಯ ದಾಸ್ಯ ಪ್ರಾರಂಭವಾಯಿತು. ರಾಜಕೀಯ ದಾಸ್ಯದಿಂದ ಪಾರಾಗಬೇಕೆನ್ನುವಷ್ಟ ರಲ್ಲಿಯೇ ಇಡೀ ಭಾರತ ಜನಾಂಗವೇ ಇನ್ನೊಂದು ಪರಕೀಯ ಪ್ರಭುಶಕ್ತಿಯ

ಅಂಕಿತದಲ್ಲಿ ರಾಜಕೀಯ ದಾಸ್ಯವನುಭವಿಸುವ ದುರ್ದೈವಿ ಘಟನೆ ನಡೆದದ್ದರಿಂದ ನಮ್ಮ ಪ್ರಗತಿ ನಿಂತಿತು. ಇತಿಹಾಸ ಗವಿ ಸೇರಿತು. ಈ ವರೆಗಿನ ಇತಿಹಾಸದ ವಿವರಣೆ ಮಧ್ಯಯುಗದವರೆಗಿನ ಅಖಿಲ ಪ್ರಪಂಚದ ಮಾನವ ಕುಲಕ್ಕೇ ಅನ್ವಯಿಸುವದು. ಅಂದಮೇಲೆ ಬರಿಯ ಭಾರತದ ಪಾಡೇನು? ಈ ಪರೆಗಿನ ರಾಜಕೀಯ ಇತಿಹಾಸವೆಂದರೆ ಶ್ರೇಷ್ಟವೆನ್ನಿಸಿಕೊಳ್ಳುವ ಅಲ್ಪಸಂಖ್ಯಾಕರು ಕನಿಷ್ಠರೆನ್ನಿಸುಕೊಳ್ಳುವ ಬಹುಸಂಖ್ಯಾಕರನ್ನು ಆಳುವದರ ವರ್ಣನೆಯೇ ಆಗಿರುತ್ತದೆ. ಅದು ನಮಗೆ ಮಾತ್ರ ಕಾಲಮಹಿಮೆಯಾಗಿ ಮುಂದಿಗೆ ಮಹಿಮೆಯ ಕಾಲವಾಯಿತು. ಅಷ್ಟೇ!

(ಮಹಿಮೆಯುಳ್ಳದ್ದಿರಲಿ, ಇಲ್ಲದ್ದಿರಲಿ ಕಾಲ ಕೇಳುತ್ತದೆಯೆ? ಚಲಿಸುತ್ತಲೇ ಇದೆ. ಪ್ರಪಂಚದಲ್ಲಿ ಎಷ್ಟೋ ರಾಷ್ಟ್ರಗಳು ಸ್ವತಂತ್ರವಾಗಿರುವದಿಲ್ಲವೇ? ತಾವು ನಿಂತಲ್ಲಿ ನಿಂತರೂ ಜಗತ್ತೇಕೆ ನಿಲ್ಲಬೇಕು? ನಮ್ಮಂತೆಯೇ ಸರ್ವತಂತ್ರ ಸ್ವತಂತ್ರ ಪ್ರಭುಶಕ್ತಿಯ ಬಲುಮೆಗೆ ಬೇಸತ್ತ ಜನತೆ ಮುಂದರಿಯಿತು. ಇನ್ನುಳಿದ ರಾಷ್ಟ್ರಗಳು ಸಕಲ ಯುಕ್ತಿ, ಶಕ್ತಿಗಳಿಂದ ಪ್ರಗತಿಯನ್ನು ಸಾಧಿಸಲೆತ್ನಿಸಿದವು. ಅವುಗಳ ಇತಿಹಾಸ ಇತ್ತೀಚಿನದಾದ್ದರಿಂದ ವಿಹಂಗಮ ದೃಷ್ಟಿಯ ಅಗತ್ಯವಿಲ್ಲ. ತುಸು ಸಿಧಾನವಾಗಿ ನೋಡಲು ಸಾಧ್ಯವಿದೆ.

ಕ್ರಿ. ಶ. ೧೬ನೇ ಶತಮಾನಕ್ಕೆಂಟರೆ ನಮ್ಮ ಪ್ರಗತಿ ಕುಂಠಿತವಾದ ಕಾಲಕ್ಕೇನೆ ಯುರೋಪು ಖಂಡದ ಕೆಲ ರಾಷ್ಟ್ರಗಳು ರಾಜಸತ್ತೆಯನ್ನು ಕಿತ್ತೊಗೆದು ಪ್ರಜಾಸತ್ತೆಗೆ ಪಟ್ಟ ಕಟ್ಟಿದುವು. ೧೬೪೯ನೇ ಜನವರಿ ೩೦ಕ್ಕೆ ಮೊದಲ ಚಾರ್ಲ್ಸ ದೊರೆಯನ ತಲೆಗಡಿದು ಇಂಗ್ಲಂಡವು ಪ್ರಜಾಪ್ರಭುತ್ವ ಪಡೆಯಿತು. ೧೮ನೇ ಶತಮಾನದಲ್ಲಿ ಅಮೇರಿಕ, ಫ್ರಾನ್ಸಗಳಲ್ಲಿ ಕ್ರಾಂತಿಗಳಾಗಿ ಅನಿಯಂತ್ರಿತ ಪ್ರಭುಶಕ್ತಿ ಪಾತಾಳಲೋಕಕ್ಕೆ ಪ್ರಯಾಣ ಬೆಳೆಯಿಸಿತು. ಅಮೇರಿಕೆಯಲ್ಲಿ ನಡೆದ ಕ್ರಾಂತಿಯಲ್ಲಿ ಯುರೋಪದ ಸ್ವಯಂಪ್ರೇರಿತ ಸ್ವಯಂಸೇವಕರು (ಹೆಚ್ಚಾಗಿ ಫ್ರಾನ್ಸದಿಂದ) ಹೋಗಿದ್ದರು. ಅವರು ಪ್ರಜಾಪ್ರಭುತ್ವಕ್ಕಾಗಿ ಅಲ್ಲಿ ನಡೆದ ಕ್ರಾಂತಿಯನ್ನು ಕಣ್ಣಾರೆ ಕಂಡುದರ ಪರಿಣಾಮವಾಗಿ ಫ್ರಾನ್ಸದಲ್ಲಿಯೂ ಕೂಡ ೧೭೮೯ರಲ್ಲಿ ಕ್ರಾಂತಿಯ ಕಿಡಿ ಸಿಡಿಯಿತು. ೧೮ನೇ ಶತಮಾನದಲ್ಲಿ ನಡೆದ ಆ ಕ್ರಾಂತಿಯಂತಹ ಪ್ರಚಂಡ ಆಂದೋಲನ ಪ್ರಪಂಚದ ಇನ್ನಾವ ಭಾಗದಲ್ಲಿಯೂ ಆಗ ಆಗಲಿಲ್ಲ. ಆದರ ಫಲಸ್ವರೂಪವಾಗಿಯೇ

ರ್ಣನೆಯ ಶತಮಾನದ ಕೊನೆಗೆ ಯುರೋಪ ಖಂಡಕ್ಕೇನೆ ಪ್ರಜಾಪ್ರಭುತ್ವ ಮಾನ್ಯವಾಯಿತು. ಅಲ್ಲದೇ ಜಗತ್ತಿನ ಲಕ್ಷ್ಯ ಆ ಕಡೆಗೆ ಸೆಳೆದು ಪ್ರಜಾಸತ್ತೆಯು ಜಗನ್ಮಾನ್ಯತೆಯನ್ನು ಸಂಪಾದಿಸಿತು—ಎಂದು ಹೇಳಲಡ್ಡಿ ಇಲ್ಲ. ಇಲ್ಲಿಗೆ ಮಾನವನ ಇತಿಹಾಸ ಇನ್ನೊಂದು ಮೆಟ್ಟಲು ಮುಂದೆ ಸರಿಯಿತು.

ಧಾರ್ಮಿಕ ದಾಸ್ಯದಿಂದ ರಾಜಕೀಯ ದಾಸ್ಯಕ್ಕೆ ಬಂದ ಜಾಗತಿಕ ಇತಿಹಾಸ ಹದಿನಾರನೇ ಶತಮಾನದವರೆಗೆ ಭಾರತವು ಸಾಧಿಸಿದ ಪ್ರಗತಿಗಿಂತ ಹೆಚ್ಚಿನದನ್ನೇನೂ ಸಾಧಿಸಲಿಲ್ಲ. ಹಾಗೆ ನೋಡಿದರೆ ಸ್ತ್ರೀರು ತಾನೆಲ್ಲಿದ್ದರೂ ಸಮಪಾತಳಿಯನ್ನು ಕಾಯ್ದುಕೊಳ್ಳುವಂತೆ ನಿಸರ್ಗವು ಜಗತ್ತಿನ ಸಮಪಾತಳಿಯನ್ನು ಕಾಯುವದಕ್ಕಾಗಿ ಭಾರತವನ್ನು ಹಿಡಿದುಜಗ್ಗಿರಬೇಕೆನ್ನಸುತ್ತದೆ. ಆದರೇನು! ಸ್ವಾಭಾವಿಕವಾಗಿಯೇ ಹಿರಿತನ ಪಡೆದ ಭಾರತ ಜಗತ್ತಿಗೆ ದಾರಿ ತೋರಿಸಬೇಕಾಗಿದೆ. ಆ ಹೊಣೆ ಅದರ ಮೇಲೆ ಹೆಚ್ಚಿಚ್ಚಾಗಿ ಬೀಳಹತ್ತಿದ್ದುದು ಸ್ಪಷ್ಟವಾಗಿ ಕಾಣುತ್ತಿದೆ

ಭಾರತವನ್ನು ದಾಸ್ಯದಲ್ಲಿಟ್ಟು ಮುಂದೆ ಜಿಗಿದೆನೆಂದು ಅಖಂಡ ಕೀರ್ತಿಯ ಹೆಮ್ಮೆ ತೋಡಿಕೊಳ್ಳುವ ಜನಾಂಗಗಳ ಮೋರೆಯ ಮೇಲಿನ ದೃಷ್ಟಿಯ ಕಪ್ಪು ಕಲೆ ಎದ್ದು ಕಾಣುತ್ತಿದೆ. ನಮ್ಮ ಪ್ರಗತಿ ಕುಂಠಿತವಾದ ಕಾಲಕ್ಕೇನೆ ರಾಜಕೀಯ ದಾಸ್ಯವನ್ನು ಹರಿದೊಗೆದೆವೆಂದು ಜಂಬ ಕೊಚ್ಚುವ ಇಂಗ್ಲಂಡು ಅರ್ಥಿಕ ದಾಸ್ಯದಲ್ಲಿ ತೊಳಲಾಡುತ್ತಿದೆಯಲ್ಲವೇ? ಸಾಮ್ರಾಜ್ಯದ ಸುಲಿಗೆಯಲ್ಲಿ ಸಿಕ್ಕುತ್ತಿರುವ ಪರಾನ್ನದಿಂದ ಆ ದಾಸ್ಯ ಅಷ್ಟೊಂದು ಬಾಧಿಸುತ್ತಿರಲಿಕ್ಕಿಲ್ಲ. ಸಾಮ್ರಾಜ್ಯದ ಹಿಡಿತದಲ್ಲಿ ಸಿಕ್ಕದೇ ಸ್ವಾತಂತ್ರ್ಯವನ್ನು ಉಪಭೋಗಿಸುತ್ತಿರುವ ಇಟಲಿ, ಜರ್ಮನಿಗಳಂತಹ ಸರ್ವತಂತ್ರ ಸ್ವತಂತ್ರ ರಾಷ್ಟ್ರಗಳಲ್ಲಿರುವ ಆರ್ಥಿಕ ದಾಸ್ಯವು ಸಾಮ್ರಾಜ್ಯಗಳನ್ನಿಟ್ಟುಕೊಂಡು ಮೆರೆಯುತ್ತಿರುವ ರಾಷ್ಟ್ರಗಳ ಕೀರ್ತಿಗೆ ಹತ್ತಿದ ಕಲಂಕವನ್ನು ಎತ್ತಿ ತೋರಿಸುತ್ತಿವೆ. ಸಾಮ್ರಾಜ್ಯವಿಹೀನ ರಾಷ್ಟ್ರಗಳ ಮುಂಕುಬುದ್ಧಿಗೆ ತಮ್ಮ ಅರ್ಥಿಕ ದಾಸ್ಯದಿಂದ ಪಾರಾಗುವ ಇನ್ನೊಂದು ಸುಲಭ ದಾರಿಯೇ ಸಿಕ್ಕದಾಗಿದೆ. ನೆರೆಮನೆಯವಳು ಸರಿಗೆ ಹಾಕಿಕೊಂಡರೆ ಈಚೆ ಮನೆಯವಳು ಅಂಥ ಸರಿಗೆ ದೊರಕಿಸಲು ಗಂಡನಿಂದ ಉರುಲು ಹಾಕಿಸಿಕೊಳ್ಳಲು ಸಿದ್ಧಳೇ. ಸುಲಭ ಮಾರ್ಗ ತಿಳಿಯದ ಮೂಢಳಿಗೆ ಉರುಲಿನ ಹೊರತು ಗತಿ ಎಲ್ಲಿ? ಸಾಮ್ರಾಜ್ಯದ ಸರಿಗೆ ತೊಟ್ಟ

ಇಂಗ್ಲಂಡನ್ನು ನೋಡಿ, ನೆರೆನಾಡಾದ ಇಟಲಿ, ಜರ್ಮನಿಗಳ ಜನಾಂಗ ಮುಸಲಿನಿ-ಹಿಟ್ಲರರ ಉರುಲಿಗೆ ಕೊರಳನ್ನು ಕೊಟ್ಟವೆ.

ಇಂಗ್ಲಂಡದ ಜನತೆಯೂ ಆರ್ಥಿಕ ದಾಸ್ಯದ ಅರಿವಿನಿಂದ ಎಚ್ಚರಿಯದೆ ಇರಲಿಲ್ಲ. ಸುಸಂಸ್ಕೃತ ನಾಡುಗಳ ಸಂಪರ್ಕ ಇನ್ನುಳಿದ ನಾಡುಗಳಿಗಿಂತ ಹೆಚ್ಚಾಗಿ ಅದಕ್ಕೆ ಆಗಿದೆಯಾಗಲೀ ಮುಂಬರುವ ಗೋಳಿನ ಚಿಹ್ನದ ಬುದ್ಧಿ ಬೆಟ್ಟಿಯಾಗಿತ್ತಾಗಲೀ, ಮಂದಸ್ವರೂಪದಲ್ಲಿದ್ದ ಆರ್ಥಿಕ ದಾಸ್ಯದಿಂದ ನುಸುಳಲು ದಾರಿ ಹುಡುಕಿತ್ತು. ಆದರೆ ಸಾಧನ ಅಷ್ಟು ಗಟ್ಟಿಮುಟ್ಟಾಗಿರಲಿಲ್ಲ. ಬಾಹುಬಲಕ್ಕಿಂತ ಬುದ್ಧಿಬಲದ ಮೇಲೆ ಅವರ ಭರವಸೆ ಹೆಚ್ಚಿತ್ತು. ಅದರ (ಉಪಯೋಗ ಮಾಡಿ ನೋಡಿ) ಅಸಮರ್ಥತೆಯನ್ನು ಕಂಡುಕೊಂಡಿತ್ತು. ಮುಂದೆ ಇನ್ನಾವ ದಾರಿ ಹುಡುಕುತ್ತಿತ್ತೋ? ಜಾಗತಿಕ ಯುದ್ಧದ ಬೇಗೆ ಮುಸುಕಿದ್ದರಿಂದ ಹಾಗೂ ಅದು ಹೆಚ್ಚಾಗಿ ತನ್ನ ಮೈ ಮೇಲೆಯೇ ಬಂದದ್ದರಿಂದ ಅದರ ಪ್ರಗತಿಯೂ ಅಲ್ಲಿಯೇ ನಿಂತಿದೆ. ಅದರ ಯುದ್ಧೋತ್ತರ ಬೆಳವಣಿಗೆಯ ಬಗ್ಗೆ ಅನೇಕರು ತರ್ಕಬದ್ಧವಾಗಿ ಪ್ರತಿಪಾದಿಸುವ ಮಾತುಗಳು ವ್ಯಾಸಪೀಠವನ್ನಲಂಕರಿಸುತ್ತಿದ್ದರೂ ಅದೆಲ್ಲ ಭವಿಷ್ಯದೊಡಲಿನಲ್ಲಿನ ಮಾತಾಗಿದೆ.

ಸಾಮ್ರಾಜ್ಯದ ಅನುಕೂಲತೆ ಇದ್ದ ಹಾಗೂ ಇಲ್ಲದ ರಾಷ್ಟ್ರಗಳಿಗಿಂತಲೂ ಜಾಣತನದ ಮಾರ್ಗ ಒಂದನ್ನು ರಶಿಯವು ಪ್ರಯೋಗಿಸಿದೆ. ತನ್ನಲ್ಲಿ ಮನೆ ಮಾಡಿಕೊಂಡಿರುವ ಆರ್ಥಿಕ ದಾಸ್ಯವನ್ನು ಹೊಡೆದೊಗೆಯುವುದಕ್ಕಾಗಿ ನಡೆಯಿಸಿದ ರಕ್ತಸ ಕ್ರಾಂತಿ ಆ ಮಾರ್ಗವನ್ನು ಸುಗಮವಾಗಿ ತೋರಿಸಿಕೊಡುತ್ತದೆ. ಇಂಗ್ಲಂಡವು ಪ್ರಯೋಗಿಸಿದ ಬುದ್ಧಿಬಲದ ಅಯಶಸ್ವಿಯತೆಯನ್ನು ಕಂಡೇ ರಶಿಯವು ಇನ್ನೊಂದು ಸಾಧನವಾದ ಬಾಹುಬಲವನ್ನು ಮೊರೆಹೊಕ್ಕು ಈಗಂತೂ ಬಹುಮಟ್ಟಿಗೆ ಯಶ ಸಂಪಾದಿಸಿದೆ. ಸಾರ್ವತ್ರಿಕವಾದ ಈ ದಾಸ್ಯದಿಂದ ಪಾರಾಗುವ ಇನ್ನೊಂದು ಮಾರ್ಗವು ಜಗತ್ತಿನಲ್ಲಿ ಹುಟ್ಟದೇ ಇದ್ದಿದ್ದರೆ ರಶಿಯದ ಸಾಧನವೇ ಜಗನ್ಮಾನ್ಯವಾಗಬಹುದಾಗಿತ್ತು. ಹಾಗಾಗಿದ್ದರೆ ಜಾಗತಿಕ ಹಿರಿತನದ ಪಾಲು ಭಾರತಕ್ಕೆಲ್ಲಿ? ವಿಧಾತನ ಸಂಕಲ್ಪ ಹಾಗಿಲ್ಲ. ಎಲ್ಲ ಬಗೆಯ ದಾಸ್ಯವನ್ನು ಹರಿದೊಗೆದು ಕೊನೆ ಬಾಳುವ, ಶಾಂತಿ ತರುವ, ಹಾಗೂ ಬುದ್ಧಿಬಲ, ಬಾಹುಬಲಗಳಿಗಿಂತಲೂ ಮಿಗಿಲಾಗಿರುವ ಆತ್ಮಬಲ ಬೆಂಬಲವುಳ್ಳ ಸತ್ಯಾಗ್ರಹೀ ಸಾಧನವು ಭಾರತದಲ್ಲಿ ಉದಯಿಸಿದೆ. ಮಾನವ ಸಂಸ್ಕೃತಿಯು ಸತ್ಯಸಂದೇಶವನ್ನು ಜಗತ್ತಿಗೆ ಸಾರುತ್ತಿದೆ.

ಹಾಗಿಲ್ಲದೆ ಹೋಗಿದ್ದರೆ ಭಾರತದ ದೊಡ್ಡಿಸ್ತಿಕೆಯು ಬಡಿವಾರವೇನು? ಈವರೆಗೆ ನೋಡುತ್ತ ಬಂದ ಇತಿಹಾಸದ ನಮ್ಮ ವಿಹಂಗಮ ದೃಷ್ಟಿಯಲ್ಲಿ ನಮ್ಮ ಆಡಳಿತದ ಅಸಫಲತೆಯು ದೃಷ್ಟಿದೋಷ ಕೂಡಿರುವದರಿಂದ ಇನ್ನು ಸತ್ಯವಾದ ಇತಿಹಾಸ ನಮ್ಮ ಮನದ ಮುಂದೆ ಮೂಡದಾಗಿದೆ. ಹಾಗೆ ನೋಡಬೇಕೆಂದರೆ ಎಂದೋ ಒಮ್ಮೆ ಮುಂದಿನ ಭವಿಷ್ಯದ ಕಡೆಗೆ ದೂರದೃಷ್ಟಿ ಇಟ್ಟು ಭಾರತಕಾರರು ಚಿತ್ರಿಸಿದ ಸತ್ಯಯುಗದ ರಬ್ಬಚಿತ್ರ ಇಂದಿಗೂ ಪ್ರಪಂಚದ ಎಲ್ಲ ಜಾಣ ಜನಾಂಗಗಳ ಆದರ್ಶವಾಗಿದೆ.

ನೈವ ರಾಜ್ಯಂ ನರಾಜಾಸಿನ್ನಚ ದಂಡೋ ನ ದಂಡಿತಃ।
ಧರ್ಮೇಣೈವ ಪ್ರಜಾಸರ್ವಾಃ ರಕ್ಷಂತಿಸ್ಮ ಪರಸ್ಪರಂ ॥

ರಾಜನಿಲ್ಲ, ರಾಜ್ಯವಿಲ್ಲ, ದಂಡಿಸುವವರಿಲ್ಲ, ದಂಡಿಸಿಕೊಳುವವರಿಲ್ಲ; ಇಂತಹ ಸಮಾಜ ವ್ಯವಸ್ಥೆ ಯಾರ ಆದರ್ಶವಾಗಲಾರದು.? ದಂಡಹೀನ ವರ್ಗ ರಹಿತ ಶುದ್ಧ ಸಮಾಜ ರಚನೆ, ಶುದ್ಧ ಸಾಧನಗಳಿಂದಲೇ ಸಾಧ್ಯವಲ್ಲವೇ? ಕೃತ್ರಿಮ ಸಾಧನಗಳು ಕೆಲಕಾಲ ಯಶಸ್ಸನ್ನು ತಂದುಕೊಟ್ಟರೂ ಅದು ಸ್ಥಿರ ವಾದದ್ದಲ್ಲ. ಅಜ್ಞಾನ, ದಾರಿದ್ರ್ಯ, ಅಂಧಶ್ರದ್ಧೆ, ಅಸಮಾನತೆಗಳ ಕಹಿ ಫಲ ಗಳು ಮಾನವ ಕಲ್ಪವೃಕ್ಷಕ್ಕೆ ಎತ್ತ ನೋಡಿದತ್ತ ತಾನೇತಾನಾಗಿ ತೊನೆದಾ ಡುತ್ತಿರುವಾಗ, ಅವುಗಳನ್ನೆಲ್ಲ ಹರಿದೊಗೆದು ಸುಜ್ಞಾನ, ಸಂಪತ್ತು, ಸತ್‌ಶ್ರದ್ಧೆ ಸಮತೆಗಳ ಅಮೃತ ಫಲಗಳು ಬಿಡುವಂತೆ ಮಾಡಬೇಕಾದರೆ ಮರದ ಬೇರಿಗೇ ಹೋಗಬೇಕು. ಇಂದಿನ ಬೆಳೆಗೆ ನಾಳಿನ ಫಲವಿದ್ದರೆ ನಿನ್ನಿನ ಬೀಜ ಇಂದಿನ ಬೆಳೆಗೆ ಕಾರಣವಾಗಿರುತ್ತದೆ.

ಚಾತುರ್ವರ್ಣ್ಯಂ ಮಯಾ ಸೃಷ್ಟಂ' ಅನ್ನುವ ನಾಲ್ಕು ವರ್ಣಗಳು ಗುಣಕರ್ಮ ವಿಭಾಗಶಃ ಆಗಿದ್ದವೇ ಹೊರತು ವಿಷಮತೆಯ ವಿಷಬೀಜಗಳಿಂದ ಬೆಳೆದ ವಿಗ್ರಹದ ವರ್ಗರೂಪೀ ವರ್ಣಗಳಾಗಿರಲಿಲ್ಲ. ಎಂತಹ ವರ್ಗವಿರಹಿತ ಸಮಾಜವನ್ನು ಕಟ್ಟುವೆವೆಂದರೂ ಸ್ವಾಭಾವಿಕವಾದ ಅಸಮಾನತೆಗಳು ತ್ರಿಕಾಲಾಬಾಧಿತವಾದವುಗಳೆಂಬ ಮಾತನ್ನು ಒಪ್ಪಲೇಬೇಕು. ಸ್ವಭಾವ, ರೂಪ, ಬುದ್ಧಿಬಲ, ಬಾಹುಬಲ ಮೊದಲಾದ ವ್ಯಕ್ತಿವೈಶಿಷ್ಟ್ಯಗಳನ್ನು ಸಮ ಗೊಳಿಸುವದೆಂದರೇನು? ನಿಜವಾದ ಸಮತೆ ಎಂದರೆ ಎಲ್ಲವನ್ನೂ ಏಕತಂತ್ರ ಗೊಳಿಸುವ ನೆಲಸಮತಾವಾದವಾಗಿರದೇ ಅನೇಕ ತಂತ್ರಗಳನ್ನು ಏಕಸೂತ್ರ

ಗೊಳಿಸುವ ಶುದ್ಧ ಸಮತಾವಾದವಾಗಿರುತ್ತದೆ. ಗೀತೆಯು ಕೃಷ್ಣಪರಮಾತ್ಮ ಏಕತಂತ್ರಧಾರಿ ಎಂದು ಹೇಳಿಕೊಳ್ಳಲಿಲ್ಲ. ಏಕಸೂತ್ರಧಾರಿ ಎಂದು ಕರೆಯಿಸಿಕೊಂಡು ಸ್ವಾಭಾವಿಕವಾದ ವರ್ಣಗಳ ಬಗ್ಗೆ ರಶಿಯರನ್ನದರಾಗಲೀ, ಭಾರತೀಯರದಾಗಲೀ ಬಡಿದಾಟವಿಲ್ಲ. ಪ್ರತಿಯೊಬ್ಬ ವ್ಯಕ್ತಿಯ ವಿಕಾಸಕ್ಕಡ್ಡಬಾರದ ಯಾವ ವರ್ಣವಿದ್ದರೇನು? ಯಾವನೊಬ್ಬನ ಸುರೂಪ ಕುರೂಪಗಳಾಗಲೀ ಕರಿ ಬಿಳಿ ಬಣ್ಣಗಳಾಗಲೀ ಅವನ ಸ್ವಾಭಾವಿಕವಾದ ವಿಕಾಸಕ್ಕೆ ಅಡ್ಡ ಬರದಿದ್ದರೆ ತೀರಿತಷ್ಟೇ? ಆ ನೈಸರ್ಗಿಕವಾದ ವರ್ಣಗಳಲ್ಲಿಯೇ ಸೇರಿಕೊಂಡಿರುವ ವಿಷಮತೆಯನ್ನು ತೊಡೆದೊಗೆದು ಬಿಡುವ ಸಂಕಲ್ಪಕ್ಕೆ ಯಾರದೂ ಮತಭೇದವಿರಲಾರದು. ಸಂಕಲ್ಪದ ಸಾಧನದ ವಿಷಯವಾಗಿ ಮತಭೇದವಿರುವದು ಮಾತ್ರ ನಿಜ. ಬಾಹುಬಲದ ಬೆಂಬಲವುಳ್ಳ ಸಶಸ್ತ್ರ ಕ್ರಾಂತಿಯಿಂದ ಸಮಾಜದಲ್ಲಿ ಬೆಳೆದು ನಿಂತ ವಿಷಮತೆಯನ್ನು ಕೊನೆಗಾಣಿಸಬೇಕೆಂಬುದು ತೀವ್ರ ಸಮಾಜಸತ್ತಾವಾದಿಗಳ ವಾದ. ಆತ್ಮಬಲದ ಬೆಂಬಲವುಳ್ಳ ನಿಃಶಸ್ತ್ರ ಕ್ರಾಂತಿಯಿಂದ ಆ ಕಾರ್ಯ ಸಾಧಿಸಬೇಕೆಂಬುದು ಭಾರತೀಯರ ಗಾಂಧೀವಾದ. ಬೆಂಕಿಯನ್ನು ಅದಕ್ಕ್ಯಾ ದೊಡ್ಡ ಬೆಂಕಿ ಹಿಂದೆ ಹಾಕಬಹುದೇ ವಿನಾ ನೊಂದಿಸಲಾರದು. ಬೆಂಕಿಯನ್ನು ನೊಂದಿಸಬೇಕಾದರೆ ಅದರ ವಿರುದ್ಧವಾದ ನೀರೇ ಮದ್ದು ಎಂಬುದು ಭಾರತೀಯರಿಗೆ ಚೆನ್ನಾಗಿ ಗೊತ್ತು. ಸಣ್ಣ ಬೆಂಕಿಯನ್ನು ಹಿಂದೆ ಹಾಕಿದ ಹಿರಿ ಬೆಂಕಿ ತನ್ನ ಸ್ವಭಾವ ಗುಣದಂತೆ ಅತ್ತಿತ್ತ ಅಲೆಗಳನ್ನು ಗುಳದೇ ಬಿಟ್ಟೀತೆ? ಹಾಗೇ ಭಾರತೀಯರ ದಾಸ್ಯದ ದ್ವೇಷಾಗ್ನಿ ಜಗತ್ತನ್ನೇ ಕಬಳಿಸಬಲ್ಲ ನಾಲ್ವತ್ತು ಕೋಟಿ ಪ್ರಜಾಶಕ್ತಿಯ ಪ್ರಳಯಾಗ್ನಿಯಾದರೆ ಜಗತ್ತಿನ ಗತಿ ಏನು? ಅಂತೆಯೇ ಸತ್ಯಾಗ್ರಹ ಶಾಸ್ತ್ರದ ಗುರುಗಳಾದ ಮಹಾತ್ಮಾ ಗಾಂಧಿಯವರು ಹಿಂಸೆಯಿಂದ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕುತ್ತಿದ್ದರೆ ನನ್ನ ಶಕ್ತಿ ಸರ್ವಸ್ವವನ್ನುಪಯೋಗಿಸಿ ಅದನ್ನು ತಡೆಯುವೆನೆಂದಿದ್ದಾರೆ. ಸಾಮಾನ್ಯ ಭಾರತೀಯನಿಗೆ ಎಂತಹ ಕಿಡುನುಡಿ! ಆದರೂ ಸತ್ಯನುಡಿ.

ಸತ್ಯದ ಸಂಸ್ಕಾರವುಳ್ಳ ಭಾರತದ ಇತಿಹಾಸವನ್ನು ನೋಡಿದರೆ. ವಸ್ತುಸ್ಥಿತಿಯಿಂದ ಮುಂದುವರಿದ, ಸ್ವಾಭಾವಿಕವಾದ ಸಮಾಜ ರಚನೆಯು ಅಗ್ನಿಯು ಮೇಲೆ ಬೂದಿ ಮುಚ್ಚಿದಾಗಲೆಲ್ಲ ಅದನ್ನು ಹಾರಿಸಿ ಮತ್ತೆ ಪ್ರಜ್ವಲಿಸುವಂತೆ ಮಾಡುವುದಕ್ಕಾಗಿ ಉಪಯೋಗಿಸಿದ ಅಸ್ತ್ರ ಅಹಿಂಸಾಸ್ತ್ರವೇ ಆಗಿರುವುದನ್ನು ಕಾಣಬಹುದು. ಅಂದು ಭಾರತದ ಜನಮನವು ದಾರಿದ್ರ್ಯ, ದುಃಖ, ಅಜ್ಞಾನ,

ಆಲಸ್ಯ, ಅನಾರೋಗ್ಯಗಳಿಂದ ಮುಂದೆಗಾಣದೆ ಕಂಗೆಟ್ಟಾಗ ಸ್ಫೂರ್ತಿಯ ಬೆಳಕನ್ನು ತೋರಿದ ಬುದ್ಧನ ಬಂಡು ಆದರ್ಶವಾದ ಅಹಿಂಸೆಯು ಬಂತು. ಅದರ ನಂತರ ಚಾತುರ್ವರ್ಣ್ಯಗಳಲ್ಲಿ ವಿಷಮತೆಯು ಸೇರಿ ಉತ್ತರದ ಜನಾಂಗವನ್ನು ದಾಸ್ಯದಲ್ಲಿ ತೂರಿ ದಕ್ಷಿಣದವರಿಗೂ ಅದೇ ದಾರಿ ತೋರ ಹೊರಟ ಆ ವಿಷಮತೆಯ ವಿರುದ್ಧ ನಿಃಶ್ಯಸ್ತ್ರ ಕ್ರಾಂತಿ ಎಬ್ಬಿಸಿದ, ಕ್ರಾಂತಿ ಪುರುಷ ಬಸವಣ್ಣನವರು. ಅವರ ಕ್ರಾಂತಿಯ ಫಲವಾಗಿಯೇ ದಕ್ಷಿಣ ಭಾರತೀಯರು ಅಂದರೆ ಕನ್ನಡಿಗರು ಆತ್ಮಜಾಗ್ರತೆ ಪಡೆದದ್ದು. ಈ ಹದ ಗೊಳಿಸಿದ ಭೂಮಿಯಲ್ಲಿಯೇ ಮುಂದೆ ವಿಜಯನಗರ ಸಾಮ್ರಾಜ್ಯದ ಬೆಳೆ ಬಂದದ್ದು. ಆಗ ಮೇಲ್ವರ್ಗದವರೆನ್ನಿಸಿಕೊಂಡ ಕೆಲ ಬ್ರಾಹ್ಮಣ ವರ್ಗಕ್ಕೆ ಹಿಡಿದ ಧರ್ಮಜಾಡ್ಯವನ್ನು ಧೂಳಿಗೂಡಿಸಿದ ಮಧ್ವಾಚಾರ್ಯರಂತಹ ಧನ್ವಂತರಿಗಳಿಂದ, ಹಾಗೂ ಜಂಗುಹಿಡಿದ ರಾಜ್ಯಯಂತ್ರವನ್ನು ಸುಯಂತ್ರಿತಗೊಳಿಸ ಬಲ್ಲ ವಿದ್ಯಾರಣ್ಯರಂತಹ ಯಂತ್ರತಜ್ಞರಿಂದ ಮೊದಲೇ ಆತ್ಮಜಾಗ್ರತಿ ಪಡೆದ ಕನ್ನಡ ಕುಲ, ಅಜೇಯವಾದ ವಿಜಯ ಸಾಮ್ರಾಜ್ಯದ ಪತಾಕೆಯನ್ನು ದಿಗಂತದಲ್ಲಿ ಮೆರೆಯಿಸಿತು. ಮುಂದೆ ಎಲ್ಲ ಸಾಮ್ರಾಜ್ಯಗಳಂತೆ, ತುಸು ಹೆಚ್ಚು ಕಡಿಮೆ ಆ ಸಾಮ್ರಾಜ್ಯದಲ್ಲಿಯೂ ಕೆಳವರ್ಗದವರ ಆರ್ಥಿಕ ದಾಸ್ಯ ಬಲ ವಾಗಿರಬೇಕು. "ಯಾವ ರಾಜನಾದರೇನು ರಾಗೀ ಬೀಸುವದು ತಪ್ಪಿದ್ದಲ್ಲ" ವೆಂಬ ಸಿರಾಶೆಯ ನಾಣ್ಣುಡಿ ಬಹುಜನ ಸಮಾಜದಲ್ಲಿ ರೂಢವಾಗಿರಬೇಕೆಂದರೆ ಅದು ಅಸಹನೀಯವಾಗಿರಬೇಕಲ್ಲವೇ? ಆ ದಾಸ್ಯದ ಹುಳು ಹತ್ತಿ ಕೊಳೆಯ ಹತ್ತಿದ ಸಾಮ್ರಾಜ್ಯದೇಹಕ್ಕೆ ಸರಿಯಾದ ಉಪಚಾರ ಸಿಕ್ಕದೇ ಇದ್ದದರಿಂದಲೇ ಪರದಾಳಿಯ ಹೊಡೆತಕ್ಕದು ಬೇಗ ನುಗ್ಗಾಗಿರಬೇಕು.

ಅಂದಿನಿಂದ ನಾವು ಎಲ್ಲಿರುವೆವಲ್ಲಿಯೇ ಇದ್ದರೂ ಇದ್ದಂತೆ ಮಾತ್ರ ಇಲ್ಲ. ಅಂತರರಾಷ್ಟ್ರೀಯ ಪರಿಚಯದಿಂದಾಗಿ ಸಾಮ್ರಾಜ್ಯಗಳ ಹಣೆಬರಹ ಕಣ್ಣೆದುರಿ ಗಿದೆ. ಮಾನವ ಸಮಾಜದ ಅಂತಿಮ ಗುರಿಯನ್ನು ನಿಲುಕುವ ದಾರಿಯನ್ನು ನೋಡುತ್ತಿದ್ದೇವೆ. ತುಸು ವಿಚಾರ ಮಾಡಲಾಗಿ ೧೭ನೇ ಶತಮಾನದಲ್ಲಿ ನಮ್ಮ ಇತಿಹಾಸ ನಿಂತಂತೆನಿಸಿದರೂ ಜಗತ್ತು ನಮ್ಮ ಹನ್ನೆರಡನೇ ಶತಮಾನ ವನ್ನು ದಾಟಿಲ್ಲವೆನಿಸುತ್ತದೆ. ಇಂದು ಭಾರತದಲ್ಲಿ ನಡೆದ ನಿಶ್ಯಸ್ತ್ರ ಕ್ರಾಂತಿಯ ಬೀಜ ಹನ್ನೆರಡನೆಯ ಶತಮಾನದಲ್ಲಿದೆ. ಆಗ ನಡೆದ ಶುದ್ಧ ಸಮತಾವಾದದ

ಯಾವ ಹಸ್ತಕ್ಷೇಪವೂ ಇಲ್ಲದೇ ಶುದ್ಧ ಮನಸ್ಸಿನಿಂದಲೇ ಅದನ್ನು ಚಿತ್ರಿಸಿರುವನೆಂಬುದಕ್ಕೆ ಆಧಾರವೇನು ?

ಉತ್ತರ ಸಹಜವಿಲ್ಲ, ಸರಳವಿದೆ. ಇಂಥ ಪ್ರಸಂಗದಲ್ಲಿ ತುಸು ವಿಚಾರ ಮಾಡುತ್ತಲೇ ಸಮಸ್ಯೆ ಸಡಿಲಾಗಿಹೋಗುವದು. ವಾಸ್ತವ ಚಿತ್ರ, ಕಲ್ಪನೆಯ ಚಿತ್ರ ಎಂದು ಭೇದಮಾಡುವಾಗ ಕಲ್ಪನೆಯ ಚಿತ್ರದ ವ್ಯಾಖ್ಯೆ ನಮ್ಮೆದುರಿಗಿದ್ದರೂ ವಾಸ್ತವ ಚಿತ್ರವೇದರೇನೆಂಬವಕ್ಕೆ ಉತ್ತರವಿರುವದಿಲ್ಲ, ಅದನ್ನು ಕೇಳಿದಾಗ ಪ್ರತಿಪಕ್ಷಿಯು "ಇದ್ದಂತೆ ಚಿತ್ರಿಸಿದ್ದು ವಾಸ್ತವ ಚಿತ್ರ, ಇರಬೇಕಾದಂತೆ ಚಿತ್ರಿಸಿದ್ದು ಕಲ್ಪನೆಯ ಚಿತ್ರ, ಎಂದು ಸ್ವಯಂ ನಿರ್ಣಯವನ್ನು ನಮ್ಮ ಮೇರಿಯ ಮೇಲೆಸೆಯಬಹುದು. ಹಾಗಾದಾರೆ 'ಈ ಎರಡೂ ಚಿತ್ರಗಳನ್ನಳೆಯುವದಕ್ಕೆ ಅಳೆಗೋಲೇನು ?' ಎಂದು ಕೇಳಿದಾಗ ನಿಜಗುಟ್ಟು ಹೊರಬೀಳುವದು. ಎರಡೂ ಬಗೆಯ ಚಿತ್ರಗಳನ್ನು ಚಿತ್ರಿಸುವಂತೆ ಕೆಲ ಚಿತ್ರಕಾರರನ್ನು ಪ್ರೇರಿಸಿ, ಅವರು ಚಿತ್ರಿಸಿದ ಎಲ್ಲ ಚಿತ್ರಗಳನ್ನು ಒಟ್ಟುಗೂಡಿಸಿ ನಿಷ್ಪಕ್ಷಪಾತದೃಷ್ಟಿಯುಳ್ಳ ತಜ್ಞನ ಕೈಯಲ್ಲಿ ಕೊಟ್ಟಾಗ ಎಷ್ಟು ಜನರು ಚಿತ್ರಿಸಿದ್ದಾರೋ ಅಷ್ಟು ಬೇರೆ ಬೇರೆ ಚಿತ್ರಗಳೇ ಅವರ ಕೈಗೆ ಹತ್ತಬಹುದು. ವ್ಯಕ್ತಿಗಳಿದ್ದಷ್ಟು ಪ್ರಕೃತಿಗಳು, ಪ್ರಕೃತಿಗಳಿದ್ದಷ್ಟು ಮತಗಳು ಮತಗಳಿದ್ದಷ್ಟು ಮಾರ್ಗಗಳು. ಯಾವ ಭಾವನೆಯನ್ನು ವ್ಯಕ್ತಗೊಳಿಸುವಾಗಲೂ ವ್ಯಕ್ತಿಯ ಮನದ ಪ್ರಭಾವವು ಕೊಂಚವೂ ಇಲ್ಲದೇ ಸಾಧ್ಯವಿಲ್ಲವೆನ್ನುವ ನಿರ್ಣಯವನ್ನೇ ಕೊಡುವ ಪ್ರಸಂಗ ಆ ತಜ್ಞರಿಗೆ ಬರಹುದು. ಒಂದುವೇಳೆ- ಪ್ರತಿಪಕ್ಷಿಯು ಒಂದು ಅಳೆಗೋಲನ್ನು ಸಿದ್ಧಗೊಳಿಸಿಕೊಟ್ಟನೆಂದು ತಿಳಿದರೂ, ಅದು ತನ್ನ ಚಿತ್ರವನ್ನು ಮಾತ್ರ ಅಳೆಯುವ ಅಳೆಗೋಲಾದೀತೇ ಹೊರತು ಎಲ್ಲ ವಾಸ್ತವ ಚಿತ್ರಗಳನ್ನು ದರಿಂದ ಅಳೆಯಲು ಸಾಧ್ಯವಾಗಲಾರದು. ಮೇಲಿಂದ ಮೇಲೆ ಬರುತ್ತಿರುವ ಈ ಬಗೆಯ ಅಕ್ಷೇಪಗಳಲ್ಲಿ 'ತಾನು ಮಾಡಿದ್ದು ವಿಮರ್ಶೆ, ಮುಂದಿಮಾಡಿದ್ದು ಟೀಕೆ' ಎನ್ನುವ ಹೀನ ಮನೋಭಾವನೆಯೇ ಕಾರಣವಾಗಿರುತ್ತಲ್ಲದೆ ಬೇರೆ ಇನ್ನಾವ ಹೇತುವೂ ಇರುವದಿಲ್ಲ. ಹಾಗೆ ನೋಡಿದರೆ ಭಾವನೆಯನ್ನು ವ್ಯಕ್ತಗೊಳಿಸುವ ಸಾಧನದ ಐಕ್ಯಕ್ಕಿಂತ, ವ್ಯಕ್ತಗೊಳಿಸಿದ ಭಾವನೆಯಿಂದ ಸಾಧಿಸಿದ ಐಕ್ಯಕ್ಕೆ ಜಗತ್ತಿನೊಳಗಿನ ಜಾಣರು ಈ ವರೆಗೆ ಮಾನಕೊಡುತ್ತ ಬಂದಿದ್ದಾರೆ. ಭಾರತೀಯ ತತ್ವವೇತ್ತರು ಇದಕ್ಕೂ ಮುಂದೆಹೋಗಿ 'ಶುದ್ಧಭಾವನೆ

ಯನ್ನು ವ್ಯಕ್ತಗೊಳಿಸುವ ಕಲಾವಂತನ ಮನದ ಕನ್ನಡಿ ಅಷ್ಟೇ ಶುದ್ಧವಿಲ್ಲದೆ ಅದು ಸಾಧ್ಯವಿಲ್ಲವೆನ್ನುತ್ತಾರೆ.'

ಭಾವಚಿತ್ರವೇನು? ಭಾವಚರಿತ್ರವೇನು? ಎರಡೂ ಒಂದೇಬಗೆಯ ಆಕ್ಷೇಪಕ್ಕೆ ಗುರಿಯಾಗಬಲ್ಲವು. ಚಿತ್ರ ಭಾವನೆಯ ವ್ಯಕ್ತಸ್ವರೂಪವಿದ್ದರೆ, ಚರಿತ್ರ, ವಿಚಾರದ ವ್ಯಕ್ತಸ್ವರೂಪವಾಗಿರುತ್ತವೆ. ಒಂದು ಭಾವನೆಯ ವರ್ಣ ಚಿತ್ರ, ಇನ್ನೊಂದು ವಿಚಾರದ ಶಬ್ದಚಿತ್ರ. ಅಂದಮೇಲೆ ಮಹಾತ್ಮ ಬಸವ ಣ್ಣನವರ ಭಾವಚರಿತ್ರಕ್ಕೂ ಅದೇ ಬಗೆಯ ಆಕ್ಷೇಪ ಬಂದರೆ, ಅದೇ ಉತ್ತರವೇ ಯೋಗ್ಯವಾಗುವದು. ಸುಲಭವಾದ ಸಂಗತಿಯಾಗಿದ್ದರೆ ಇಷ್ಟೊಂದು ಸುದೀ ರ್ಘವ್ಯಾಖ್ಯೆಯೇ ಬೇಕಾಗಿರಲಿಲ್ಲ. ಭಾರತದ ಯಾವ ಮಹಾಪುರುಷನ ಶಬ್ದ ಚಿತ್ರವನ್ನು ಬಸವಣ್ಣನವರ ಶಬ್ದಚಿತ್ರದಷ್ಟು ಮಸಕಾಗಿ ಚಿತ್ರಿಸಿಲ್ಲವೆಂದು ಹೇಳಬಹುದು. ಈ ಪರಿಗೆ ನಮ್ಮೆದುರಿಗಿದ್ದ ಅವರ ಎಲ್ಲ ಭಾವಚರಿತ್ರಗಳೂ ಹಾಗಿಲ್ಲದೇ ಹೋದರೂ ಅವುಗಳಲ್ಲಿನ ಬಹುಭಾಗ ಅನೇಕ ತಪ್ಪು ಕಲ್ಪನೆಗ ಳಿಂದ, ಅನೇಕ ನಿರಾಧಾರ ಆರೋಪಗಳಿಂದ ತುಂಬಿದೆ. ತುಂಬಿದೆ ಎನ್ನುವದ ಕ್ಕಿಂತ ತುಂಬಲಾಗಿದೆ ಎಂದರೆ ಅಯಥಾರ್ಥವಲ್ಲ. ಭಾವೀ ಇತಿಹಾಸಕಾರರು ವಿಶದವಾಗಿ ಬಸವಣ್ಣನವರನ್ನು ಚಿತ್ರಿಸುವಾಗ ತಮ್ಮ ಕಾಲಕ್ಕೆ ಬಸವಣ್ಣನ ವರು ಧೈರ್ಯದಿಂದ ಮಾಡಿದ ಉಪದೇಶಕ್ಕನುಗುಣವಾಗಿಯೇ ಹಳೆಶಬ್ದಗಳಲ್ಲಿ ಹೊಸಭಾವಗಳನ್ನು ತುಂಬಿ ಹೊಸಭಾವಗಳುಳ್ಳ ಹೊಸ ಶಬ್ದಗಳನ್ನು ತಂದು ಸುಸ್ಪಷ್ಟವಾಗಿ ಚಿತ್ರಿಸಿದ ಶಬ್ದಚಿತ್ರವೇ ಮಹಾತ್ಮಾ ಬಸವಣ್ಣನವರ ಸ್ವಾಭಾ ವಿಕವಾದ ಭಾವಚರಿತ್ರವಾಗಬಲ್ಲದು. ಅಂಥ ಚರಿತ್ರದ ರೂಪರೇಷೆ ಹೇಗಿರಬ ಹುದೋ ನೋಡೋಣ

(ಚರಿತ್ರವೆಂದಾಕ್ಷಣಕ್ಕೆ 'ಎಲ್ಲಿ ಹುಟ್ಟಿದರು? ಎಂದು ಹುಟ್ಟಿದರು?' ಎಂದು ಪ್ರಾರಂಭಿಸುವದು ರೂಢಿ. ಆದರೆ ಚರಿತ್ರದ ವಿಹಂಗಮ ನೋಟದಲ್ಲಿ, ಸಣ್ಣ ಸಣ್ಣ ಮಾತುಗಳಿಗೆ ಆಸ್ಪದವಿರುವದಿಲ್ಲ. ಇಲ್ಲಿ ಆರಂಭಕ್ಕೆ 'ಯಾಕೆ ಹುಟ್ಟಿ ದರು? ಏನುಮಾಡಿದರು?' ಎಂಬುದರಿಂದ ಪ್ರಾರಂಭವಾಗುವದ. ಸಾಮಾನ್ಯ ವಾದ ಒಂದು ಕಾಲವನ್ನು ಗುರುತುಮಾಡಿಕೊಂಡು ಆ ಕಾಲಕ್ಕೆ ಚರಿತ್ರ ಪುರು ಷರು ಏಕೆ ಹುಟ್ಟಿದರು? ಎಂಬುದನ್ನು ನೋಡಬೇಕು. ಕ್ರಿ. ಶ. ೧೨ನೇ ಶತ ಮಾನದಲ್ಲಿ ಮಹಾತ್ಮ ಬಸವಣ್ಣನವರು ಇದ್ದರೆಂಬುದಕ್ಕೆ ಯಾವ ಆಕ್ಷೇಪವೂ

ಇಲ್ಲ. 'ಆಗ್ಗೇ ಏಕೆ ಹುಟ್ಟಿದರು ?' ಎಂಬುದಕ್ಕೆ ಮಾತ್ರ ಅನೇಕ ವಿಚಾರಗಳು ಮುಂದೆ ಬರಬಹುದು. ಒಂದುರಾಜ್ಯವನ್ನು ಕಟ್ಟುವದಕ್ಕಾಗಿ ಹುಟ್ಟಿದರೇ? ಒಂದು ಧರ್ಮವನ್ನು ಸ್ಥಾಪಿಸುವದಕ್ಕಾಗಿ ಜನ್ಮಿಸಿದರೇ? ಒಂದುಪಕ್ಷವು ಅವರು ಧಾರ್ಮಿಕ ಆಂದೋಲನದ ಹೆಸರಿನಲ್ಲಿ ರಾಜ್ಯವನ್ನು ಕಟ್ಟಲೆತ್ನಿಸಿದರೆಂದು ಹೇಳಿದರೆ, ಇನ್ನೊಂದು ಪಕ್ಷವು ರಾಜಕೀಯ ಕ್ಷೇತ್ರದ ಲಾಭಪಡೆದು ತಮ್ಮ ದೊಂದು ಧರ್ಮವನ್ನು ಸ್ಥಾಪಿಸಲೆತ್ನಿಸಿದರೆಂದು ಹೇಳುತ್ತಿದೆ. ಎರಡೂ ಪಕ್ಷ ಗಳು ಬೇರೆ, ಬೇರೆಯಾಗಿ ಹೇಳುತ್ತಿದ್ದರೂ (Each means the other; both mean the same.) ಅರ್ಥ ಮಾತ್ರ ಇಬ್ಬರದೂ ಒಂದೇ ಆಗಿದೆ. ಅದನ್ನು ನೋಡಿದರೆ ಬಸವಣ್ಣನವರು ಏನೋ ಮಾಡಬೇಕೆಂದಿದ್ದರು, ಏನೂ ಮಾಡಲಾಗಲಿಲ್ಲವೆನ್ನುವ ಅರ್ಥವೇ ಹೊರಡಬಹುದು. ಸಾಮಾನ್ಯನಿಗೆ ನಿಲು ಕದ ಯಾವ ದೊಡ್ಡವರ ಕಾರ್ಯವನ್ನು ತೀರ ವ್ಯವಹಾರಕ್ಕಿಳಿದು ವಿಚಾರ ಮಾಡಿದಾಗ ಮೇಲೆ ಹೇಳಿದ ನಿರ್ಣಯಕ್ಕೇ ಬರಬೇಕಾಗಬಹುದು. ದೊಡ್ಡ ವರೆನ್ನಿಸಿಕೊಳ್ಳುವವರ ಕೃತಿಗಳನ್ನು ಅಳೆಯುವದು ಅಷ್ಟು ಕೀಳ ಅಳೆಗೋಲಿ ನಿಂದಲ್ಲ. ಇಡೀ ಮಾನವನ ಕುಲದ ಪ್ರಗತಿಯನ್ನು ಸಾಧಿಸುವದಕ್ಕಾಗಿ ಅಂತಹರ ಅವತಾರ ಆಗಿರುತ್ತದೆಯೇ ಹೊರತು ಒಂದು ಸಮಾಜದ, ಇಲ್ಲವೆ ಆ ಸಮಾಜದಲ್ಲಿನ ಒಂದು ವರ್ಗದ ಹಿತಕ್ಕಾವರು ಭೂಮಿಗಿಳಿದಿರುವದಿಲ್ಲ. ನೇರಾಗಿ ಅವರು ನಮ್ಮ ಬೇಡಿಕೆಯಿಂದಾಗಲೀ, ಪರಿಸ್ಥಿತಿಯ ಒತ್ತಾಯದಿಂ ದಾಗಲೀ, ನಿರ್ಮಾಣವಾದವರಿರದೆ ಪ್ರಕೃತಿ ದೇವಿಯು ತಾನಾಗಿಯೇ ತನ್ನ ಮಡಿಲಲ್ಲಿಂದ ಆಡಬಿಟ್ಟ ಜ್ವಲಂತಜ್ಯೋತಿಯಾಗಿ ಅವತರಿಸಿರುತ್ತಾರೆ. ಎಷ್ಟೋ ಸಲ ಮಹಾಪುರುಷರೆನ್ನಿಸಿಕೊಳ್ಳವವರ ಬಗ್ಗೆ ಸರಿಯಾದ ಕಲ್ಪನೆ ಇರುವದಿಲ್ಲ ಪ್ರಪಂಚದಲ್ಲಿ ದೊಡ್ಡವರಾಗಿ ಹುಟ್ಟಿನವರು ಕೆಲವರು. ಹುಟ್ಟಿದಮೇಲೆ ದೊಡ್ಡ ವರಾದವರು ಕೆಲವರು, ದೊಡ್ಡವರಾಗುವದಕ್ಕಾಗಿಯೇ ಹುಟ್ಟಿದವರು ಕೆಲ ವರು ಇರಬಹುದು. (Some are born great; some achieve greatness, and some have greatness thrust upon them) ಇವರಲ್ಲದೇ ಅವತಾರೀಪುರುಷರೆಂಬ ಇನ್ನೊಂದು ವರ್ಗವೂ ಇದೆ. ಅವರು ದೊಡ್ಡವರಾಗಿಯೇ ಹುಟ್ಟಿ, ದೊಡ್ಡವರಾಗಿಯೇ ಬೆಳೆದು ದೊಡ್ಡವರಾ ಗಿಯೇ ಉಳಿಯುವವರು, ಸದೇಹರಾಗಿ ನಮ್ಮೊಳಗವರು ಇಲ್ಲದೇ ಹೋದರೂ ಸೂರ್ಯನು ಅಸ್ತನಾಗುವಾಗ ತನ್ನ ತೇಜಸ್ಸನ್ನು ಅಗ್ನಿಯಲ್ಲಿ ಬಿಟ್ಟು ಹೋಗು

ಹಂತೆ, ಸಮಾಜ ಜೀವನದಲ್ಲಿ ತಮ್ಮ ಅವತಾರ ಕಾರ್ಯದ ಶಕ್ತಿಯನ್ನು ಸಜೀವವಾಗಿಟ್ಟು ಹೋಗಿರುತ್ತಾರೆ. ಹಾಗೆ ಕಾಯ್ದಿಟ್ಟ ಶಕ್ತಿಯು, ಅಗ್ನಿಯು ಮೇಲೆಯೇ ಬೂದಿ ಮುಚ್ಚಿದ್ದರಿಂದಾಗಲೀ, ಹೊಗೆ ಮುಸುಕಿದ್ದರಿಂದಾಗಲೀ, ಮೂಲ ಆಕಾರವೇ ವಿಕಾರವಾಗಿ ನಮಗೆ ಕಾಣಬಹುದು. ಅದು ನಮ್ಮ ಸಂಕುಚಿತ ದೃಷ್ಟಿಯ ದ್ಯೋತಕ; ಇಲ್ಲವೇ ಒಂದು ಬಗೆಯ ಭ್ರಮೆ.

ಮಹಾತ್ಮಾ ಬಸವಣ್ಣನವರು ಮಾಡಿದ ಕಾರ್ಯವೆಂದರೆ— ಒಂದು ರಾಜ್ಯವನ್ನು ಬುಡಮೇಲು ಮಾಡಿ, ಒಂದು ಧರ್ಮವನ್ನು ಹೊಡೆದೋಡಿಸಿ ಅದಕ್ಕೆ ಪ್ರತಿಯಾಗಿ ತಮ್ಮದಾದುದೊಂದನ್ನು ನಿರ್ಮಾಣ ಮಾಡದೇ— ಇದ್ದದ್ದರಲ್ಲಿಯೇ ಸೇರಿಕೊಂಡಿರುವ ವಿಷಮತೆಯನ್ನು ಹೋಗಲಾಡಿಸಿ ಶುದ್ಧವಾದ ಮೂಲಸ್ಥಿತಿಯನ್ನು ತಂದು ಕೊಟ್ಟದ್ದಾಗಿದೆ. ಫಲಾಪೇಕ್ಷೆಯಿಂದ ಕೆಲಸ ಮಾಡುವವರಿಗೆ ತನ್ನ ಅಳೆಗೋಲಿನಿಂದಲೇ ಎಲ್ಲವನ್ನು ಅಳೆಯುವ ಚಟ ಬಿದ್ದಿರುತ್ತಾದ್ದರಿಂದ 'ಬಸವಣ್ಣನವರು ಒಂದು ಕ್ರಾಂತಿಯನ್ನು ಯಶಸ್ವಿಯಾಗಿ ಮಾಡಿದರು' ಎಂದು ತಿಳಿಯುವದಾದರೆ ಅದರ ಪ್ರತಿಫಲವಾಗಿ 'ಏನು ಸಿಕ್ಕಿತು?' ಎಂದು ಹಠದಿಂದ ಕೇಳಬಹುದು. ಅವರ ಸಮಾಧಾನಕ್ಕಾಗಿಯೇ ಹೇಳಬೇಕಾದರೆ ಯಾವುದೇ ಅವತಾರಿ ಪುರುಷರ ಕ್ರಾಂತಿಯು ಬಹಿರಂಗ ನಿರಪೇಕ್ಷವಾಗಿದ್ದರೂ, ಅಂತರಂಗಸಾಪೇಕ್ಷವಿರುತ್ತದೆ. ಆ ಸಾಪೇಕ್ಷತೆಯು ಅವರು ಬೇಕಾಗಿ ಬೇಡಿದ್ದಾಗಲೀ ಸಾಕಾಗಿ ತಡೆದದ್ದಾಗಲಿ ಇರುವದಿಲ್ಲ. ತಮ್ಮ ಕಾರ್ಯದ ಶುದ್ಧತೆಯಿಂದ ಅದರ ಪರಿಣಾಮದ ಶುದ್ಧತೆಯನ್ನು ಕಾಯುತ್ತಾರೆ. ಮಾನವ ಸಮಾಜದ ಇತಿಹಾಸದ ಪ್ರಗತಿಯನ್ನು ನೋಡಿದರೆ ಮೊದಲಿದ್ದ ಒಂದು ಗತಿಯಿಂದ ಮುಂದಿನ ಪ್ರಗತಿಗೆ ಹೋಗುವ ಸಂಧಿಕಾಲದ ಅರಾಜಕತೆಯ ಹೊಣೆಯನ್ನು ಆಗಿನ ಕಾಲದ ಕ್ರಾಂತಿಯ ಪ್ರೇರಕರ ಮೇಲೆ ಹಾಕಿ ಮುಂದೆ ಹೋಗಲು ಯತ್ನಿಸಲಾಗಿದೆ ಎಂಬುದು ಕಂಡುಬರುವದು. ಆದರೆ ಆ ಸಂಧಿಕಾಲದಿಂದ ಮುಂದಿನ ಸಮಾಜ ರಚನೆಯನ್ನು ವ್ಯವಸ್ಥಿತಗೊಳಿಸುವವರೆಗಿನ ಅನಿವಾರ್ಯ ಸ್ಥಿತಿಯನ್ನು ಯಾವ ಸಮಾಜವೂ ಅನುಭವಿಸಲೇಬೇಕು. ಅದು ಮುಂದಿನ ಅನುಮಾನವಲ್ಲ; ಹಿಂದಿನ ಅನುಭವ. ಬುದ್ಧನ ಕ್ರಾಂತಿಯನಂತರ ವ್ಯವಸ್ಥೆಗೊಂಡ ಭಾರತೀಯ ಸಮಾಜ ಜೀವನವನ್ನು 'ದೇವಾನಾಂ ಪ್ರಿಯಃ' ಅಶೋಕನ ಸಾಮ್ರಾಜ್ಯದಲ್ಲಿ

ಕಾಣುವೆವಾದರೆ, ಬಸವಣ್ಣನವರ ಕ್ರಾಂತಿಯು ನಂತರ ಬಂದ ಸಮಾಜ ಜೀವನವನ್ನು ವಿಜಯನಗರ ಸಾಮ್ರಾಜ್ಯದಲ್ಲಿ ನೋಡಬಹುದು. ಇಂದು ನಮಗೆ ಆ ವ್ಯವಸ್ಥೆಯಲ್ಲಿ ಕುಂದು ಕಂಡು ಬರುವದಾದರೆ ಆಯಾ ಕಾಲಕ್ಕೆ ಅನಿವಾರ್ಯವಾದ ಆವಶ್ಯಕತೆಗನುಸರಿಸಿ ಆ ಆ ಸ್ಥಿತಿಗಳು ಬಂದವಲ್ಲದೆ ಸರ್ವ ಕಾಲಕ್ಕೂ ಸರ್ವ ದೇಶಗಳಲ್ಲಿಯೂ ಇರಬೇಕಾದ ವ್ಯವಸ್ಥೆ ಅದಾಗದೆ ಹೋಗ ಬಹುದು. ಅಶೋಕನ ಸಾಮ್ರಾಜ್ಯದ ನಂತರ ವಿಜಯನಗರ ಸಾಮ್ರಾಜ್ಯ ವಾಯಿತು. ಈ ವಿಜಯನಗರ ಸಾಮ್ರಾಜ್ಯದನಂತರ ಸತ್ಯ ಸಾಮ್ರಾಜ್ಯ ಬರ ಬಹುದು. ನಮ್ಮ ಸುತ್ತಲಿನ ಪರಿಸ್ಥಿತಿಯ ಪ್ರತಾಪದಿಂದ ಹಿಂದಿನ ಆಯಾ ಶುದ್ಧ ಸಮಾಜದ ರಚನೆ ಇಂದಿನ ಕಾಲಕ್ಕೆ ಹೊಂದಿಕೆಯಾಗಲಾರದೆಂದು ಕಂಡರೆ ಅದು ನಮ್ಮ ದೃಷ್ಟಿದೋಷವಲ್ಲದೆ ಆ ಸಮಾಜದ ಸೃಷ್ಟಿದೋಷವಲ್ಲ.

ಸಿದ್ಧಾಂತದ ಸರಳತೆಗಾಗಿ, ಸಂಶೋಧನದ ಶಿಸ್ತಿಗಾಗಿ, ಇಲ್ಲವೆ ಪ್ರಮೇಯ ಗಳ ಪ್ರಮಾಣಕ್ಕಾಗಿ, ಐತಿಹಾಸಿಕ ಅನೇಕ ಘಟನೆಗಳ ಮಧ್ಯದಲ್ಲಿ ಒಂದು ಸೂತ್ರವನ್ನು ಹೆಣೆದುಕೊಂಡು ಸೂತ್ರಬದ್ಧವಾದ ಇತಿಹಾಸವನ್ನು ಬರೆಯು ವಂತೆ ಬಸವಣ್ಣನವರ ಚರಿತ್ರೆಯನ್ನು ಬರೆಯಬಹುದು. ಒಂದು ದೃಷ್ಟಿಯಿಂದ ಅವತಾರಿ ಪುರುಷರ ಇತಿಹಾಸವೆಂದರೆ ಅವರ ದೇಶದ ಇತಿಹಾಸವೇ ಆಗಿರು ತ್ತದೆ. (All History is the history of great men-Carlyale) ಈ ರೀತಿ ಅವರ ಇತಿಹಾಸದ ಅವಲೋಕನದಿಂದ ಮೊದಲನೆಯದಾಗಿರುವ 'ಬಸವಣ್ಣನವರು ಭಾರತದಲ್ಲಿ ಹನ್ನೆರಡನೆಯ ಶತಮಾನದಲ್ಲಿಯೇ ಏಕೆ ಹುಟ್ಟಿದರೆಂಬ' ಪ್ರಶ್ನೆಯು ಉತ್ತರ ಸಿಕ್ಕುವದು.

ರಾಜ್ಯ ಸಾಮ್ರಾಜ್ಯಗಳ ಹಣೆಬರಹವನ್ನೊರೆಸುವ ಕಾಲನ ಕೊನೆಯು ಕೈಯಾಟದವರೆಗೂ ಜೀವಂತವಾಗಿದ್ದ ರಾಜ್ಯಶಕ್ತಿಗೆ ಕನ್ನಡಿಗರ ಸಾಮ್ರಾಜ್ಯ ಶಕ್ತಿಯೆಂದೇ ಹೇಳಬೇಕು. ಕ್ರಿ. ಶಕದ ಪೂರ್ವದ ಮಾತಿರಲಿ, ಈಚೆಗಿನ ಇತಿಹಾಸವನ್ನೂ ಕೂಡ ಭಾರತದ ಉಜ್ವಲ ಇತಿಹಾಸವೆಂದು ಹೇಳುವ ದಾದರೆ, ಅದರ ಚುಕ್ಕಾಣಿಯನ್ನು ಯಶಸ್ವಿಯಾಗಿ ನಡೆಯಿಸಿದ ಕನ್ನಡಿಗನ ಪಾತ್ರವನ್ನು ಆ ರಂಗದಿಂದ ಬದಿಗೆ ಸರಿಸಿಬಿಟ್ಟರೆ, ಹೇಳುವುದಕ್ಕೆ ಏನೂ ಉಳಿಯದೆ ಹೋಗಬಹುದು. "ಸುಮಾರು ೩ನೆಯ ಶತಮಾನದಲ್ಲಿ ಕದಂಬ ರಾಜ್ಯಸ್ಥಾಪಕನಾದ ಮಯೂರವರ್ಮನಿಂದ ಕನ್ನಡದ ಅರಸೊತ್ತಿಗೆಯು

ಧ್ವಜಾರೋಹಣವಾಗಿ ೪ನೆಯ ಶತಮಾನದ ನಟ್ಟನಡುವೆ ಬರುವಷ್ಟರಲ್ಲಿ ಇಮ್ಮಡಿ ಪುಲಿಕೇಶಿಯ ಕಾಲಕ್ಕೆ ಅಖಿಲ ಭಾರತವನ್ನಾಕ್ರಮಿಸಿದ ಸಾಮ್ರಾಜ್ಯ ಕನ್ನಡಿಗನದು. ೮ನೆಯ ಶತಮಾನದಲ್ಲಿ ಭೂಮಂಡಲದ ಮೇಲೆ ಸುವಿಖ್ಯಾತ ವಾದ ನಾಲ್ಕು ಸಾಮ್ರಾಜ್ಯಗಳಲ್ಲಿ— ಎಣಿಕೆಗೊಳ್ಳುವ ರಾಷ್ಟ್ರಕೂಟರ ಸಾಮ್ರಾಜ್ಯ, ಹತ್ತನೆಯ ಶತಮಾನದ ಕೊನೆಯಲ್ಲಿ, ಹಿಂದೆ ಆಗಿಲ್ಲ ಮುಂದೆ ಆಗುವದಿಲ್ಲ ಅನ್ನುವಂತಹ ಏಕಛತ್ರಾಧಿಪತ್ಯದಿಂದ ಅಖಿಲ ಭಾರತವನ್ನಾಳಿದ ಚಾಲುಕ್ಯ ವಿಕ್ರಮದೇವನ ಸಾಮ್ರಾಜ್ಯ ವೈಭವ ಎರಡೂ ಕನ್ನಡಿಗನವು. ಇಂತಹ ಶುದ್ಧ ವೀರ ಸಂಸ್ಕೃತಿಯ ಪರಂಪರೆಯಲ್ಲಿ ಬೆಳೆದು ಬಂದ ಕನ್ನಡಿಗನ ಸಮಾಜರಚನೆಯಲ್ಲಿ ಕೊಳೆ ಸೇರಿದರೆ, ಅದರ ನಿವಾರಣೆಗೆ ಅವತಾರವಾಗ ಬೇಡವೇ? ಇತಿಹಾಸಕಾರರೇ ಒಪ್ಪುತ್ತಿರುವಂತೆ ಮಾಳವದಿಂದ ಕನ್ಯಾಕುಮಾರಿಯುವರೆಗೆ ಪ್ರಭಾವಶಾಲಿಯಾಗಿ ದಕ್ಷಿಣ ಭಾರತವನ್ನು ಏಕಛತ್ರಾಧಿಪತ್ಯದಿಂದಾಳಿದ ಕರ್ನಾಟಕದ ಸಾರ್ವಭೌಮತ್ವದ ಬಿಗುಹು ಹನ್ನೆರಡನೆಯ ಶತಮಾನದ ಕೊನೆಯಲ್ಲಿ ಒಮ್ಮೆಲೇ ಕುಸಿಯಲು ಕಾರಣವೇನು? ಬಸವಣ್ಣನವರ ಕ್ರಾಂತಿಯಿಂದ ಕನ್ನಡ ಸಾಮ್ರಾಜ್ಯ ಕುಸಿಯಿತೋ, ಅದು ಕುಸಿಯುತ್ತಿರುವುದನ್ನು ಕಂಡು ಬಸವಣ್ಣನವರು ಕ್ರಾಂತಿಯನ್ನು ಹೂಡಿದರೋ ನೋಡಬೇಡವೇ? ಒಂದು ವೇಳೆ ಬಸವಣ್ಣನವರ ಕ್ರಾಂತಿಯಿಂದಲೇ ದಕ್ಷಿಣ ಭಾರತದ ಸಮಾಜ ರಚನೆ ಶಿಥಿಲವಾಯಿತೆಂದರೆ ಉತ್ತರಭಾರತದ್ದು ವ್ಯವಸ್ಥಿತವಾಗಿತ್ತೇ? ಅದು ದಕ್ಷಿಣ ಭಾರತದಕಿಂತ ಎಂದೋ ನಾಮಶೇಷವಾಗಿರಲಿಲ್ಲವೇ? ಅದಕ್ಕೂ ಕಾರಣ ಬಸವಣ್ಣನವರೇ ಇರಬಹುದೇ? ಸರಿಯಾದ ಸಂಗತಿಯೆಂದರೆ ಗತಿಯುಕ್ತ ಸಮಾಜದ ಪ್ರಗತಿಯ ಪ್ರವಾಹವನ್ನು ಕೃತ್ರಿಮ ಉಪಾಯಗಳಿಂದಾಗಲೀ, ಶಕ್ತಿಯ ಜೋರಿನಿಂದಾಗಲಿ ತಡೆಯಹೋದರೆ ಆಗುವ ಪರಿಣಾಮವೇ ಅದರ ಕಾರಣವಾಗಿತ್ತೆಂದು ಹೇಳಬಹುದು. ಧಾರ್ಮಿಕ ಯುಗದಿಂದ ರಾಜಕೀಯ ಯುಗಕ್ಕೆ ಬಂದ ಭಾರತದ ಸಮಾಜ ವ್ಯವಸ್ಥೆ ಸ್ವಾಭಾವಿಕವಾದ ವಿಕಾಸವನ್ನು ಹೊಂದದೇ ಹೋದುದರಿಂದಲೇ ಪರಕೀಯ ದಾಳಿಯ ಹೊಡೆತವನ್ನು ಸಹಿಸುವ ಶಕ್ತಿ ಮೊದಲು ಉತ್ತರ ಭಾಗದ ಯಾವ ರಾಷ್ಟ್ರದಲ್ಲಿಯೂ ಉಳಿಯದೇ ಹೋಯಿತು. ದಕ್ಷಿಣ ಭಾಗಗಳಲ್ಲಿಯೂ ಹಾಗೇ ಆಗಬಹುದಾಗಿತ್ತು. ಸುಸಂಸ್ಕೃತ ಕನ್ನಡನಾಡಿನ ತುತ್ತು ಅಷ್ಟು

ಸಣ್ಣದಿರಲಿಲ್ಲ. ಮುಂದೆ ಹೋಗಿ ಇದೇ ಕನ್ನಡಿಗರ ಸಾಮ್ರಾಜ್ಯದ ತುತ್ತೀ ಉತ್ತರ ಭಾರತ ರಾಜ್ಯಗಳನ್ನು ನುಂಗಿದ ಗುಟಲದ ಕತ್ತಾಯಿಸಿರುವುದನ್ನು ನೋಡಬಹುದು.

ಹಾಗಾದರೆ ಬಸವಣ್ಣನವರ ಕ್ರಾಂತಿಯ ಪೂರ್ವದಲ್ಲಿ ಕನ್ನಡಿಗರ ಸಾಮ್ರಾಜ್ಯದಲ್ಲಿ ಯಾವ ಕೊಳೆ ಸೇರಿಕೊಂಡಿತ್ತು ? ಅದನ್ನು ತೊಡೆದುಹಾಕಲು ಬಸವಣ್ಣನವರಂತಹ ಅವತಾರಿ ಪುರುಷರೇ ಬರಬೇಕಾದರೆ ಅದು ಎಷ್ಟು ಆಳವಾಗಿ ಬೇರೂರಿರಬೇಕು ? ಅದಕ್ಕಾಗಿ ನಮ್ಮ ಪರಂಪರೆಯ ಅಭಿಮಾನ. ದುರಭಿಮಾನಗಳನ್ನು ಮೀರಿ ನಿಂತು ಶುದ್ಧ ಮನಸಿನಿಂದ ನಮ್ಮ ಇತಿಹಾಸವನ್ನು ಕಾಣುವ ಆಳವಾದ ನೀರಿಗಿಳಿಯುವವಕ್ಕಿಂತ, ಜಗತ್ತಿನ ಇತಿಹಾಸವನ್ನು ಕೂಲಂಕಷವಾಗಿ ಅಭ್ಯಾಸಿಸಿದ ಟಿ. ಡಬ್ಲ್ಯು. ಆರನಾಲ್ಡ್ ಹೆಸರಿನ ಪಾಶ್ಚಿಮಾತ್ಯನು ೮ನೆಯ ಶತಮಾನದಿಂದ ೧೨ನೆಯ ಶತಮಾನದವರೆಗಿನ ಇತಿಹಾಸದಲ್ಲಿ ಭಾರತದ ಸಾಮಾಜಿಕ ಸ್ಥಿತಿಯ ಬಗ್ಗೆ ಬರೆದ ಒಂದೆರಡು ಮಾತುಗಳನ್ನು ನೋಡೋಣ. "ಆಗ ಉಚ್ಚ ವರ್ಗದ ಹಿಂದುಗಳು ಕೆಳಗಿನ ವರ್ಗದವರ ಮೇಲೆ ಅನ್ಯಾಯ ಅಪಮಾನಗಳ ಗುಡ್ಡಗಳನ್ನೇ ರಚಿಸಿದ್ದರು. ಕೆಳಜಾತಿಯ ಯಾವನೊಬ್ಬನೂ ತನ್ನ ಸ್ಥಿತಿಯನ್ನು ಸುಧಾರಿಸಲೆತ್ನಿಸಿದಾಗೆಲ್ಲ ಅನೇಕ ಅಸಂಭವ ತೊಂದರೆಗಳನ್ನು ಅವರ ದಾರಿಯಲ್ಲಿ ನಿರ್ಮಿಸಲಾಗುತ್ತಿತ್ತು. ಬಂಗಾಲದಲ್ಲಿ ನೇಕಾರ ಜಾತಿಯವರನ್ನು ಕೀಳರೆಂದು ಉಚ್ಚ ವರ್ಗೀಯರು ನಡೆಯಿಸಿಕೊಳ್ಳುತ್ತಿದ್ದದರಿಂದಲೇ ಯಾವದೇ ಬಗೆಯ ಉಚ್ಚ ನೀಚತೆಗಳ ಕಲ್ಪನೆಯಿಲ್ಲದ ಮುಸಲ್ಮಾನ ಧರ್ಮವನ್ನು ಸ್ವೀಕರಿಸಿದರು.... ಹಿಂದುಸ್ಥಾನದ ಇನ್ನುಳಿದ ಭಾಗಗಳಿಂದಲೂ ಇದೇ ರೀತಿಯ ಅನೇಕ ಉದಾಹರಣೆಗಳನ್ನು ಕೊಡಬಹುದು. ಅಭಿಮಾನೀ ಆರ್ಯ ಶಾಸನಕಾರರಿಂದ ತಿರಸ್ಕೃತರಾಗಿ, ಬಹಿಸ್ಕೃತರಾಗಿ ತಳಮಳಗೊಳ್ಳುತ್ತಿದ್ದ ದರಿದ್ರ ವರ್ಗಕ್ಕೆ ಮುಸಲ್ಮಾನೀ ಧರ್ಮವು ಈಶ್ವರೀ ಸಂಕೇತದಂತೆ ಭಾಸವಾಯಿತು. ಕೆಳವರ್ಗದವರೆನ್ನಿಸಿಕೊಂಡ ಮೀನಗಾರರು, ಬೇಡರು, ಕಡಲುಗಳ್ಳರು, ಭೂವ್ಯವಸಾಯ ಮಾಡುವವರಲ್ಲನೇಕರು ಯುಗ ಯುಗಗಳಿಂದ ಅನ್ಯಾಯವಾಗಿ ಅನುಭವಿಸಹತ್ತಿದ ಒಂದು ಸಮಾಜದ ರಚನೆಯಿಂದ ಇನ್ನೊಂದು ಹೊಸ ಸಮಾಜ ರಚನೆಗೆ ಬರಲು ಆದರದಿಂದ ಸ್ವಾಗತಿಸಲಾಯಿತು" ಸಾಮಾನ್ಯ ಕಲ್ಪನೆಗೆ ಇಷ್ಟು ಸಾಕಷ್ಟೇ ?

ಇಡೀ ಗಡಿಗೆಯನ್ನು ಮುಗುಚಿ ನೋಡುವ ಅಗತ್ಯವಿಲ್ಲ. ಒಂದು ಅಗಳನ್ನು ಹಿಚುಕಿ ನೋಡಿದರೆ ಸಾಕು, ಎಲ್ಲವೂ ತಿಳಿಯುವದು. ಭಾರತದಲ್ಲಿ ಮುಸಲ್ಮಾನೀ ಧರ್ಮವು ಹಬ್ಬಿದ್ದು ಒಂದು ಕೈಯಲ್ಲಿ ಕುರಾನ, ಇನ್ನೊಂದು ಕೈಯಲ್ಲಿ ಖಡ್ಗ ಹಿಡಿದುಕೊಂಡು ಬೆಳೆಯುತ್ತೆನ್ನುವ ಪ್ರಚಾರದ ಪರದೆಯು ಹಿಂದೆ ನಡೆದವ್ದನ್ನು ಇತ್ತೀಚಿನ ಇತಿಹಾಸಕಾರರು ಬರೆದದ್ದನ್ನು ನೋಡಿ ತಿಳಿಯಬಹುದು. ಇಂದು ಬಂಗಾಲದಲ್ಲಿರುವ ೨ ಕೋಟಿ ಮುಸಲ್ಮಾನರಲ್ಲಿ ಕೇವಲ ೨೫,೦೦೦ ಜನರು ಮಾತ್ರ ಶುದ್ಧ ಶ್ರೇಣಿಯವರೆಂದು ಎಣಿಸಲ್ಪಡುತ್ತಾರೆ. ಅಲ್ಲದೇ ಇಡೀ ಭಾರತದ ಮುಸಲ್ಮಾನರ ಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟು ಪಿಂಜಾರರೋ, ನೇಕಾರರೋ ಇರುತ್ತಾರೆ. ಅವರೆಲ್ಲರಿಗೂ ಖಡ್ಗವನ್ನೇ ತೋರಿಸಲಾಯಿತೇ? ಧಾರ್ಮಿಕ ದೃಷ್ಟಿಯಿಂದ ಏನೇ ಹೇಳಲಿ, ಐತಿಹಾಸಿಕ ದೃಷ್ಟಿಯಲ್ಲಿ ಈ ಘಟನೆಯೆಂದರೆ ಅವ್ಯವಸ್ಥಿತ, ಅಥವಾ ತನಗೆ ಸರಿಹೋಗದ ಒಂದು ಸಮಾಜ ರಚನೆಯಿಂದ ಇನ್ನೊಂದು ತನಗೆ ಹೊಂದಿಕೆಯಾಗಬಹುದಾದ ಸಮಾಜ ರಚನೆಗೆ ಸೇರಿಕೊಳ್ಳುವ ಪ್ರವೃತ್ತಿಯೇ ಆದಾಗಿದೆ. ರಾಜಕೀಯ, ಧಾರ್ಮಿಕ ಎಂದು ಭೇದಮಾಡಿ ಒಂದಕ್ಕೊಂದು ಸಂಬಂಧವಿಲ್ಲವೆನ್ನುವ ಮಾತಿನಲ್ಲಿ ಈ ಬಗೆಯ ಘಟನೆಗಳ ಮುಚ್ಚುಮರೆ ಮಾಡುವ ಕೈಚಳಕವೇ ಇರುತ್ತದೆ. ಸರ್ವರ ಸುಖದ ಹೆಸರಿನಲ್ಲಿ, ಸರ್ವರನ್ನೊಳಗೊಂಡ ಸಮಾಜದಲ್ಲಿ ಒಂದು ವಿಶಿಷ್ಟ ವರ್ಗದ ಹಿತವನ್ನು ಸಾಧಿಸುವದಕ್ಕಾಗಿಯೇ ರಾಜಕಾರಣವು ಧರ್ಮದಲ್ಲಿ ಕೈಹಾಕಬಾರದೆಂದು ಹೇಳಲಾಗುತ್ತಿರಬೇಕು. ಧರ್ಮದ ಅರಮನೆಯ ಸುತ್ತಲೂ ಆವಾರ ಗೋಡೆಯನ್ನು ಕಟ್ಟಿ ಅದರ ಬಾಗಿಲಿಕ್ಕೆ ರಾಜಕಾರಣಕ್ಕೆ ಪ್ರವೇಶವಿಲ್ಲವೆನ್ನುವ ಪಾಟಿಯನ್ನು ಹಚ್ಚಿದ್ದರಿಂದಾದ ಅನರ್ಥವನ್ನು ತಡೆಯುವದಕ್ಕಾಗಿಯೇ ಬಸವಣ್ಣನವರು ಬಂದರು. ಧರ್ಮದ ಅರಮನೆಯಲ್ಲಿನ ಒಂದು ವಿಶಿಷ್ಟ ವರ್ಗವು ತನ್ನ ಸ್ವಾರ್ಥಕ್ಕಾಗಿ ಬಹುಜನ ಸಮಾಜವನ್ನು ಹಿಂಡಿ ಹಿಪ್ಪೆ ಮಾಡುವದನ್ನು ತಡೆದು ಸುವ್ಯವಸ್ಥಿತಗೊಳಿಸುವದರ ದೆಶೆಯಿಂದಲೇ ಹುಟ್ಟಿದರು.

ಒಂದು ಸಲ ಕಳ್ಳನನ್ನು ಬೆಟ್ಟಿಸಿಕೊಂಡು ಬಂದ ಪೋಲೀಸನು ಒಂದು ಬಂಗಲೆಯ ಗೇಟು ಬರುತ್ತಲೇ ನಿಂತುಬಿಟ್ಟನಂತೆ. ಕಳ್ಳನು ಮಾತ್ರ ಒಳಹೊಕ್ಕು ಆ ಬಂಗಲೆಯಲ್ಲಿಯೂ ಸಿಕ್ಕಷ್ಟು ದೋಚಿಕೊಂಡು ಇನ್ನೊಂದು ಗೇಟಿನಿಂದ

ಪಾರಾಗಿ ಹೋದನಂತೆ. "ಪರವಾಸಿಗೆಯು ಹೊರತು ಒಳಗೆ ಬರಕೂಡದು;" ಎಂಬ ಪಾಟಿಯನ್ನು ನೋಡಿ ಹಲ್ಲು ತಿನ್ನುತ್ತ ನಿಂತ. ಪೋಲೀಸನು ಎಷ್ಟೋ ಹೊತ್ತು ಅಲ್ಲಿಯೇ ನಿಂತು ತಿರುಗಿ ಹೋದನಂತೆ. "ಅಪ್ಪಣೆಯ ಪಾಟಿಯನ್ನಾದರೂ ಕಿತ್ತೊಗೆಯಿರಿ ಇಲ್ಲವೆ ಒಳಗೆ ಬಂದ ಕಳ್ಳನನ್ನು ಹಿಡಿಯಲು ಸಿದ್ಧರಾಗಿರಿ." ಎನ್ನುವ ಕೂಗು ಆಗ ಅವಶ್ಯವಿದ್ದಂತೆ ಧರ್ಮದ ಅವಾರದ ಮಧ್ಯವಲ್ಲಿದ್ದ ಭಾರತೀಯರನ್ನೆಚ್ಚರಿಸುವ ಕೂಗಿನ ರೂಪದಲ್ಲಿ ಬಸವಣ್ಣನವರು ಬರಬೇಕಾಯಿತು. ಬಂದರು, ಎಚ್ಚರಿಸಿದರು. ಕಳ್ಳನನ್ನು ಕೆಲ ಕಾಲವಾದರೂ ತಡೆಹಿಡಿದರು.

ಸಮಾಜ ಸಂಸ್ಥೆಯಾಗಲೀ, ಅದನ್ನು ರಕ್ಷಿಸುವ ಶಾಸನ ಸಂಸ್ಥೆಯಾಗಲೀ ಒಂಟಿಯಾಗಿ ಏನನ್ನೂ ಮಾಡಲಾರದು ಎಂಬುದು ಇದರಿಂದ ತಿಳಿದುಬರುವದು. ಆದರೆ, ಆಗ ಅಪ್ಪಣೆಗಾಗಿ ಕಾಯುವ ಪೋಲೀಸನಂತೆ ಶಾಸನ ಸಂಸ್ಥೆಯು ಹತವೀರ್ಯವಾಗಹತ್ತಿತ್ತು. ಹಾಗೂ ಬಹುಜನ ಸಮಾಜವನ್ನು ತನ್ನ ಸ್ವಾರ್ಥಕ್ಕಾಗಿ ತುಳಿಯುತ್ತಿರುವ ವಿಶಿಷ್ಟ ವರ್ಗವು ಭದ್ರವಾದ ತನ್ನ ಕೋಟೆಯನ್ನು ಒಡೆದು ಬರುವ ಎದೆಯಾರದೆಂಬ ಹೆಮ್ಮೆಯಲ್ಲಿಯೋ ಮಬ್ಬಿನಲ್ಲಿಯೋ ಅಂಧವಾಗಿತ್ತು. ಅಂತಲೇ ಆಗ ಪರದಾಳಿಯು ಮನಸೋಕ್ತವಾಗಿ ತನ್ನ ಈ ದಾಟಗೆಯನ್ನು ನಡೆಯಿಸಲು ಸಾಧ್ಯವಾಗಿರಬೇಕು. ಇನ್ನು ಅವತಾರಿ ಪುರುಷರು ಹುಟ್ಟಲೇಬೇಕಾದ ಸ್ಥಿತಿ ಆಗ ಇತ್ತು. ಅದಕ್ಕಾಗಿ ಬಸವಣ್ಣನವರು ಬಂದರು ಎಂಬದನ್ನೊಪ್ಪಿದರೂ, ಅವರು ಹುಟ್ಟಿ ಬಂದು ಮಾಡಿದ್ದು ಒಳ್ಳೆಯದಿತ್ತೆಂಬದನ್ನು ನೋಡಬೇಡವೇ? ಎಂಬ ಈ ಇನ್ನೊಂದು ಪ್ರಶ್ನೆ ಉದ್ಭವಿಸುವದು ಸ್ವಾಭಾವಿಕವಾಗಿದೆ. ಅದನ್ನು ಕೊಂಚ ವಿಚಾರಿಸಿ ನೋಡೋಣ.

ಮಹಾತ್ಮಾ ಬಸವಣ್ಣನವರು ಸಮಾಜ ಸಂಸ್ಥೆಯನ್ನು ಶುದ್ಧಗೊಳಿಸುವದಕ್ಕಾಗಿ ಮಾಡಿದ್ದು ಧಾರ್ಮಿಕ ಕ್ರಾಂತಿ ಅರ್ಥಾತ್ ಸಾಮಾಜಿಕ ಕ್ರಾಂತಿ. ಈ ವರೆಗೆ ನಡೆದ ಕ್ರಾಂತಿಗಳೆಲ್ಲವೂ ರಾಜ್ಯಶಾಸನದ ವಿರುದ್ಧವೇ ಆಗಿರುವದರಿಂದ ಅಥವಾ ಶಾಸನ ಸಂಸ್ಥೆಯನ್ನು ವಶಪಡಿಸಿಕೊಳ್ಳುವಾಗ ಮಾತ್ರ ಮಾಡುವ ಆಂದೋಲನಕ್ಕೆ ಕ್ರಾಂತಿ ಅನ್ನುವ ರೂಢಿ ಬಿದ್ದುದರಿಂದ, ಒಂದು ಪ್ರಚಂಡ ರಾಜಕೀಯ ಆಂದೋಲನವನ್ನು ಹೂಡಿ ಆಗಿನ ರಾಜ್ಯಸಂಸ್ಥೆಯನ್ನು

ವಶಪಡಿಸಿಕೊಂಡು ಬಿಟ್ಟಿದ್ದರೆ, ಬೇಕಾದ್ದು ಮಾಡಬಹುದಿತ್ತಲ್ಲವೇ? ಧರ್ಮದ ಗೊಡವೆ ಏಕೆ ಬೇಕಿತ್ತು? ಈಗ ಅನೇಕ ದೇಶಗಳು ಹಾಗೆಯೆ ಮಾಡುತ್ತಿವೆಯಲ್ಲ? ಯಾವುದೇ ಕಾರಣದಿಂದ ವಿಷಮತೆ ಪಡೆದ ಸಮಾಜ ವ್ಯವಸ್ಥೆಯನ್ನು ಸರಿಗೊಳಿಸುವದಕ್ಕಾಗಿ ಎರಡೂ ರೀತಿಯಿಂದ ಪ್ರಯತ್ನಿಸಬೇಕಾಗುತ್ತದೆ. ಪ್ರಶ್ನೆ ಇರುವದು ಮೊದಲು ಸಾಮಾಜಿಕ ಕ್ರಾಂತಿಯೋ? ರಾಜಕೀಯ ಕ್ರಾಂತಿಯೋ? ಎಂಬುದು. ಅದನ್ನು ಆಯಾ ದೇಶಕಾಲ ಪರಿಸ್ಥಿತಿಗನುಸರಿಸಿ ಆಗಿನ ಕ್ರಾಂತಿ ಪುರುಷರು ನಿರ್ಧರಿಸಬೇಕಾಗುತ್ತದೆ. ಆ ಕ್ಷಣಕ್ಕೆ ಅವರು ಆರಿಸಿದ ಮಾರ್ಗದ ಅರ್ಥವು ಸಾಮಾನ್ಯನಿಗಾಗದೇ ಹೋದರೂ ದಿನಗಳೆದಂತೆ ತಾನೇ ಹೊಳೆಯುವದು. ಭಾರತದ ಜನಮನದ ಜೀವನಾಡಿಯನ್ನು ಬಸವಣ್ಣನವರು ಚೆನ್ನಾಗಿ ತಿಳಿದಿದ್ದರೆಂತಲೇ ಆ ಕಾಲಕ್ಕೆ ಮೊದಲು ಸಾಮಾಜಿಕ ಕ್ರಾಂತಿಯನ್ನು ಹೂಡಿದರು. ಒಂದೆಡೆ ರಾಜರುಗಳು ತಮ್ಮ ವರ್ಚಸ್ಸನ್ನು ಕಳೆದುಕೊಂಡು ರಾಜ್ಯಸತ್ತೆಯನ್ನು ಧರ್ಮಸತ್ತೆಯ ಕೈಗೊಂಬೆಗಳನ್ನಾಗಿ ಮಾಡಿದ್ದರು. ಇನ್ನೊಂದೆಡೆ ಧರ್ಮಸತ್ತೆಯನ್ನೊಪ್ಪದ—ಅಂದರೆ ಗೋಬ್ರಾಹ್ಮಣ (ಗೋ=ಸಾಮಾಜಿಕ ಧನ. ಬ್ರಾಹ್ಮಣ=ಆ ಧನವನ್ನುಪಭೋಗಿಸುವ ವರ್ಗ) ಪ್ರತಿಪಾದಕವಲ್ಲದ ರಾಜ್ಯಸಂಸ್ಥೆಗಳು ಒಂದೊಂದಾಗಿ ಉರುಳಿ ಬೀಳುತ್ತಿದ್ದವು. ಅಂದಾಗ ಧಾರ್ಮಿಕ ಮತಗಳ ಹೆಸರಿನಲ್ಲಿ, ವಿಶಿಷ್ಟ ವರ್ಗಗಳ ಹಿತಗಳು ಸಾಧಿಸುತ್ತಿದ್ದರೆ, ಅದನ್ನು ತಡೆಯುವದಕ್ಕಾಗಿ ಧಾರ್ಮಿಕ ಕ್ರಾಂತಿಯನ್ನೇ ಏಕೆ ಹೂಡಬಾರದು? ಸಮಾಜ ರಚನೆ ಶುದ್ಧವಾದಾಗ ಕೆಲಕಾಲ ರಾಜ್ಯಸಂಸ್ಥೆ ಇಲ್ಲದಿದ್ದರೂ ತನಗೆ ಸರಿಹೋಗುವಂತಹ ರಾಜ್ಯಸಂಸ್ಥೆಯನ್ನು ಅದು ತಾನೇ ರಚಿಸಿಕೊಳ್ಳಬಹುದೆಂಬ ತತ್ವದ ಮೇಲೆಯೇ ಬಸವಣ್ಣನವರು ತಮ್ಮ ಆಂದೋಲನದ ಗತಿಯನ್ನು ನಿರ್ಧರಿಸಿದ್ದರು.

ಎಲ್ಲಿಯೇ ಆಗಲಿ ಧರ್ಮದ ವಿಷಯ ಬರುತ್ತಲೇ ಅದರ ವ್ಯಾಖ್ಯೆಯ ಕಡೆಗೆ ಹೋಗುವವರೇ ಹೆಚ್ಚು. ಎಷ್ಟೋ ಸಲ ಶಬ್ದಾರ್ಥವನ್ನು ಮೀರಿ ನಿಂತು ಸತ್ಯವನ್ನು ಕಾಣಬೇಕಾಗುತ್ತದೆ. ಅಂತೆಯೇ ಇಲ್ಲಿ ಧರ್ಮದ ವ್ಯಾಖ್ಯೆಯು ಶಬ್ದಾರ್ಥಕ್ಕಿಂತಲೂ ಅದರ ಭಾವ ಭಾಷೆಯ ಕಡೆಗೆ ಹೋಗಬೇಕು. ಧರ್ಮದ ಭಾಷೆ ಆಚಾರ. ಆಚಾರವೆಂದರೆ ಶ್ರದ್ಧೆಯುಳ್ಳ ಸದಾಚಾರ. ಸದ್ವಿಚಾರವಿದ್ದವನ ಆಚಾರವೇ ಸದಾಚಾರ. ಎಲ್ಲ ಕಾಲಕ್ಕೂ, ಎಲ್ಲರ ಹಿತವನ್ನು ಬಯಸುವ ವಿಚಾರವೇ ಸದ್ವಿಚಾರ. ಒಬ್ಬನ ಆಚಾರವನ್ನು ನೋಡಿ ಅವನ

ಧರ್ಮವನ್ನು ಗುರುತಿಸಬಹುದು. ನುಡಿಯೊಂದು, ನಡೆಯೊಂದು ಇದ್ದವನ ಆಚಾರ, ಆಚಾರವೇ? ಒಂದು ಆಚಾರದ ಆಚರಣೆಯಿಂದ ಅದನ್ನಾಚರಿಸುತ್ತಿದ್ದ ಸಮಾಜದಲ್ಲಿನ ಸರ್ವರ ಹಿತ ಸಾಧಿಸುತ್ತಿದ್ದರೆ ಅದೇ ಸದಾಚಾರ ಅರ್ಥಾತ್ ಶಿವಾಚಾರ. ಅನೇಕ ಅನಾಚಾರಗಳನ್ನು ಬಡಿದು ಹಾಕದೇ ಬಿಚ್ಚಿ ತೋರಿಸಿ ಅವುಗಳು ತಂತಾನೆ ನಿರ್ನಾಮವಾಗುವಂತೆ ಮಾಡುವದೇ ಶಿವಾಚಾರ. ಆಚಾರವೇ ಸ್ವರ್ಗ ಅನಾಚಾರವೇ ನರಕ. ಅದೆಲ್ಲ ಎಲ್ಲೋ ಉಳಿದು, ಆ ಕಾಲಕ್ಕೆ ಎಲ್ಲ ಸಾಮ್ರಾಜ್ಯಗಳನ್ನು ಮುಕ್ಕಿ ನಿಂತು, ತನ್ನ ಹಿತಕ್ಕೆ ಧಕ್ಕೆ ಬರುತ್ತಿದ್ದರೆ, ಇಡೀ ಸಮಾಜವನ್ನೇ ಒಲೆಕೊಟ್ಟು ಆದನ್ನು ಉಳಿಸಿಕೊಳ್ಳುವೆನೆಂಬ ಹಟ ತೊಟ್ಟ ಸದ್ವಿಚಾರದ ವೈರಿ ವಿಕಾರವು ತಾನೇ ತಾನಾಗಿ ಮೆರೆಯುತ್ತಿತ್ತು. ಒಂದು ಕಾಲಕ್ಕೆ ಮಾನವ ಕುಲಕ್ಕೆ ಆದರ್ಶವಾಗಿ ನಿಂತ ದಯದ ಧರ್ಮದ ದೇಹದಲ್ಲಿ ವಿಷಮತೆಯ ದೆವ್ವ ಸೇರಿಕೊಂಡಿತ್ತು. ಆ ದೆವ್ವವನ್ನೋಡಿಸುವ ಮಾಂತ್ರಿಕನ ಕಾರ್ಯವನ್ನು ಮಾಡುವುದಕ್ಕಾಗಿಯೇ ಬಸವಣ್ಣನವರು ಅನೇಕ ತಂತ್ರಗಳನ್ನು ಹೂಡಿದ್ದರು. "ಎಂತಿಂಥಹರಿಗೋ ಬಗ್ಗದ ನನಗೆ ನಿನ್ನ ತಂತ್ರಗಳು ಯಾವ ಗಿಡದ ತೊಪ್ಪಲು?" ಎನ್ನುತ್ತಿತ್ತು ದೆವ್ವ. "ಅದು ಯಾವ ಗಿಡದ ತೊಪ್ಪಲೋ ಕ್ರಾಂತಿರಂಗದ ಅಗ್ನಿಯಲ್ಲಿ ಹಾಕಿದ್ದೇನೆ ಸಹಿಸಿಕೋ" ಎಂದರು ಬಸವಣ್ಣನರು. ಘಾಟವನ್ನು ತಡೆಯಲಾರದೆ ದೆವ್ವವು ಒದರಿತು, ಚೀರಿತು, ದಿಕ್ಕೆಟ್ಟು ಓಡಿತು. ನನ್ನ ಕಾರ್ಯವಾಯಿತೆಂದರು ಬಸವಣ್ಣನವರು. ಐಕ್ಯ ಸ್ಥಲಕ್ಕೆ ನಿಲುಕಿದ್ದರೂ ಭಕ್ತ ಸ್ಥಲದಲ್ಲಿ ಮಾಡುವ ಕಾರ್ಯ ಮುಗಿಯಿತೆಂದರು. ಅಂತರ್ಧಾನ ಹೊಂದಿದರು. ಅವರ ಈ ಕೊನೆಗೂ ಅನೇಕ ಕುಹಕಿಗಳು ಶಂಕಿಸದಿಲ್ಲ. ಶ್ರೀಕೃಷ್ಣನು ಗತಿಗಾಣಿದೇ ಗಿಡದಡಿಯುಸುವ ಬಿಟ್ಟಿದ್ದು ನಿಜವಾದರೆ, ಹಂದಿಯ ಮಾಂಸ ತಿಂದು ಬುದ್ಧನು ಪ್ರಾಣ ಬಿಟ್ಟಿದ್ದು ಸತ್ಯವಾದರೆ, ಬಸವಣ್ಣನವರ ವಿಷಯವಾಗಿಯೂ ಅವರು ಹೇಳಿದ್ದು ಸರಿ ಎಂದು ಹೇಳೋಣ. ದೆವ್ವ ಬಿಟ್ಟರೂ ಅದು ಆಶ್ರಯಿಸಿದ ದೇಹವನ್ನು ಇನ್ನೂ ಉಪಚರಿಸಿ ಸುದೃಢವನ್ನಾಗಿ ಮಾಡಬೇಕಿರುತ್ತದೆ. ಕ್ರಾಂತಿಯಿಂದ ಶುದ್ಧವಾದ ಸಮಾಜದೇಹವನ್ನು ಅವಸರವಸರವಾಗಿ ಉಪಚರಿಸಿದ್ದರಿಂದಾಗಲೀ ಕೊನೆಬಾಳುವ ಶಕ್ತಿ ಬರುವ ಪೂರ್ವದಲ್ಲಿಯೇ ಇನ್ನೊಂದು ದೆವ್ವದ ಸಂಗಡ ಹೋರಾಡುವ ಪ್ರಸಂಗ ಬಂದಿತಾಗಲೀ ಮತ್ತೆ ಆ ದೇಹ ದೆವ್ವಕ್ಕೆಡೆಯಾಯಿತು. ಹಿಂದೆ ಬಂದ ಬೇನೆಯೋ

ಈಗಲೂ ಬಂದಿದ್ದಾದರೆ ಅದೇ ಉಪಚಾರವೇ ಯೋಗ್ಯವಾಗಬಹುದು. ಆ ಮಾತು ಬೇರೆ.

ಸತ್ಯವನ್ನು ಸುಂದರವಾಗಿಯೂ ಹೇಳಬಹುದೆಂದೊಪ್ಪಿದರೆ, ಸುಂದರವಾಗಿ ಹೇಳಿದ್ದೆಲ್ಲವೂ ಸತ್ಯವೆಂದು ಒಪ್ಪಲಾಗುವದಿಲ್ಲ. ಸರ್ವನಾಮದಲ್ಲಿ ಕರೆದರೂ ಅದರ ಅಂಕಿತನಾಮವಾದ ವೈದಿಕ ಧರ್ಮದ ದೇಹದಲ್ಲಿ ದೆವ್ವ ಸೇರಿತ್ತೆಂದು ನಿಶ್ಚಿತವಾಗಿ ಒಪ್ಪಿದಾಗ ಮಾತ್ರ ಅದನ್ನೋಡಿಸುವದಕ್ಕಾಗಿ ಮಾಡಿದ ಉಪಾಯಗಳ ಬಣ್ಣನೆಯನ್ನು ಸರಿ ಎಂದು ಹೇಳಬಹುದು. ಒಂದು ವೇಳೆ ವೈದಿಕ ಧರ್ಮಕ್ಕೆ ಏನೂ ಬೇನೆಯಾಗದಿದ್ದರೂ ಒಂದು ನಾಯಿಗೆ ಗುಂಡು ಹಾಕುವ ಪೂರ್ವದಲ್ಲಿ ಅದಕ್ಕೆ ಹುಚ್ಚು ಹಿಡಿದಿತ್ತೆಂದು ಹೇಳಿ ಪಾರಾಗಿ ಹೋಗುವ ಬ್ರಿಟಿಶ ಶಿಷ್ಟಾಚಾರದಂತೆ ತಮ್ಮದೊಂದು ಧರ್ಮವನ್ನು ಸ್ಥಾಪಿಸುವದಕ್ಕಾಗಿ ಮೊದಲೇ ಇದ್ದ ವೈದಿಕಧರ್ಮವನ್ನು ದಿವಾಳಿ ತೆಗೆಸುವ ಹಟವನ್ನೇಕೆ ಬಸವಣ್ಣನವರು ಹಿಡಿದಿರಬಾರದು? ಶುದ್ಧಧರ್ಮ, ಮಾನವಧರ್ಮ ಮೊದಲಾದ ಹೆಸರುಗಳಲ್ಲಿ ಸ್ಥಾಪಿಸಿದ ಧರ್ಮದ ವಚನಗಳನ್ನು ನೋಡಿದರೆ ವೈದಿಕ ಧರ್ಮದ, ವೇದವಾಙ್ಮಯಕ್ಕಿಂತ ಹೆಚ್ಚಿನದೇನೂ ಅದರಲ್ಲಿಲ್ಲವೆಂದು ಹೇಳಬಹುದು. ಕೆಲಕೆಲವು ವಚನಗಳಂತೂ ಆಧುನಿಕ ಉಪನಿಷತ್ತುಗಳೆಂದು ಹೊಗಳಿಸಿಕೊಂಡಿವೆ. ಸಂಸ್ಕೃತದಲ್ಲಿದ್ದ ವೇದದ ಆಧಾರದಿಂದಲೇ, ಸಂಸ್ಕೃತವು ತಿಳಿಯದ ಜನರ ಸಹಾಯದಿಂದ ಕನ್ನಡವೇದ ಧರ್ಮವನ್ನು ಸ್ಥಾಪಿಸಿದಂತಾಗಲಿಲ್ಲವೇ? ಇಲ್ಲಿ ಮತ್ತೆ ಕೆಲ ಸಮಸ್ಯೆಗಳೇಳಬಹುದು. ಕೆಲವರೆನ್ನುತ್ತಾರೆ —ಇದ್ದ ಒಂದು ಧರ್ಮವನ್ನು ಉದ್ಧಾರ ಮಾಡಿದ್ದಲ್ಲದೇ ಹೊಸದನ್ನೇನೂ ಸ್ಥಾಪಿಸಿಲ್ಲ ಬಸವಣ್ಣನವರು—ಎಂದು. ಇನ್ನೊಂದು ಬುದ್ಧಿಯಿಂದ ವೈದಿಕ ಧರ್ಮಾಭಿಮಾನಿಗಳೆನ್ನುತ್ತಾರೆ-ವೇದದ ಆಧಾರದಿಂದಲೇ, ಅನುಕರಣದಿಂದಲೇ ಅದರ ವಿರುದ್ಧ ಇನ್ನೊಂದು ಧರ್ಮವನ್ನು ಸ್ಥಾಪಿಸಿದರು ಎಂದು. ಯಾವುದನ್ನು ಒಪ್ಪಬೇಕು? ಸಾಮಾನ್ಯ ದೃಷ್ಟಿಯಿಂದ ವಿಚಾರಿಸಿದರೂ ಕೂಡ ಒಂದು ನಿರ್ಧಾರಕ್ಕೆ ನಾವು ಬರಬಹುದಾಗಿದೆ. ಮಹಾತ್ಮಾ ಬಸವಣ್ಣನವರು ಇನ್ನೇನೂ ಮಾಡದಿದ್ದರೂ ಮುಂದೆ ಸ್ಥಾಪಿತವಾಗಬಹುದಾದ ಮಾನವಧರ್ಮದ ಸೂತ್ರಧಾರಿಗಳಾಗಿದ್ದರೆಂದು ದೃಢವಾಗಿ ಹೇಳಬಹುದು. ಮೊದಲು ಅನುಭವ, ಆ ಮೇಲೆ ಅದರ ಸೂತ್ರ ಬದ್ಧವಾದ ಶಾಸ್ತ್ರ, ಆಗಬೇಕಾದದ್ದು ಸಹಜವಾದ

ರೀತಿ. ಅನೇಕ ಅಂತರ್ಜ್ಞಾನಿಗಳ ಅನುಭವದ ಸಾರವೇ ವೇದವೆನ್ನಿಸಿಕೊಂಡಿತು. ಅದು ಕೇವಲ ಒಬ್ಬ ಮಹಾಪುರುಷನ ಅನುಭವವಾಗಿದ್ದರೆ, ಅಪೌರುಷೇಯುವೆಂದು ತಿಳಿಯಲಾಗುತ್ತಿರಲಿಲ್ಲ. ಪ್ರಪಂಚದಲ್ಲಿ ಇಂದು ಅಸ್ತಿತ್ವದಲ್ಲಿರುವ ಕ್ರೈಸ್ತ, ಪಾರ್ಶಿ, ಮುಸಲ್ಮಾನೀ ಮೊದಲಾದ ಧರ್ಮಗಳು ಒಬ್ಬೊಬ್ಬ ಮಹಾನ್ ಪುರುಷರ ದರ್ಶನದಿಂದ ಹುಟ್ಟಿದವುಗಳಾದುದರಿಂದ ಪೌರುಷೇಯುವೆನ್ನಿಸುವ ಧರ್ಮಗಳಾದವು. ಅನುಭವ ಮಂಟಪದ ಅನುಭಾವಿಗಳ ಅಪೌರುಷೇಯುವಚನ ವಾಙ್ಮಯದಿಂದ ವೀರಶೈವಧರ್ಮ ಹುಟ್ಟಿತು. ಯಾವುದರ ನೆರಳಿನಂತಾಗಿ ಅದು ಹುಟ್ಟಲಿಲ್ಲ. ಶ್ರೀಮತ್ ಶಂಕರಾಚಾರ್ಯರೇ ಒಂದೆಡೆ ಹೇಳಿದಂತೆ ವೇದಗಳಾಗಲೀ, ಉಪನಿಷತ್ತುಗಳಾಗಲೀ ದೊಡ್ಡವುಗಳೆಂದು ತಿಳಿದು ಅವು ಹೇಳಿದ್ದೆಲ್ಲ ಸತ್ಯವಾಗುವುದಿಲ್ಲ. ಸತ್ಯವನ್ನು ಹೇಳುತ್ತಿರುವುದರಿಂದಲೇ ಅವು ದೊಡ್ಡವಾಗಿವೆ. ಅದರಂತೆ ವಚನವಾಙ್ಮಯವೂ ಸತ್ಯವನ್ನು ಹೇಳುತ್ತಿರುವುದರಿಂದಲೇ ದೊಡ್ಡವಾಗಿರುತ್ತವಲ್ಲದೇ ವೇದಗಳ ಅನುಕರಣದಿಂದಲ್ಲ. ಪಾಶ್ಚಿಮಾತ್ಯರು ವೇದವಾಙ್ಮಯಕ್ಕೆ 'ಮಾನವತೆಯ ಬಾಲ್ಯಜೀವನದ ಮೊದಲ್ಲುಡಿಗಳು' ಎಂದು ಹೇಳಿದರೂ ಅದರಲ್ಲಿ ಆಗಲೇ ಮಾನವತೆ ಇತ್ತೆಂಬುದನ್ನು ಇನ್ನೊಂದು ಬದಿಯಿಂದ ಒಪ್ಪಿದ್ದಾರಲ್ಲ. ಒಂದು ಕಾಲಕ್ಕೆ ಅತ್ಯುಚ್ಚಸ್ಥಿತಿ ಎಂದು ತಿಳಿದದ್ದೇ ಅದರ ಮುಂದಿನ ಕಾಲಕ್ಕೆ ಬಾಲ್ಯಾವಸ್ಥೆ ಎಂದೇ ಗುರುತಿಸಲಾಗುತ್ತದೆ. ಆದುದರಿಂದಲೇ ಅವರಂತೆ ನಾವು ಮೀನ, ಮಂಗಗಳ ವಂಶಜರೆಂಬ ಕಲ್ಪನೆ ಇರದೆ, ಋಷಿ ಮುನಿಗಳ ವಂಶಜರೆಂಬ ಕಲ್ಪನೆ ಇರುವದು. ಅದು ಮಾನವತೆಯ ದ್ಯೋತಕವಲ್ಲವೇ? ಎಲ್ಲೆಲ್ಲಿ ಮಾನವತೆ ಇದೆಯೋ ಅದೆಲ್ಲ ಮಾನವತೆ ಎಂದೇ ಹೇಳಬೇಕಲ್ಲದೆ, ನಮ್ಮ ಮಾನವತೆಯ ಅನುಕರಣವೆಂದು ಹಳಿಯುವ ಅಗತ್ಯವಿಲ್ಲ. ಧರ್ಮದೊಳಗಿನ ತರ್ಕಕರ್ಕಶ ಭಾಗವನ್ನು ಬಿಟ್ಟರೆ, ತರ್ಕಾತೀತವಾದ ಅನೇಕ ಮಾತುಗಳು ಎಲ್ಲ ಧರ್ಮಗಳಲ್ಲಿ ಒಂದೇ ರೀತಿಯಾಗಿ ಇದ್ದದ್ದನ್ನು ನೋಡಬಹುದು. ಉದಾಹರಣಾರ್ಥವಾಗಿ ಒಂದು ಉಪನಿಷತ್ತಿನ ವಚನ:

ಗವಾಮ್ ಅನೇಕ ವರ್ಣಾನಾಂ ಕ್ಷೀರ ಶ್ಯಾಸ್ತ್ಯೇಕವರ್ಣತಾ।
ಕ್ಷೀರವತ್ ಪಶ್ಯ ತೇ ಜ್ಞಾನಂ ಲಿಂಗಿನಾಸ್ತುಗವಾಂ ಯಥಾ।

**ಇನ್ನೊಂದು ಮುಸಲ್ಮಾನೀ ಸೂಫಿಗಳ ವಚನ:**

"ಜಾಮ ವು ಸದರಂಗ ಜಾ ಖುಮ್ಮೆ ಸಫಾ, ಸಾದಾ
ಓ ಯುಕರಂಗಗಶ್ತಾ ಚೂಜಿಯಾ"

ಎರಡೂದರ ಅರ್ಥವು ಒಂದೇಯಾಗಿದೆ! ಇದರಲ್ಲಿ ಯಾವುದು, ಯಾವುದರ ಅನುಕರಣ? ವಚನಗಳಲ್ಲಿ ವೇದದ ಛಾಯೆ ಕಂಡು ಬರುತ್ತಿದ್ದರೆ, ಇಡೀ ದೇಶವನ್ನಾಕ್ರಮಿಸಿದ ವೈದಿಕಧರ್ಮದ ಪರಿಸ್ಥಿತಿಯ ಪ್ರತಾಪವೇ ಕಾರಣವಾಗಿರುತ್ತದೆ. ಕ್ರಿಸ್ತೀಧರ್ಮದ ಅನೇಕ ಅಮೌಲ್ಯ ತತ್ವಗಳ ಮೇಲೆ ಬೌದ್ಧ ಧರ್ಮದ ಪ್ರಭಾವವಿದೆ. ಏಸುಕ್ರಿಸ್ತನ ಜನ್ಮಕಾಲಕ್ಕೆ ಶಿರಿಯಾ ದೇಶದ ತುಂಬೆಲ್ಲ ಬೌದ್ಧಮಠಗಳು ತುಂಬಿ ತುಳುಕುತ್ತಿದ್ದುದೇ ಅದಕ್ಕೆ ಕಾರಣ. ರೂಢಿಗಳು (Forms) ಕರ್ಮಕಾಂಡಗಳು (Dogmas) ಆಯಾಯ ಧರ್ಮಗಳ ಉಗಮದ ಕಾಲಕ್ಕಿದ್ದ ಪರಿಸ್ಥಿತಿಗಳಿಂದ ತೆಗೆದುಕೊಂಡವುಗಳಾಗಿರುತ್ತವೆ. ಸ್ವಾಮೀ ವಿವೇಕಾನಂದರು, ಅಮೇರಿಕೆಯ ಓರ್ವ ಮಹಿಳೆಗೆ ಪೂರ್ವಜನ್ಮದ ಮೇಲೆ ವಿಶ್ವಾಸ ಹುಟ್ಟುವದಕ್ಕಾಗಿ ಒಂದು ಉದಾಹರಣೆಯನ್ನು ಕೊಟ್ಟಿದ್ದಾರೆ. "ಒಂದೇ ನಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಕುನ್ನಿಗಳಲ್ಲಿ ಒಂದು ಸಿರಿವಂತನ ಮನೆ ಸೇರಿ ಸ್ವರ್ಗಸುಖವನ್ನನುಭವಿಸುತ್ತದೆ. ಇನ್ನೊಂದು ಬಡವನ ಮನೆ ಸೇರಿಕಟುಕು ರೊಟ್ಟಿಯನ್ನು ಕಡಿಯುತ್ತದೆ. ಇದೇ ಆಯಾ ಪ್ರಾಣಿಗಳ ಪೂರ್ವ ಕರ್ಮಗಳ ಭೋಗ, ಅದೇ ಪುನರ್ಜನ್ಮಗಳ ದ್ಯೋತಕ." ಶಿರಿವಂತ, ದರಿದ್ರರೆಂಬ ಕೃತ್ರಿಮ ಭೇದಭಾವಗಳು ನೈಸರ್ಗಿಕವೆಂದು ತಿಳಿದ ಎರಡು ದೇಶಗಳಿಂದ ಬಂದ ಇಬ್ಬರಿಗೆ ಈ ಉದಾಹರಣೆಯಿಂದ ಪೂರ್ವಜನ್ಮದ ಮೇಲೆ ವಿಶ್ವಾಸ ಹುಟ್ಟಬಹುದು. ಸಮತಾವಾದದಂತಹ ರಶಿಯದ ಸಮಾಜರಚನೆಯಲ್ಲಿ ಒಂದೇ ನಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಯಾವ ಕುನ್ನಿಯೂ ವಿಷಮ ಸುಖ ಪಡೆಯಲಾರದು. ಆದರೆ ಅದೆಲ್ಲ ಆಯಾ ದೇಶಗಳ ಸ್ಥಿತಿಗತಿಗಳನ್ನವಲಂಬಿಸಿರುತ್ತದೆ.

ವೈದಿಕ ಧರ್ಮಕ್ಕಿಂತಲೂ ಬೇರೆಯಾದ ಇನ್ನೊಂದು ಧರ್ಮವನ್ನು ಸ್ಥಾಪಿಸಲಾಯಿತೆಂದರೆ—ಬೇರೆ ಎಂದರೆ ವೈರಿ ಎಂದೇಕೆ ತಿಳಿಯಬೇಕು? ದೆವ್ವ ಬಡಿದ ಮನುಷ್ಯನು ಸ್ವತಃ ಏನೂ ಮಾತಾಡದೇ, ಒಳಗಿನ ದೆವ್ವವೇ ಮಾತಾಡುತ್ತಿದ್ದರೂ ಆ ವ್ಯಕ್ತಿಯೇ ಮಾತಾಡಿದಂತ ಭಾಸವಾಗುವಂತೆ, ವೈದಿಕ ಧರ್ಮದಲ್ಲಿ ಸೇರಿದ ಕೊಳೆಯ ಸಲುವಾಗಿ ಮಾತನಾಡಿದಾಗೆಲ್ಲ, ಶುದ್ಧವಿದ್ದ ಮೂಲಧರ್ಮದ ವಿಷಯವಾಗಿ ಮಾತನಾಡಿದಂತೆ ಆಭಾಸವನ್ನುಂಟುಮಾಡಬಹುದೇ? ಅದು ಕೇವಲ ಪ್ರಚಾರವಲ್ಲ, ಅಪಪ್ರಚಾರ. ವ್ಯಕ್ತಿಯನ್ನಲ್ಲದೆ

ಅವನಲ್ಲಿರುವ ನೀಚತನವನ್ನು ದ್ವೇಷಿಸುವೆನೆನ್ನುವ ಬಸವಣ್ಣನವರು ಒಂದು ಶುದ್ಧ ಧರ್ಮವನ್ನು ದ್ವೇಷಿಸಿದರೆಂಬ ಕಲ್ಪನೆ ಕೂಡ ಅಸಹ್ಯವೆನ್ನಿಸುತ್ತಿದೆ. ಯಾವ ಧರ್ಮವನ್ನು ಸ್ಥಾಪಿಸುವದಕ್ಕಾಗಿ, ಋಷಿಮುನಿಗಳು ಗಂಧದ ಕೊರಡು ಸವೆದಂತೆ ತಮ್ಮ ದೇಹವನ್ನು ಸವೆಯಿಸಿದರೋ, ಯಾವ ವೈದಿಕ ಧರ್ಮವು ಮಾನವ ಸಂಸ್ಕೃತಿಯ ಸಂದೇಶವನ್ನು ಜಗತ್ತಿಗೆ ಸಾರಿತೋ ಅಂತಹದರ ಬಗ್ಗೆ ಅಜ್ಞಾನವನ್ನು ತೋರಿಸಿದರೆ ಅದಕ್ಕೆ ಬೆಲೆಯುಂಟೇ ? ಆದರೆ ಎಂಥ ಉತ್ತಮ ಫಲವಿದ್ದರೂ ಅದನ್ನು ಬಹಳಕಾಲ ಹಾಗೆ ಇಟ್ಟರೆ, ಅದು ಕೊಳೆತು ಅದರಲ್ಲಿದ್ದ ಅಮೃತವೇ ವಿಷವಾಗಬಹುದು. ಆತ್ಮವು ಅಮರವಿರುತ್ತದೆ. ಅದನ್ನು ಧರಿಸಿದ ಶರೀರವೂ ನಾಶ ಹೊಂದುವ ಗುಣವುಳ್ಳದ್ದಿರುತ್ತದೆ. ಅದರಂತೆಯೇ ಧರ್ಮದ ತತ್ವಗಳು ನಿತ್ಯ, ಸತ್ಯವಿರುತ್ತವೆ. ಅವುಗಳನ್ನು ಅನ್ವಯಿಸಿ ಕೊಳ್ಳುವ ಸಮಾಜ ಪರಿವರ್ತನ ಶೀಲವಿರುತ್ತದೆ. ಕಾಲಕಾಲಕ್ಕೆ ತಕ್ಕಂತೆ ಅವರ ಉಡುಪನ್ನು ಬದಲಿಸಲೇಬೇಕು. ಬಸವಣ್ಣನವರ ಕಾಲಕ್ಕೆಂದರೆ ಈ ಸ್ಥಿತಿ ಬಂದಿತ್ತೆಂದು ಮೇಲೆಯೇ ಕಾಣುವದು. ಅದು ಸಹಜವಾಗಿ ಪರಿವರ್ತನ ಗೊಳ್ಳದ್ದರಿಂದಲೇ ಕ್ರಾಂತಿಯನ್ನು ಮಾಡಿ ಪ್ರಗತಿಯನ್ನು ಸಾಧಿಸಬೇಕಾಯಿತು

ಸಮಾಜ ಜೀವನದಲ್ಲಿ ಚಾತುರ್ವರ್ಣಗಳು ವ್ಯವಸ್ಥಿತವಾಗಿದ್ದರೂ ಹೊರಗಿನಿಂದ ಬಂದ ಕ್ಷತ್ರಿಯ, ವೈಶ್ಯರ ವ್ಯವಸ್ಥೆ ಮಾಡುವದು ಕಠಿಣವಾದ್ದ ರಿಂದ ಕಲಿಯುಗದಲ್ಲಿ ಉಳಿದ ವರ್ಣಗಳು ಲೋಪವಾಗಿ ಬ್ರಾಹ್ಮಣ, ಶೂದ್ರ ಎಂಬ ಎರಡೇ ವರ್ಣಗಳು ಉಳಿಯುವವೆಂದು ಹೇಳಬೇಕಾಯಿತು. ಇದರಿಂದ ಅತ್ಯಲ್ಪ ವರ್ಗ ಬ್ರಾಹ್ಮಣ ವರ್ಣವಾಗಿ. ಉಳಿದ ಮೂರೂ ವರ್ಣಗಳು ಶೂದ್ರ ವರ್ಣಗಳಾದುವು, ಪುಸ್ತಕ ಪ್ರಮಾಣ, ಧರ್ಮ ಗುರು ಪ್ರಮಾಣಗಳ ಪರ ಪ್ರತ್ಯಯನೇಯ ಬುದ್ಧಿ ಇದ್ದ ಕಾಲಕ್ಕೆ ಬುದ್ಧಿಪ್ರಮಾಣ, ಪ್ರತ್ಯಕ್ಷ ಪ್ರಮಾಣ ಗಳನ್ನು ಕಲಿಸಿಕೊಟ್ಟ ಬಸವಣ್ಣನವರ ಆಗಮನದಿಂದೀಚೆಗೆ ಅದಕ್ಕೆಲ್ಲ ಸಂಚ ಕಾರ ಬಂದಿತು. ಎರಡೇ ವರ್ಣಗಳನ್ನಿಟ್ಟಿದ್ದರೂ ಚಿಂತೆ ಇರಲಿಲ್ಲ. ಮಾತ್ರ ಅವುಗಳಲ್ಲಿಯೇ ಶ್ರೇಷ್ಠ, ಕನಿಷ್ಟವೆಂಬ ಕೃತ್ರಿಮತನವನ್ನು ತುಂಬಿದ್ದರಿಂದ ಎಲ್ಲ ಬುಡ ಮೇಲಾಯಿತು. ತತ್ಪೂರ್ವದಲ್ಲಿ ವೈದಿಕ ಧರ್ಮಾಭಿಮಾನಿಗಳಲ್ಲಿ ಚಾತುರ್ವರ್ಣಗಳು ನೈಸರ್ಗಿಕವೆಂಬ ಹಟವಿದ್ದಿತೇ ವಿನಾ ಅವುಗಳಲ್ಲಿ ಶ್ರೇಷ್ಠ ಕನಿಷ್ಟವೆಂಬ ತೀವ್ರ ಕಲ್ಪನೆಗೆ ಎಡೆ ಇದ್ದಂತಿಲ್ಲ. ಅದೇ ಮಾತನ್ನೇ ಗಟ್ಟಿ

ಯಾಗಿಟ್ಟಿದ್ದರೆ ಆ ಕಾಲಕ್ಕೆ ಬಸವಣ್ಣನವರ ಅನುಯಾಯಿಗಳ ವಿರೋಧ ಕಟ್ಟಿಕೊಳ್ಳುವದಾಗಲೀ, ಈ ಕಾಲದ ಅತಿ ಶೂದ್ರರ ಮುಂದಾಳುಗಳಿಂದ ತುಂಬಿದ ಸಭೆಯಲ್ಲಿ ಸುಡಿಸಿಕೊಳ್ಳುವದಾಗಲೀ ಮನುಮಹರ್ಷಿಗೆ ಅಗತ್ಯವಿರ ಲಿಲ್ಲವೇನೋ !

ಹೊರಗಿನಿಂದ ಬಂದು ನಮ್ಮನ್ನು ಗೆದ್ದವ (ಕ್ಷತ್ರಿಯ ವೈಶ್ಯ) ರಂತೂ ಶ್ರೇಷ್ಠರೇ ತಾನೇ? ಅವರ ಸಂಗಡ ಇಲ್ಲಿಯ ಅಲ್ಪ ಸಂಖ್ಯೆಯಲ್ಲಿದ್ದ ಬ್ರಾಹ್ಮಣ ವರ್ಗವೂ ಕೂಡಿ, ಬಹು ಸಂಖ್ಯೆಯಲ್ಲಿದ್ದ ಶೂದ್ರರನ್ನು ಕನಿಷ್ಠರೆಂದು ತುಳಿಯ ಲಾಗುತ್ತಿತ್ತು. ಆ ಕಾಲಕ್ಕೆ ಜನತಾಜನಾರ್ದನ ಸೇವೆ—ಎಂದರೆ ಈ ಶೂದ್ರರ ಸೇವೆಯೇ ಆಗಿತ್ತು. ಬಸವಣ್ಣನವರು ಎಷ್ಟೇ ಪ್ರಯತ್ನ ಪಟ್ಟರೂ ಇನ್ನೂ ಉಳಿದುಕೊಂಡ ಇಂದಿನ ಅತಿ ಶೂದ್ರರ (ಅಸ್ಪೃಶ್ಯರ) ದುಃಖನಿವಾರಣೆ ಮಾತ್ರ ಅಂದಿನ ಅಸ್ಪೃಶ್ಯತಾ ನಿವಾರಣೆಯಾಗಿರಲಿಲ್ಲವೆಂಬುದನ್ನು ನೆನಪಿನಲ್ಲಿಡಬೇಕಾ ಗಿದೆ. ಇಷ್ಟು ಸಣ್ಣ ಕೆಲಸ ಬಸವಣ್ಣನವರ ಪಾಲಿಗೆ ಇದ್ದಿರಲಿಲ್ಲ. ಆದರೂ ಈ ಅತಿ ಶೂದ್ರರ ಪ್ರಶ್ನೆಯಿಂದ ಸಹ ಅಂದಿನ ಸಮಾಜದಲ್ಲಿನ ವಿಷಮತೆಯ ಕಲ್ಪನೆ ಕಟ್ಟಬಹುದಾಗಿದೆ. ಇಂದಿನ ಅತಿ ಶೂದ್ರರ ವರ್ಗವು ಶ್ರೇಷ್ಠರೆನ್ನಿಸಿ ಕೊಳ್ಳುವ ಮೇಲ್ವರ್ಗಕ್ಕೆ, "ನಮಗೆ ನೀವು ಕನಿಷ್ಟರೆಂದರೂ ಚಿಂತೆಯಿಲ್ಲ. ಸಾಕಷ್ಟಲ್ಲದೇ ಹೋದರೂ ನೀವು ಪಡೆದಷ್ಟು ಸುಖ ಸಂಪತ್ತನ್ನಾದರೂ ಕೊಡಿರಿ." ಎಂದು ಕೇಳುತ್ತಿರುವದನ್ನು ನೋಡಿದರೇ ಈ ಶ್ರೇಷ್ಠ ಕನಿಷ್ಠತೆಗೆ ಸಮಾಜ ಸುಧಾರಣೆಯ ಮೂಲವಾದ ಆರ್ಥಿಕ ಸ್ಥಿತಿಯೇ ಹೆಚ್ಚಾಗಿ ಕಾರಣವಿರುತ್ತದಾಗಿ ಕಂಡು ಬರದಿರದು. ಕೇವಲ ವೈಯಕ್ತಿಕ ಧರ್ಮ ಸಾಧನೆಗೂ ಕೂಡಾ ಆಯಾ ವ್ಯಕ್ತಿಯ ಆರ್ಥಿಕ ಸ್ಥಿತಿಯೇ ಕಾರಣವಾಗಿರು ತ್ತದಾಗಿ ಧರ್ಮದ ಕಟ್ಟುಗಳೇ ಹೇಳಿವೆ. "ಶರೀರ ಮಾದ್ಯಂ ಖಲು ಧರ್ಮ ಸಾಧನಂ" ಧರ್ಮ ಸಾಧಕನ ದೇಹ ಒಳ್ಳೆಯ ಸ್ಥಿತಿಯಲ್ಲಿರಬೇಕಾದರೆ ಅವನ ಆರ್ಥಿಕ ಸ್ಥಿತಿ ಚನ್ನಾಗಿರದೇ ಸಾಧ್ಯವೇ? ಸಮಾಜಧರ್ಮ, ಒಳ್ಳೆಯದಾಗಿರ ಬೇಕಾಗಿದ್ದರೆ ಆ ಸಮಾಜದ ಆರ್ಥಿಕ ಸ್ಥಿತಿ ಭವ್ಯವಾಗಿರದೇ ಶಕ್ಯವೇ? ಆರ್ಥಿಕ ಸಮತೆಯ ತಳಹದಿಯ ಮೇಲೆಯೇ ಶುದ್ಧ ಸಮಾಜವನ್ನು ರಚಿಸಲು ಬಸ ವಣ್ಣನವರು ಬೋಧಿಸಿದರು. ಸಮಾಜದೊಳಗಿನ ಪ್ರತಿಯೊಬ್ಬ ವ್ಯಕ್ತಿಯೂ ಶಕ್ತಿ ಇದ್ದಷ್ಟು ದುಡಿಯಬೇಕು. ಅವಶ್ಯಕತೆ ಇದ್ದಷ್ಟೇ ತಿನ್ನಬೇಕು. ಹೆಚ್ಚು ಳಿದದ್ದನ್ನು ಜನತಾ ಜನಾರ್ದನ ಸೇವೆಯಲ್ಲಿ ಸಲ್ಲಿಸಬೇಕು. **ಹೀಗೆ ದುಡಿದ**

**ವನ ದುಡಿತವೇ ದೇವರು. ಹೀಗೆತಿಳಿದು ಮಾಡಿದವನ ಕಾಯಕವೇ ಕೈಲಾಸ,** ಜಾತಿಗಳಾಗಲಿ, ಕೋತಿಗಳಾಗಲಿ ಇದರ ಮುಂದೆ ಏನೂ ಮಾಡಲಾರವು.

ಧರ್ಮ ಹಾಗೂ ಜಾತಿಗಳು ಸ್ಪಷ್ಟ ಕಲ್ಪನೆ ಇಲ್ಲದೆ ಹೋಗುವದರಿಂದಲೇ ಅನೇಕ ಸಲ ವೈಷಮ್ಯ ತೋರಿಬರುವದುಂಟು. ನಿತ್ಯ ಸತ್ಯ ತತ್ವಗಳನ್ನು ವ್ಯವಹಾರದಲ್ಲಿಳಿಸುವ ರೀತಿಗಳಲ್ಲಿ ಭೇದಗಳು ಕಂಡುಬರಬಹುದು. ಈ ಭೇದಗಳಿಗೇ ಜಾತಿಗಳು ಮತಗಳು ಎಂದು ಕರೆಯುವರು. ಯಾವ ದಾರಿಯಿಂದ ಹೋದರೂ ಒಂದೇ ಊರಿಗೆ ಮುಟ್ಟುತ್ತಿದ್ದರೆ ಎಷ್ಟು ದಾರಿಗಳಿದ್ದರೇನು? ಎಷ್ಟು ಮತಗಳಿದ್ದರೇನು? ಆದರೆ ಇಲ್ಲಿ ಮತ ವಿರೋಧಗಳೆಂದರೆ, ಆಯಾ ಮತಗಳನ್ನಾಚರಿಸುತ್ತಿರುವವರ ಹಿತ ವಿರೋಧವಾಗಿರುತ್ತದೆಂಬುವದನ್ನು ಮರೆಯಬಾರದು. ಒಬ್ಬನ ದಾರಿಯಲ್ಲಿ ವಿವಿಧ ಫಲಭರಿತ ಗಿಡಬಳ್ಳಿಗಳೂ ಅಲ್ಲಲ್ಲಿ ತಿಳಿನೀರಿನ ಸರೋವರಗಳೂ, ಇನ್ನೊಬ್ಬನ ದಾರಿಯಲ್ಲಿ ನೆರಳಿಗಾಗಿ ಒಂದು ನೋಟು ಮರ ಕೂಡ ಇಲ್ಲವಾದರೆ ಬಡಿದಾಟವಾಗಬಾರದೇಕೆ? ಈ ಬಡಿದಾಟವೆಂದರೇ ಆರ್ಥಿಕ ವಿಷಮತೆಯ ಬೀಜ. ಆ ಬೀಜ ಬೆಳೆಯುತ್ತ ದೊಡ್ಡದಾದಂತೆ ಇಬ್ಬರೂ ಮುಟ್ಟಬೇಕಾದ ಊರು ಎಲ್ಲೋ ಉಳಿದು ದಾರಿಯಲ್ಲಿಯೋ ಬಡಿದಾಡುತ್ತ ನಿಲ್ಲಬಹುದು. ಇಲ್ಲವೇ ಮೂರನೆಯವನೊಬ್ಬನು ಇಬ್ಬರನ್ನೂ ಕೊರಕಲ ದಾರಿಗೆ ನೂಕಿ ಎಲ್ಲವನ್ನೂ ತಾನು ಆಕ್ರಮಿಸಬಹುದು. ಇದನ್ನರಿವ ಮುನ್ನೋಟ ಬಸವಣ್ಣನವರಲ್ಲಿತ್ತೆಂದೇ ಅನೇಕವಾಗಿ ಬೆಳೆದುನಿಂತ ಮತಗಳನ್ನು ಮರೆಯಿಸಿಬಿಟ್ಟು, ನೈಸರ್ಗಿಕವಾದ ಮತಗಳನ್ನು ಅನೈಕ್ಯಬರದಂತೆ ಏಕಸೂತ್ರಗೊಳಿಸಿ, ಆ ಸೂತ್ರಮಾಲೆಯ ಮೇರು ಮಣಿಗಳಾಗಿದ್ದರು.

ಯೋಗ್ಯ ತಳಹದಿಯ ಮೇಲೆ ವ್ಯವಸ್ಥಿತ ಧರ್ಮವನ್ನೊಂದನ್ನೆ ಬಸವಣ್ಣನವರು ಸ್ಥಾಪಿಸಲಿಲ್ಲ. ಒಂದು ಸುರಾಜ್ಯವನ್ನೂ ಇನ್ನೊಂದು ಕನ್ನಡ ಸಾಮ್ರಾಜ್ಯವನ್ನೂ ಕಟ್ಟಿದರು. ಸ್ವರ್ಗವನ್ನೇ ಭೂಮಿಗಿಳಿಸುವದಕ್ಕಾಗಿ, ಭೂಮಿಯಿಂದ ಸ್ವರ್ಗಕ್ಕೆ ಸೋಪಾನ ನಿಲ್ಲಿಸಿದರು. ಆ ಸೋಪಾನದಿಂದ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬ ಮಾನವ ಪ್ರಾಣಿಯೂ ಸ್ವರ್ಗಕ್ಕೆ ಹೋಗಬಹುದಾಗಿ ಶ್ರದ್ಧೆಯುಳ್ಳ ಸದಾಚಾರದ ಮೇಲೆ ವಿವೇಕವುಳ್ಳ ವಿಶ್ವಾಸವನ್ನು ಹುಟ್ಟಿಸಿದರು. ಭವಿಷ್ಯಕಾಲದಲ್ಲಿ ಎಂದಾದರೂ ಇಂದಿನ ಸಾಂಪ್ರ

ದಾಯಿಕ ಪಕ್ಷಪಾತಗಳು ಕಡಿಮೆಯಾಗಿ ಒಂದು ಹೆಚ್ಚು ವಿವೇಕಸಿದ್ಧವಾದ ವ್ಯಾಪಕ ಮಾನವಧರ್ಮವನ್ನು ಎಲ್ಲರೂ ಮನ್ನಿಸುವರಾದಾಗ ಬಸವಣ್ಣನವರು ಇಂದಿಗಿಂತಲೂ ಹೆಚ್ಚು ಎದ್ದು ಕಾಣುವರು. ಸ್ವಾಭಾವಿಕವಾಗಿಯೇ ಅವರು ಮಹಾನ್ ಪುರುಷರಲ್ಲಿ ಅತಿ ಮಹಾನ್ ಪುರುಷರಿದ್ದರು. ಇಂದು ಅಂತಹ ಮಹಾನ್‌ಪುರುಷರು ಜನ್ಮಿಸಿದ ಕನ್ನಡ ನಾಡು ಛಿನ್ನವಿಛಿನ್ನವಾಗಿ ದುರ್ದೆಸೆ ಗೀಡಾಗಿದ್ದರೆ ತಪ್ಪು ಯಾರದು? ವಿಷಮತೆಯು ಹಣಕಿ ಸಹ ಹಾಕದ ದಾರಿಯನ್ನು ತೋರಿಸಿ ಕೊಟ್ಟರೂ ಅದನ್ನು ಬಿಟ್ಟು ಅಂಧರಾಗಿ ಅಷ್ಟ ದಾರಿಯನ್ನು ಹಿಡಿದರೆ, ಮತ್ತೆ ಸರಿಯಾದ ದಾರಿಗೆ ಹಚ್ಚುವದಕ್ಕಾಗಿ ಅವರು ಬರಬಹುದಾದರೂ ತಪ್ಪು ನಮ್ಮದೆಂಬುದು ಸ್ವಯಂಸಿದ್ಧವಷ್ಟೆ? ಆ ತಪ್ಪನ್ನು ಒಪ್ಪಿ ಕೊಂಡು ಒಕ್ಕೊರಲಿನಿಂದ ಕೂಗಿಕೊಂಡಾಗ ಸದೇಹರಾಗಿ ಬರದಿದ್ದರೂ, ನಮ್ಮ ಕುರುಡುತನವನ್ನು ಹೋಗಲಾಡಿಸುವ ಜ್ಯೋತಿಯ ರೂಪದಲ್ಲಿಯಾದರೂ ಬರಬಹುದು. ಅಷ್ಟೇಕೆ? ಬಸವಣ್ಣನವರ ಪುರುಷ ಹಸ್ತಕ್ಕಿಂತ, ಎಂಥ ಕಬ್ಬಿಣವನ್ನೂ ಬಂಗಾರವನ್ನಾಗಿ ಮಾಡಬಲ್ಲ ಪರುಷ ಹಸ್ತ ಯಾವಾಗಲೂ ನಮ್ಮ ಬೆಂಬಲಕ್ಕಿರುವಾಗ ಇಲ್ಲದ ಕಾರಣ ಪುರುಷ ಬೇಕೆ? ಬೇಕೆ ಆಗಿದ್ದರೆ, ಏಕೆ?

೫

# ಮಹಾತ್ಮಾ ಬಸವಣ್ಣನವರ ಭಾವವಾಣಿ

ಕಲಾವಿದನ ವೀಣೆಯ ತಂತಿಗಳ ಮಿಡಿತದಿಂದ ಸೂರೆಯಾದ ಸುಂದರ ಸ್ವರವು ರಸಿಕ ಮಾನವನಿಗೆ ಮಧುರಸಂಗೀತವಾಗುವಂತೆ ಉಜ್ವಲ ಪ್ರತಿಭೆಯುಳ್ಳ ಸಹೃದಯ ಮಾನವನ ಒಳಗಿನ–ಒಳಗಿನ ಒಳದನಿಯೊಂದರ ಕರುಳಿನ ಮಿಡಿತವೇ ಎದೆದುಂಬಿ ಬಾಯಿಗೆ ಬಂದಾಗ ಭಾವವಾಣಿಯಾಗುವದು. ಅತುಲ ಕೃತುಶಕ್ತಿಯನ್ನು ನಿಸರ್ಗವ ಸಹಾಯದಿಂದ ಪಡೆದ ಕವಿಯ ಮುಖದಿಂದ ಹೊರಡುವ ಈ ಭಾವವಾಣಿಯೇ ಮುಂದೆ ದೇವವಾಣಿಯಾಗುವುದು. ಅದೇ ಎಲ್ಲ ಸ್ಫೂರ್ತಿಗಳ ಉಗಮವೂ ಆಗುವದು. ಅದು ಸೃಷ್ಟಿಯ ನಿಯಮ.

ಉಗಮ ಶೂನ್ಯದಲ್ಲಿ ಆಗಿರಬಹುದು. ಅಸ್ತ ಅನಂತದಲ್ಲಿ ಆಗುತ್ತಿರಬಹುದು. ಎರಡೂ ಸ್ಥಾನಗಳು ಪವಿತ್ರವಾದವುಗಳೆಂಬ ಭಾವನೆ ಇದ್ದರೂ ಸಂಗಮಕ್ಕೆ ವಿಶೇಷ ಪಾವಿತ್ರ್ಯವನ್ನು ತಂದು ಪ್ರತಿಯೊಬ್ಬ ಮಾನವನ ಮನವನ್ನಾಕಡೆಗೆ ಎಳೆವಂತೆ ಕೂಡಲಸಂಗಮವನ್ನು ಬಸವಣ್ಣನವರು ಸುಮ್ಮನೇ ಆರಿಸಿರಲಾರರು. ಧಾರ್ಮಿಕ ಕ್ಷೇತ್ರಗಳಲ್ಲಿ "ತ್ರಿವೇಣಿ ಸಂಗಮ"ದ ಹೆಸರು ಎತ್ತುತ್ತಲೇ ಭಾವಜೀವಿ ಭಾರತೀಯನ ಹೃದಯವು ಪುಲಕಿತಗೊಳ್ಳುವದಿಲ್ಲವೇ ? ಅಲ್ಲಿ ಮೂರೂ ಹೊಳೆಗಳ ಹೆಸರನ್ನು ಎತ್ತಿ ಹೇಳಿದ್ದರಿಂದ ಆ ಹೆಸರು ತನ್ನಲ್ಲಿದ್ದ ಭಾವವಾಹಿತ್ವವನ್ನು ಕಳೆದು ಕೊಂಡಿರಬಹುದು. ಬಸವಣ್ಣನವರ "ಕೂಡಲಸಂಗಮ"ದಲ್ಲಿನ ಭಾವವಾಹಿತ್ವವನ್ನು ಜನತೆಯೇ ತಿಳಿಯಲಿ, ಅವರಲ್ಲಿ ಅಷ್ಟು ಜಾಣತನ ಬಂದಿದೆಯೆಂದುಕೊಂಡು ಸಾಮಾನ್ಯನ ಬಾಯಿಯಲ್ಲಿಯೂ ಆ ಶಬ್ದವನ್ನು ಕೊಟ್ಟರು. ಬಸವಣ್ಣನವರ ಪವಿತ್ರ ಜೀವನ, ಕನ್ನಡಿಗರೆಂದೆನಿಸಿಕೊಂಡವರ ಸಮಾಜಜೀವನ, ಇವೆರಡೂ ಹೊಳೆಗಳಿಗೆ ಮಾನವೀ ಜೀವನವೆಂಬ ಗುಪ್ತ ಹೊಳೆ ಕೂಡಿ ಕೂಡಲದಲ್ಲಿ ತ್ರಿವೇಣಿ ಸಂಗಮವಾಗಿದೆ. ಮೊದಲಿನವೆರಡರ ಕಲ್ಪನೆ ಬಂದರೂ ಗುಪ್ತಗಾಮಿಯ ಗುರುತು ಎಷ್ಟೋ ದಿನ ಸುಪ್ತವಾಗಿಯೇ ಉಳಿದಿರಬೇಕು. ಅದರ ಅರಿ

ವಾಗುತ್ತಲೇ ಒಂದು ಜನಾಂಗವನ್ನು ದಾಸ್ಯಕೂಪದಿಂದ ಎತ್ತಿಹಿಡಿದ ಭಾವವಾಣಿಯೇ ಲೋಕಕ್ಕೆಲ್ಲ ತನ್ನ ಸತ್ಯ ಸಂದೇಶವನ್ನು ಸಾರುವದಕ್ಕಾಗಿ ವಿಶ್ವವಾಣಿಯಾಗಿ ನಿಲ್ಲುವದರಲ್ಲಿ ಸಂಶಯವಿಲ್ಲ.

ರಸಮಯ ನವಸೃಷ್ಟಿಯನ್ನು ನಿರ್ಮಿಸಿದ ಬಸವಣ್ಣನವರು ತಮ್ಮಲ್ಲಿ ತಪ್ತವಾಗಿದ್ದರೂ ಗುಪ್ತವಾಗಿದ್ದ ಭಾವನೆಯನ್ನು ವ್ಯಕ್ತಪಡಿಸಲು ಯಾರಿಗೂ ತಿಳಿಯದಿದ್ದರೂ ಎಲ್ಲ ನನ್ನಲ್ಲಿದೆ ಎನ್ನುವ 'ನಿರ್ವಾಣಿ'ಯನ್ನಾರಿಸಿದ್ದರೇನು ? ಎಂದಿಗೂ ಇಲ್ಲ. ಮಾನವೀ ಮನದ ತಳಮಳದ ಉದ್ಗಾರವು ಸಹಜವಾಗಿಯೂ ಸುಂದರವಾಗಿಯೂ ಯಾವುದರಲ್ಲಾದರೂ ಪ್ರಕಟವಾಗುತ್ತಿದ್ದರೆ ಅದು ಬಹುಜನ ಸಮಾಜದ ಬಾಯಿಮಾತೆಂಬದನ್ನು ಅವರು ತಿಳಿದಿರಲಿಲ್ಲವೇ ? ಕೂಡಲ ಸಂಗಮದಲ್ಲಿ ಹೊಳೆಯಾಗಿ ಹರಿದ ವಚನಾಮೃತದ ಸಿಂಚನದಿಂದ ಕನ್ನಡ ಜನತೆಯನ್ನು ಅಮರರನ್ನಾಗಿಸುವದಕ್ಕಾಗಿ ಬಳಕೆಯಲ್ಲಿ ತಂದ ವಾಣಿ, ಕನ್ನಡವೆಂಬ ಅಮೃತವಾಣಿ. ಅದೇ ಹುಟ್ಟುಕಪು ಬಸವಣ್ಣನವರ ಭಾವವಾಣಿ. ಕನ್ನಡಿಗನ ದೇವವಾಣಿ.

ಭಾವವೇ ಅಭಾವವಾಗಿದ್ದ ಕನ್ನಡಿಗರು ಇಂದು ಆ ದೇವವಾಣಿಯ ದರ್ಶನಕ್ಕಾಗಿ ಆತುರಪಡುತ್ತಿರುವುದು ಸ್ವಾಭಾವಿಕವಾಗಿದೆ. ಮಾತ್ರ ಪರಿಸ್ಥಿತಿಯ ಪೀಡೆಯಿಂದ ಅಳಿಸದಂತೆ ಮೂಡಿನಿಂತ ಅನೇಕ ಮೂಢ ಕಲ್ಪನೆಗಳ ಪರಿಯನ್ನು ತರಿದೊಗೆದು ನಿಚ್ಚಳವಾದ ಕಣ್ಣುಗಳಿಂದ ಅದನ್ನು ಈವರೆಗೆ ಕಂಡವರು ಕೆಲವೇ ಜನರಿರಬಹುದು. ಸಾಹಿತ್ಯ, ಭಾಷೆ, ಲಿಪಿಗಳ ಕಲಸುಮೇಲೋಗರ ಮಾಡದೇ ಮನಃಪೂರ್ವಕವಾಗಿ ಪ್ರಯತ್ನಪಟ್ಟ ಯಾವನೂ ಅದರ ಸವಿಯನ್ನು ಸವಿಯಬಹುದಾಗಿದೆ. ಅದಕ್ಕಾಗಿ ಇಂದು ಇಲ್ಲದ ಅಭಿಮಾನವನ್ನು ಹುಟ್ಟಿಸುವ ಅಗತ್ಯವಿಲ್ಲ. ಸುಲಿದ ಬಾಳೆಯ ಹಣ್ಣಿನಂದದಿ ಇರುವ ಕನ್ನಡ ನುಡಿಯ ಹೆಮ್ಮೆಯಲ್ಲಿ ಸಂಸ್ಕೃತದೊಳಿನ್ನೇನು ? ಕೇಳುವದು ಆಗ ಅಗತ್ಯವಿರಬಹುದು. ಬಸವಣ್ಣನವರ ಕಾಲಕ್ಕೆ ದೇವವಾಣಿಯಾಗಿ ಮೆರೆಯುತ್ತಿದ್ದ ಸಂಸ್ಕೃತವು ಲಿಪಿಬದ್ಧವಾಗಿ ಅವರ ದೃಷ್ಟಿಯಲ್ಲಿ ಸುಸಂಸ್ಕೃತವೆನ್ನಿಸಿಕೊಂಡ ಪ್ರತಿಯೊಬ್ಬನ ಬಳಕೆಯ ಭಾಷೆಯಾಗಿತ್ತು. ಆದರೂ ಆ ಕಾಲಕ್ಕೆ ಇಡೀ ಸಮಾಜವನ್ನೇ ಪೂರ್ಣತ್ವಕೊಯ್ಯಬಲ್ಲ ಒಂದು ಭಾಷೆಯ ಪೂರ್ಣ ಲಾಭ ಪಡೆಯದೇ ಪ್ರತಿ ವ್ಯಕ್ತಿಯೂ ಸಮಾಜ ಜೀವನವೆಂಬ ಹಿರಿ

ದೊರೆಯಿಂದ ಟಿಸಿಲಾಗಿ ಒಡೆದು ತನ್ನ ವ್ಯಕ್ತಿ ಜೀವನದ ಕಿರಿದೊರೆಯಿಂದ ಮಾನವೀ ಜೀವನದ ಸಂಗಮದೊಂದಿಗೆ ಅನಂತದಲ್ಲಿ ಐಕ್ಯವಾಗಲೆತ್ನಿಸಿತು. ಸಮಾಜ ಜೀವನ ಪ್ರವಾಹವು ದಾರಿಗಾಣದೇ ಕೊರಕಲಿಗೆ ಬಿತ್ತು. ಒಂದು ಕನ್ನಡ ಹಿರಿಜೀವ ಸಾಹಸಪಟ್ಟು ಕೊರಕಲಿಗೆ ಬಿದ್ದ ಪ್ರವಾಹವನ್ನು ಸ್ವಾಭಾವಿಕವಾದ ರೀತಿಗೆಳೆಯಿತು. ಅದರಿಂದ ಇತಿಹಾಸದ ದಿಕ್ಕೇ ಬದಲಾಯಿತು. ಕನ್ನಡದ ನುಡಿಯಲ್ಲಿ ಗುಪ್ತವಾಗಿ ಹರಿಯುತ್ತಿದ್ದ ಮಾನವೀ ಜೀವನದ ಪರಿಚಯದಿಂದ ಜನಜೀವನದಲ್ಲಿ ಪ್ರಾಣವನ್ನು ತುಂಬಿ ಪರಿಪೂರ್ಣ ಜೀವನ ಸಾಗಿಸಲಣಿಮಾಡಿಕೊಟ್ಟ ಬಸವಣ್ಣನವರ ಸಾಹಸದ ಕೃತಿಯೇ ಆ ಇತಿಹಾಸದ ದಿಕ್ಕನ್ನು ಬದಲುಗೊಳಿಸಿದ್ದು. ಆಗ ಅಧಿಕಾರದಲ್ಲಿದ್ದ ಸಂಸ್ಕೃತದ ದ್ವೇಷ ಬಸವಣ್ಣನವರಿಗಿರಲಿಲ್ಲ. ಅದು ತಮಗೆ ಬರುತ್ತಿರಲಿಲ್ಲವಾಗಿ ಕನ್ನಡವನ್ನಾಶ್ರಯಿಸಬೇಕಾಯಿತೆಂಬ ಸ್ಥಿತಿಯೂ ಇರಲಿಲ್ಲ. ತಮ್ಮ ಅಂತರ್ಮನದ ನೋವನ್ನು ಸಮಾಜ ಜೀವನದ ನಾವಿನಲ್ಲಿ ತೇಲಿಬಿಟ್ಟಾಗ ಯಾವ ಭಾಷೆಯಲ್ಲಿ, ಯಾವ ವಾಣಿಯಲ್ಲಿ ಅದನ್ನು ವ್ಯಕ್ತಗೊಳಿಸಲು ಸಾಧ್ಯವೋ ಅದನ್ನವರು ಆರಿಸಿದರು. ಜಗತ್ತಿನಲ್ಲಿ ಈವರೆಗೆ ಮಹಾ ಆತ್ಮವನ್ನು ಪಡೆದವರು ಇದೇ ಕ್ರಮವನ್ನು ಅನುಸರಿಸಿದ್ದನ್ನು ಕಾಣಬಹುದು. ಆಯಾ ಕಾಲಕ್ಕೆ ಅವರು ಅನುಸರಿಸಿದ ರೀತಿಯೇ ಅವರಿಗೆ ಅನುವಾಗಿ ನಿಂತಿದೆ. ಬುದ್ಧನ ಕಾಲದ ಸಂಸ್ಕೃತ, ಕ್ರಿಸ್ತನಕಾಲದ ರೋಮನ್ ಭಾಷೆಗಳು ಪಾಲೀ ಹಿಬ್ರೂ ಭಾಷೆಗಳಿಗೆ ಅಡೆತಡೆಯನ್ನುಂಟುಮಾಡಲಿಲ್ಲ. ಅದರಂತೆಯೇ ಬಸವಣ್ಣನವರ ಕಾಲಕ್ಕೂ ಇದ್ದ ಸಂಸ್ಕೃತಭಾಷೆ, ಕನ್ನಡ ಭಾಷೆಗೆ ಸರಿಸಮ ನಿಲ್ಲಲಿಲ್ಲ. ಹೃದಯ ಅನುಭವಿಸುತ್ತಿದ್ದರೂ ಅದನ್ನು ಬಾಯಿ ಬಿಚ್ಚಿ ಹೇಳಲು ಅಸಮರ್ಥವಿದ್ದ ಸಮಾಜಕ್ಕೆ ಯಾರು ಅದನ್ನು ಯೋಗ್ಯ ಸಾಧನದ ಮುಖದಿಂದ ಮೂರ್ತಿಮಂತಾಗಿ ನಿಲ್ಲಿಸುವರೋ ಅವರ ಆ ಸಾಧನ, ಬಹುಜನ ಸಮಾಜದಲ್ಲಿ ಮನ್ನಣೆ ಪಡೆಯುವದು. ಒಳಗೊಳಗೆ ನೋವನ್ನನುಭವಿಸುತ್ತಿದ್ದರೂ ಬಾಯಿ ಇಲ್ಲದವರಂತಿದ್ದ ಕನ್ನಡಿಗರಿಗೆ ಅವರ ಬಾಯಿ ಮಾತಿನಲ್ಲಿಯೇ ಅವರ ನೋವಿನ ಪರಿಜ್ಞಾನ ಮಾಡಿಕೊಟ್ಟಾಗ ಕನ್ನಡಿಗರೆಲ್ಲರೂ ಬಸವಣ್ಣನವರ ಬೆನ್ನು ಬಿದ್ದರು. ಅದನ್ನರಿಯದೇ ಕನ್ನಡ ಭಾಷೆಯಿಂದ ಬಸವಣ್ಣನವರು ಕನ್ನಡಿಗರ ಉದ್ಧಾರ ಸಾಧಿಸಿದರು ಅಂದ ಮೇಲೆ ಇಂದಿಗೂ ಏಕೆ ಸಾಧಿಸಬಾರದು ? ಎಂದರೆ 'ಪರುಷ ಸ್ಪರ್ಶದಿಂದ ಬಂಗಾರವಾದ ಕಬ್ಬಿಣವು

ತಾನೇ ಎಲ್ಲವನ್ನೂ ಬಂಗಾರವನ್ನಾಗಿ ಮಾಡ ಹೊರಟಂತೆ, ನಿಷ್ಫಲತೆಯನ್ನೇ ಉಡಿಯಲ್ಲಿ ಕಟ್ಟಿಕೊಂಡು ಬರಬೇಕಾಗುವದು. ತನ್ನೊಬ್ಬನ ಹಿತವನ್ನು ಕನ್ನಡದಲ್ಲಿ ಹೇಳಿದ್ದೇನಾದ್ದರಿಂದ ಅದು ಎಲ್ಲ ಕನ್ನಡಿಗರ ಹಿತವೇಕಾಗ ಬಾರದು ? ಎಂದರಾದರೂ ಅಂದರೆ ಅದು ಶಕ್ಯಕೋಟಿಯೊಳಗಿನ ಮಾತೆ ? ಅನುಕೂಲ ಸ್ವರವಿಲ್ಲದೇ ಅನುಕೂಲ ಸಂವೇದನೆಗಳನ್ನು ಪಡೆಯಲು ಸಾಧ್ಯ ವಿಲ್ಲದಂತೆ ಒಂದು ಸುಮಾಜದ ಆಂತರಿಕ ವೇದನೆಯನ್ನು ಆ ಸಮಾಜವು ತಿಳಿದುಕೊಳ್ಳುವ ರೀತಿಯಲ್ಲಿಯೇ ಹೇಳಬೇಕಿರುತ್ತದೆ. ಬುದ್ಧನು ತನ್ನ ತತ್ವ ಪ್ರತಿಪಾದನೆಯನ್ನು ಪಾಲೀ ಭಾಷೆಯಲ್ಲಿ ಮಾಡದೇ ಅಧಿಕಾರಸಂಪನ್ನ ಸಂಸ್ಕೃತವಲ್ಲಿಯೇ ಮಾಡಿದ್ದರೆ ಇನ್ನೂ ಚನ್ನಾಗಿತ್ತು ಅನ್ನುವ ಸ್ವಾಮಿ ವಿವೇಕಾನಂದರಂತಹ ತತ್ವಜ್ಞರಿಗೂ ಕೂಡಾ ಅಧಿಕಾರದ ಮೋಹ ಆಕರ್ಷಕ ವೆನ್ನಿಸುವಾಗ ಸಾಮಾನ್ಯ ಭಾಷಾಭಿಜ್ಞರಿಗೆ, ಅಧಿಕಾರದಲ್ಲಿದ್ದ ಜನಾಂಗದ ವಿಚಾರಗಳನ್ನು ಕನ್ನಡಿಗರಿಗೆ ಕನ್ನಡದಲ್ಲಿ ತೋಡಬೇಕೆಂಬ ಅಭಿಲಾಷೆ ಬೆಳದಿ ದ್ದರೆ ಅಚ್ಚರಿಯಲ್ಲ. ಅದು ಅವಶ್ಯವೇ ? ಎನ್ನುವದೇ ಪ್ರಶ್ನೆ.

ಕನ್ನಡವು ಕೇವಲ ವ್ಯಾವಹಾರಿಕ ಸಂಜ್ಞಾಸ್ವರೂಪವಲ್ಲ. ಪಶು ಪಕ್ಷಿ ಗಳು ತಮ್ಮ ಬೇಕು ಬೇಡಗಳನ್ನು ವ್ಯಕ್ತಗೊಳಿಸುವ ವಿವಿಧ ರೀತಿಯ ಧ್ವನಿ ರೂಪವಲ್ಲ. ಅದರಲ್ಲಿ ಮಾನವನ ಅಮೂರ್ತ ಆದರ್ಶದ ಎಳೆತದೊಂದಿಗೆ ಪ್ರಗತಿ ಸಾಧಿಸುವದಕ್ಕಾಗಿ ಬೇಕಾಗುವ ಜ್ಞಾನ ಭಾಂಡಾರವನ್ನು ತುಂಬಿ ಕೊಂಡಿರಬಹುದಾದ ಸಾಮರ್ಥ್ಯವಿದೆ. ಅದನ್ನು ಜಗತ್ತಿಗೆ ಬಸವಣ್ಣನವರು ತೋರಿಸಿಕೊಟ್ಟರು. ಗುಣವನ್ನು ಪೂಜಾಸ್ಥಾನದಲ್ಲಿಟ್ಟು 'ನಚ ಲಿಂಗಂ, ನಚ ವಯಃ' ಅನ್ನುವ ಕಾಲದಲ್ಲಿಯೇ ಸುಗುಣವುಳ್ಳ ಕನ್ನಡವನ್ನು ಜನಾ ದರಕ್ಕೆ ಪಾತ್ರಗೊಳಿಸಿದರು. ಗುಣಕ್ಕೆ ಮನ್ನಣೆ ಇದೆ ಎಂದರೆ, ಮನ್ನಣೆ ಯನ್ನು ಮೊದಲು ಬಲುಮೆಯಿಂದಾದರೂ ಪಡೆದು ಅದರೊಂದಿಗೆ ಗುಣವೂ ಇದೆಯಾಗಿ ಒಪ್ಪುವಂತೆ ಒತ್ತಾಯ ಮಾಡುವ ತಿರುವುಮುರುವು ಕಾಲದಲ್ಲಿ ಕನ್ನಡವು ಕಳೆಗುಂದಿದ್ದರೆ ಅದು ಕಾಲದ ಗುಣ. ಒಂದು ಕಾಲಕ್ಕೆ ದೇವ ವಾಣಿಯಾಗಿ ಮೆರೆದ ಕನ್ನಡನುಡಿ ಕಾಲಕ್ಕೆ ತಕ್ಕ ಮಾರ್ಪಾಟು ಮಾಡಿ ಕೊಳ್ಳದ್ದರಿಂದಲೇ ಇಂದು ಕನ್ನಡಗಲ್ಲಿ ಎಲ್ಲ, ಇಲ್ಲವೆನ್ನುವ ಮಾತು ಕೆಲ ಮಟ್ಟಿಗೆ ನಿಜವಿರಬಹುದು. ಮಾತ್ರ ಇಂದು ಕನ್ನಡದಲ್ಲಿ ಎಲ್ಲ ಇಲ್ಲವೆನ್ನುವದು

ಎಷ್ಟು ನಿಜವೋ ಒಳ್ಳೆಯುದು ಮಾತ್ರ ಇದೆ ಎಂಬುದೂ ಅಷ್ಟೇ ನಿಜವಿರುತ್ತದೆ.
ಈ ಒಳ್ಳೆಯ ಸಾಧನದಿಂದಲೇ ಕನ್ನಡ ಕುಲ ಒಳ್ಳೆಯುದನ್ನು ಪಡೆಯಲೆಂಬ
ಬಸವಣ್ಣನವರ ಹಂಬಲವಿತ್ತೆಂದೇ ಒಳಿತನ್ನು ವರ್ಧಿಸಲಿಕ್ಕೆ ಒಳ್ಳೆಯ ಕನ್ನಡ
ದಲ್ಲಿ ವಚನಾಮೃತವನ್ನು ಸುರಿದರು.

ವಚನ ವಾಙ್ಮಯವು ಬರುವ ಪೂರ್ವ ಕನ್ನಡವು ಅಸ್ತಿತ್ವದಲ್ಲಿರಲಿಲ್ಲ
ವೇನು? ಇತ್ತು. ಆದರೆ ಅಸ್ತಿತ್ವವಿತ್ತಲ್ಲದೇ ಸ್ಥಿರಪಟ್ಟ ಪಡೆದಿರಲಿಲ್ಲ.
ವೇನ ವಾಙ್ಮಯದ ಪೂರ್ವ ಸಂಸ್ಕೃತವು ಅಸ್ತಿತ್ವದಲ್ಲಿದ್ದಂತೆ ಬಸವಣ್ಣನವರ
ವಚನ ವಾಙ್ಮಯದ ಪೂರ್ವದ ಕನ್ನಡವಿತ್ತೆಂದು ಹೇಳಬಹುದು. ವಾಙ್ಮಯ,
ಸಾಹಿತ್ಯದರೂಪ ಕನ್ನಡಕ್ಕೆ ಬಂದು ಅದು ಸ್ವಪ್ರಕಾಶವನ್ನು ಬೀರಹತ್ತಿದುದು
ಬಸವಣ್ಣನವರಿಂದ ಇತ್ತೀಚೆಗೇನೆ ಎಂಬುದು ನಿಸ್ಸಂಶಯ. ಮಾನವೀ ಮನದ
ಆರ್ತ ಆಕ್ರಂದನವನ್ನೇ ಶಬ್ದಬದ್ಧಗೊಳಿಸಿದ ವಾಙ್ಮಯವನ್ನು ಅವರು ಜನ
ತೆಗೆ ನೀಡಿದರು. ಅದನ್ನೆ ಮುಂದಿನವರು ಅನುಕೂಲತೆಯೊದಗಿದಂತೆ ಲಿಪಿ
ಬದ್ಧಗೊಳಿಸಿಕೊಂಡರು. ತಮಗಾಗಿ ಇದ್ದದ್ದದನ್ನೇ ಮುಂದಿನವರಿಗೂ
ಕಾಯ್ದಿಡಲೆತ್ನಿಸಿದರು. ಆಗ ಸಿರಿವಂತಿಕೆ ಹೆಚ್ಚಿತ್ತೇನೋ! ಕನ್ನಡ
ಲಿಪಿಯು ತನ್ನ ನೈಸರ್ಗಿಕ ಸೌಂದರ್ಯವನ್ನು ಬೆಡಗು ಬೆಡಗಿನ ವಸ್ತ್ರಾಭರ
ಣಗಳಿಂದ ಹೆಚ್ಚಾಗಿ ಸಿಂಗರಿಸಿಕೊಂಡಿದೆ. ಇಂದಿನ ಯುಗದಲ್ಲಿ ಸ್ವಾಭಾವಿ
ಕತೆಗೆ ಹೆಚ್ಚು ಪ್ರಾಧಾನ್ಯವಿದ್ದರೆ ಆ ಆಭರಣಗಳನ್ನು ಕಳಚಿಟ್ಟರೂ ಕನ್ನ
ಡದ ಸೌಂದರ್ಯಕ್ಕೇನೂ ಕೊರತೆ ಬಾರದು. ಅದೇ ಕ್ರಮತಪ್ಪಿದರೆ ಎಲ್ಲವೂ
ತಿರುವುಮುರುವಾಗಬಹುದು. ವಿಚಾರದ ವಾಹನ ಭಾಷೆ, ಭಾಷೆಯ ದೇಹ
ಲಿಪಿ—ಅನ್ನುವ ಕ್ರಮತಪ್ಪಿ ಆಭರಣಗಳನ್ನು ಕಡಿಮೆ ಮಾಡುವ ನೆವದಿಂದ
ಕನ್ನಡ ಲಿಪಿ ವಾಹನವನ್ನು ಅದು ಅರಿಯದ ವಿಚಾರವು ಆರೋಹಿಸಿದರೆ,
ಕನ್ನಡವು ತನ್ನ ರೂಪಾಂತರದೊಂದಿಗೆ ದೇಹಾಂತರವನ್ನೂ ಮಾಡಬಹುದು.
ಯಾವುದೋ ಕಾರಣದಿಂದ ಒಳ್ಳೆಯುದೆಂದು ಹೆಸರು ಪಡೆದ ವಿಚಾರವನ್ನು
ಕೈಗಡ ತಂದು ಕನ್ನಡ ವಾಹನವನ್ನೇರಿಸುವ ಆಲಸ್ಯ ಮನೋವೃತ್ತಿಯು—
ಆಗಿನಕ್ಕಾಲಕ್ಕಿದ್ದಿತೋ ಇಲ್ಲವೋ—ಈಗಂತೂ ಕನ್ನಡ ನಾಡಿನಲ್ಲಿ ಸಜೀವವಾ
ಗಿದೆ. ಕನ್ನಡಿಗರ ಬಾಯಿ ಮಾತು ಶುದ್ಧವಿಲ್ಲ. (?) ದಿವ್ಯ ವಿಚಾರ
ಗಳನ್ನು ವ್ಯಕ್ತಗೊಳಿಸುವ ಶಕ್ತಿ ಅದರಲ್ಲಿ ಸಾಕಷ್ಟಿಲ್ಲವೆನ್ನುತ್ತ ಇನ್ನೊಂದು

ಭಾಷೆಯಿಂದ ಶಬ್ದಗಳನ್ನು, ವಿಚಾರಗಳನ್ನು ಎರವಲು ತಂದರೆ ಕೇಡಿಲ್ಲವೆನ್ನುವರು ಮೂಲವನ್ನೆ ಮರೆಯುವ ಸಂಭವ ಹೆಚ್ಚು. ನಿತ್ಯ ವ್ಯವಹಾರಗಳಿಗುಪಯೋಗವಾದುತ್ತಿದ್ದ ಶಬ್ದಭಾಂಡಾರಕ್ಕೆ ವಾಙ್ಮಯ ಪದವಿಯು ಪ್ರಾಪ್ತವಾಗಲಾರದೆಂಬದು ನಿಜವಿದ್ದರೂ, ಪ್ರತಿಭಾವಂತ ಕವಿಯ ಮುಖದಿಂದ ಅವೇ ಶಬ್ದಗಳಿಗೆ ಭಾವನೆಯ ವಿಲಾಸ, ರಚನೆಯ ಅಪೂರ್ವತೆಯ ಜೋಡು ಸಿಕ್ಕಾಗ ಅದೇ ಲಲಿತ ವಾಙ್ಮಯವಾಗಿ ಜನಮನವನ್ನು ತಣಿಸುವ ಸಾಧನವಾಗುತ್ತದೆಂಬದು ಸುಳ್ಳಲ್ಲ. ಆ ಸಾಧನದಲ್ಲಿ ಅದರ ನಿರ್ಮಾಣಕ ಕವಿಗೆ ಜನ್ಮವಿತ್ತ ದೇಶದ ಜನಾಂಗಗಳ ಸುಖ, ದುಃಖ, ಆಶೆ, ಆಕಾಂಕ್ಷೆ, ಹರ್ಷ, ಶೋಕ, ಆವೇಶ, ಉತ್ಸಾಹ ಮೊದಲಾದ ಅಂತಃಕರಣದಲ್ಲಿಯ ಭಾವನೆಗಳು ತಾವೇ ತಾವಾಗಿ ತುಂಬಿಕೊಂಡಿರುತ್ತವೆಯಲ್ಲದೆ ಅನ್ಯರದೇನೂ ಇರುವದಿಲ್ಲ. ಈ ಬಗೆಯ ಭಾವನಾಮಯಜೀವನದ ಕಲಾತ್ಮಕ ಶಬ್ದ ಸೃಷ್ಟಿಯೇ ಲಲಿತ ಸಾಹಿತ್ಯ. ಕೇವಲ ಕಲಾತ್ಮಕ ಶಬ್ದ ಸೃಷ್ಟಿ ಮಾತ್ರ ಕಾವ್ಯವಾಗುತ್ತಿದ್ದರೆ ಕವಿಯೇ ಆಗಿ ಹುಟ್ಟುವ ಅಗತ್ಯವಿರುತ್ತಿರಲಿಲ್ಲ. ಕಾವ್ಯದಲ್ಲಿ ರಚನೆಗೊಂಡ ಶಬ್ದಗಳ ಉತ್ಪತ್ತಿಯಲ್ಲಿ, ತಮ್ಮ ಬಾಯಿಮಾತಿನಲ್ಲಿ ಆ ಶಬ್ದಗಳನ್ನಿಟ್ಟುಕೊಂಡ ಜನಾಂಗದ ಭಾವನೆಯು ಬೇರು ಇರುತ್ತದೆ. ಬಸವಣ್ಣನವರ ವಚನಗಳಲ್ಲಿ ಚತುರತೆಯಿಂದ ಜೋಡಣೆಗೊಂಡಂತೆ ಕಾಣುವ 'ತುಂಬಿ' ಶಬ್ದವನ್ನೇ ತೆಗೆದು ಕೊಳ್ಳೋಣ. ಅದರಲ್ಲಿ ಕನ್ನಡಿಗರ ವಿಚಾರ, ರಸಿಕತೆ ಹೇಗೆ ಹೇಗೆ ಕೂಡಿಕೊಂಡಿದೆ ತಿಳಿದು ಬರುವದು. ಪುಷ್ಪಗಳಲ್ಲಿ ಮಧು ಅಂಚುಮುಟ್ಟ ಬಂದಾಗ ತುಂಬಿ ಬಂತೆನ್ನುವರು. ಅದನ್ನೀಂಟಲು ಗುಂಯಿಗುಡುತ್ತ ಬರುವದಕ್ಕೂ ತುಂಬಿ ಎಂದೇ ಕರೆಯುವರು. ಭ್ರಮರವೆಂದು ಹೇಳಿದರೆ ರಸಿಕ ಕನ್ನಡಿಗ ಅದನ್ನು ಗುರುತಿಸಲಾರ. ಒಬ್ಬನ ಪ್ರಾಣ ಹರಣವಾಗುವ ವೇಳೆಗೆ ಅವನದು ತುಂಬಿ ಬಂದಿತ್ತೆಂದೇ ಹೇಳಿಯಾನಲ್ಲದೇ 'ಮರಣ'ವೆಂಬ ಕಟುಶಬ್ದ ನುಡಿಯಲಾರ. ಒಬ್ಬನ ಕೈಲಿ ಪಾಪಾಗುವ ಮಾತು ಬಂದಾಗ ಹೊಳೆಯನ್ನು ಪಾರುಮಾಡುವದರ ಸೂಚಕತೆ ಇರುವದನ್ನು ಕಾಣಬಹುದು. ಶರಣ, ಶಬ್ದ ಸುಮ್ಮನೆ ಬಂದಿದೆಯೇ? ಎಷ್ಟು ಜನ ತ್ಯಾಗಿಗಳ ತಪಸ್ಸು 'ಶರಣ ಶಬ್ದಕ್ಕೆ ಮೆರಗನಿತ್ತಿದೆ? ಲೆಕ್ಕ ಉಂಟೇ? ಯಾವ ಇನ್ನೊಂದು ಶಬ್ದದಿಂದ ಆ ಶಬ್ದದ ಭಾವ ನಮ್ಮ ಮನಮುಟ್ಟಬಲ್ಲದು? ವಚನಗಳಲ್ಲಿನ ಒಂದೊಂದು ಶಬ್ದಗಳ ಉತ್ಪತ್ತಿಯಲ್ಲಿ ಕನ್ನಡಿಗನ ಜೀವನವೇ ಜೀಕುತ್ತಿದೆ.

ಬಸವಣ್ಣನವರ ವಚನ ಸಂಗ್ರಹದೊಳಗಿನ ಯಾವುದೊಂದನ್ನೇ ಓದಿದರೂ ಕ್ರಮತಪ್ಪಿ ಬಂದಂತೆನ್ನಿಸದೆ ಮಾನವ ಜೀವನದ ಒಂದು ಭಾಗದ ಸಂಪೂರ್ಣ ಚಿತ್ರವೇ ನಮ್ಮೆದುರು ನಿಲ್ಲುವದು. ಅತಿಯಾಗಿ ಪೀಡೆಕೊಡುವ ತೊಡಕುಗಳನ್ನು ಮಿತವಾದ ಶಬ್ದಗಳಲ್ಲಿ ಹಿತವಾಗಿ ಹೇಳುವ ಮಾತೆಯ ನುಡಿಯಂತೆ ಬಸವಣ್ಣನವರ ನುಡಿ ಗಡಣವಿರುವದರಿಂದಲೇ ಅವರ ಭಾಷೆಗೆ ಕನ್ನಡಿಗರ ಮಾತೃಭಾಷೆ ಎಂಬ ಹೆಸರು ಬಿದ್ದಿರಬೇಕಲ್ಲವೇ ?

ಸ-ಹಿತವಾದ ವಚನ ಸಾಹಿತ್ಯದಲ್ಲಿ ಸಂಸ್ಕೃತದಂತೆ ಶುದ್ಧ ಸಾಹಿತ್ಯ ನಿರ್ಮಾಣಕ್ಕವಶ್ಯವಾದ ವ್ಯಾಕರಣ, ಸಾಹಿತ್ಯ ಶಾಸ್ತ್ರಗಳು ಬೆಳೆದು ಬಂದಿರದಿದ್ದರೆ ಸಂಸ್ಕೃತಿಯ ಸದ್ಧೇತುವಿನ ಬಗ್ಗೆ ಅಜ್ಞಾನ ಮೂಲಕವಾಗಿ ಬಂದ ತುಚ್ಛತೆಯೇ ಕಾರಣವಾಗಿರಬೇಕು. ಸಂಸ್ಕೃತದ ಸಂಸ್ಕೃತಿಗೂ, ಕನ್ನಡದ ಸಂಸ್ಕೃತಿಗೂ ಸರಿತೂಕ ನೋಡುವ ದೃಷ್ಟಿಗೂ ಇದೇ ಕಾರಣ ಹೇಳಬಹುದು. ಯಾವುದೊಂದು ರಾಷ್ಟ್ರದೊಳಗಿನ ಸಂಸ್ಕೃತಿಯು ಅದರ ಭಾಷೆಯ ವ್ಯಾಕರಣದಿಂದಾಗಲೀ, ನಿಷ್ಕ್ರಿಯ ಸಾಹಿತ್ಯದಿಂದಾಗಲಿ ನಿರ್ಮಾಣವಾಗುತ್ತಿರುವದಿಲ್ಲ. ರಾಷ್ಟ್ರದೊಳಗಿನ ಶರಣರ, ಪುರೋಗಾಮಿ ಪಂಡಿತರ ವಿಚಾರ ಹಾಗೂ ಅವರು ನಿಶ್ಚಯಿಸಿದ ಧ್ಯೇಯ, ಅದರ ಸಾಧನೆಗಳಿಗನುಸರಿಸಿ ಜನತೆಯಿಂದಾದ ಅಚಾರದಿಂದಲೇ ಆ ರಾಷ್ಟ್ರದ ಸಂಸ್ಕೃತಿ ನಿರ್ಮಾಣವಾಗುತ್ತಿರುತ್ತದೆ. ದೇಶವು ಸೌಖ್ಯದ ನೆಲೆವೀಡಾಗುವಂತೆ ಮಾಡಿದ ಸಮಾಜದಲ್ಲಿನ ಸದ್ಗುಣಗಳನ್ನು ತಿಳಿದುಕೊಂಡು ಅವುಗಳನ್ನು ಸ್ಥಿರವಾಗಿ ಕಾಯ್ದುಕೊಳ್ಳುವದು ಅದರ ಮುಂದಿನ ಪೀಳಿಗೆಯ ಕೆಲಸ. ಅದನ್ನವರು ಮಾಡದೇಹೋದರೆ ಯಾವ ಕಾಲಕ್ಕೂ ಉನ್ನತಿ ಸಾಧಿಸದು. ಧ್ಯೇಯ ಶೂನ್ಯ ಶಿಕ್ಷಣ, ಹೊಟ್ಟೆಗಾಗಿ ಗುಲಾಮ ವೃತ್ತಿ, ಅಕಾಲದಲ್ಲಿ ಏನೂ ಮಾಡದೇ ಮರಣ—ಇಂತಹ ದುಸ್ಥಿತಿಯು ಇಂದಿನ ತರುಣರಿಗೆ ಕಟ್ಟಿಟ್ಟಿಲ್ಲವೇ ? ಅದು ನಮ್ಮ ಶರಣರ ಋಣ ತೀರಿಸದ ಪರಿಣಾಮ. ಆದಕ್ಕೆ ಯಾವ ಭಾಷೆ ಏನು ಮಾಡೀತು ?

ಹೃದಯಕ್ಕೆ ಅಭಿಜಾತ್ಯಾ ಅರ್ಪಣ ಮಾಡಬೇಕಾದ ಸಾಹಿತ್ಯ, ಉಚ್ಚ ಸಾಹಿತ್ಯ ಸಂಸ್ಕೃತದಲ್ಲಿಯೂ ಒಮ್ಮೆಲೆ ಉದ್ಭವಿಸಲಿಲ್ಲ. ಶಬ್ದ ಬದ್ಧಗೊಂಡ ಭಾವವಾಣಿಯನ್ನು, ಬಾಯಿಂದ ಬಾಯಿಗೆಕೊಡುತ್ತ ತಲೆತಲಾಂತರಗಳವರೆಗೆ ಕಾಯುವ ಕಾಲ ಬಂದಾಗ ಮೂಲದಲ್ಲಿ ವ್ಯತ್ಯಾಸವಾದೀತೆಂದು ವೇದ-

ಉಚ್ಚಾರ ಶಾಸ್ತ್ರನಿರ್ಮಾಣವಾಯಿತು. ಅದರ ಅಧ್ಯಯನ ಚೆನ್ನಾಗಿ ನಡೆಯಲೆಂದು, ಅಧ್ಯಯನ ಶಾಸ್ತ್ರ ಹುಟ್ಟಿತು. ಹೀಗೆಯೇ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತಂ, ಛಂದೋ, ಜ್ಯೋತಿಷಂ ಎಂಬ ಆರು ಅಂಗಗಳು ನಿರ್ಮಿತವಾದವು. ವೇದಗಳಿಂದ ನಿರ್ಮಾಣವಾದ ಈ ಶಾಸ್ತ್ರಗಳ ಆಧಾರದಿಂದಲೇ ಸಂಸ್ಕೃತ ಸಾಹಿತ್ಯ ವಿವಿಧಾಂಗಗಳಿಂದ ಪುಷ್ಟವಾಗಿ ಬೆಳೆದದ್ದು. ಲಿಪಿಬದ್ಧಗೊಳಿಸುವ ಸಾಧನ ಸಲಕರಣೆಗಳು ಹೆಚ್ಚೆಚ್ಚಾಗಿ ಶಿಕ್ಕಂತೆ ಇನ್ನಷ್ಟು ಜೋರಿನಿಂದ ಅದು ಬೆಳೆದರೂ ಇಡೀ ರಾಷ್ಟ್ರವೇ ಅಂಧಃಕಾರದಲ್ಲಿ ಮುಳುಗಿದ್ದರಿಂದ ಅದು ಇಂದು ಸತ್ತ ಭಾಷೆಯಾಗಿದೆ. ಆದರೆ ಕನ್ನಡದ ಸ್ಥಿತಿ ಹಾಗಿಲ್ಲ. ಯಾವ ಆದರ್ಶಕ್ಕಾಗಿ ಕರ್ನಾಟಕವು ಬಸವಣ್ಣನವರ ನೇತೃತ್ವದಲ್ಲಿ ಅನನ್ವಿತವಾದ ಆತ್ಮಕ್ಲೇಶನವನ್ನು ನಡಿಸಿತೋ, ಅದೇ ಆದರ್ಶಕ್ಕಾಗಿ ಇಂದು ಇಡೀ ಪ್ರಪಂಚವೇ ಬಾಯಿಬಿಡುತ್ತಿದೆ. ವರ್ಗವಿರಹಿತ, ಅಹಿಂಸಾತ್ಮಕ ಸಮಾಜ ರಚನೆಯು ಸಮೀಪಕ್ಕೆ ಬಂದಿದ್ದರೂ ರಾಷ್ಟ್ರವಾದದ ಸ್ವಾರ್ಥಭಾವನೆಗೆ ಬಲಿಯಾದ್ದರಿಂದ ಅಂದು ಅದು ಸಾಧಿಸದೇ ಹೋಗಿರಬಹುದು. ಅಂದಿನ ಪ್ರಯತ್ನದಲ್ಲಡಗಿದ ಓಜಸ್ಸಿನಿಂದ, ತೇಜಸ್ಸಿನಿಂದ ಇಂದು ಆ ಆದರ್ಶಕ್ಕೆ ನಿಲುಕಬಹುದಾಗಿದೆ. ಕಾಲಚಕ್ರದಲ್ಲಿ ಸಿಕ್ಕು ಪರದಾಸ್ಯದ ಉರುಬೆಯಲ್ಲಿ ಬೆಂದಿದ್ದರೂ ವಚನವಾಙ್ಮಯದ ತಿಳಿಗೊಳಲಲ್ಲಿ ಮಿಂದು, ಸಾಹಿತ್ಯೋದ್ಯಾನದ ಪಕ್ವ ಫಲಗಳ ತಿಂದು, ನವಚೇತನ ಪಡೆಯಬಹುದಾಗಿದೆ. ಸಮಾಜದಲ್ಲಿನ ವಿಕಾರಗಳನ್ನೂ ಕೂಡ ವಿವೇಕದಿಂದ ಚಿತ್ರಿಸಿದ ವಚನವಾಙ್ಮಯವನ್ನು ಯಾವುದೋ ವ್ಯಾಕರಣಕ್ಕೆ ಯಾಕೆ ಒರೆಹಚ್ಚಬೇಕು ? ವ್ಯಾಕರಣವೆಂದರಾದರೂ ಏನು ? ಪಾಣಿನಿಯು ಕೂಡ ಜನ ಸಾಮಾನ್ಯರು ಮಾತನಾಡುವ ಭಾಷೆಯೇ ವ್ಯಾಕರಣವೆಂದು ಹೇಳಿಲ್ಲವೇ ? ಹಲಗೆ ಬಳಪಗಳನ್ನು ಹಿಡಿಯದ ಅಗ್ಗಳಿಕೆಯ ಪ್ರಶಸ್ತಿಗಾಗಿ ಬಸವಣ್ಣನವರು ತಮ್ಮ ಉಸಿರನ್ನು ಕಳೆದುಕೊಳ್ಳಲಿಲ್ಲ. ಕನ್ನಡಿಗನು ಎಚ್ಚತ್ತು ಸರ್ವರ ಅವಿರೋಧದಿಂದ, ಸಹಕಾರದಿಂದ, ಸೇವಾಭಾವದಿಂದ ಸ್ವಾವಲಂಬನೆಯಿಂದ, ಸ್ವಾತಂತ್ರ್ಯದಿಂದ ಜೀವಿಸಲಿ ಎಂದು ಕಳವಳ ಪಟ್ಟರು. ಆಗ ಆ ಕಳವಳದಿಂದಾದ ಪರಿಣಾಮ ಪ್ರತಿಯೊಬ್ಬನಲ್ಲಿಯೂ ಸ್ಥಿರವಾಗಿ ನಿಲ್ಲದಿದ್ದರೂ, ಸ್ಥಿರವಾಗಿ ನಿಲ್ಲಬಲ್ಲ ಪರಿಣಾಮವನ್ನು ಮಾಡುವ ಶಕ್ತಿಯನ್ನು ಈ ವರೆಗೂ ಅಬಾಧಿತವಾಗಿ ಕಾಯ್ದುಕೊಂಡಿದೆ ವಚನ ವಾಙ್ಮಯ. ಸಮೃದ್ಧಿಯಲ್ಲಿ ಸ್ಥಿರತೆಯನ್ನು ಕಾಯ್ದುಕೊಂಡ

ಬಸವಣ್ಣನವರ ಭಾವವಾಣಿಯು ಪ್ರಚೋದನೆಯಿಂದ ಪ್ರಸನ್ನಚಿತ್ತಪಡೆದು ಸ್ವಹಿತ, ಸ್ವಕೀಯಹಿತ, ಸ್ವರಾಜ್ಯಹಿತವನ್ನು ಸಾಧಿಸಿ ತೋರಿಸೋಣ. ಬಸವಣ್ಣನವರು ದೂರಿಲ್ಲ. ಮೊದಮೊದಲು ಬಸವಣ್ಣನವರು ಕರ್ನಾಟಕವನ್ನು ಬಿಟ್ಟಿರಲಿಕ್ಕಿಲ್ಲ. ಅನಂತರ ಕರ್ನಾಟಕವೇ ಬಸವಣ್ಣನವರನ್ನು ಬಿಟ್ಟಿರಲಿಕ್ಕಿಲ್ಲ. ಇಂದು ಒಬ್ಬರನ್ನೊಬ್ಬರು ಬಿಡುವಂತಿಲ್ಲ. ಅವರು ಕರ್ನಾಟಕದ ಹೃದಯ ಬಿಟ್ಟು ಹೊರಗಿಲ್ಲ. ಬಸವಣ್ಣನವರನ್ನು ಬಿಟ್ಟು ಕರ್ನಾಟಕ ಹೊರಗಿಲ್ಲ. ಅವರ ಭಾವವಾಣಿಯ ಗುಂಜಾರವವು ಕನ್ನಡಿಗನ ಕಿವಿಯಲ್ಲಿ ಸದಾ ತುಂಬಿರಲಿ. ಅದರ ಪ್ರಭಾವ ಸಣ್ಣದಿಲ್ಲ ಅದನ್ನು ಇನ್ನಾವುದರ ಆಧಾರಕ್ಕಿಂತ ಕನ್ನಡದ ಕರ್ಮವೀರ ದಿವಾಕರರ ಭಾವ, ವಿಚಾರ, ಶೈಲಿ, ಪ್ರತಿಭೆಗಳು ಮುಪ್ಪುರಿಗೊಂಡು ಹರಿದ, ಒಂದೆರಡು ವಾಕ್ಯಗಳಲ್ಲಿಯೇ ಕಂಡು ಕೃತಾರ್ಥರಾಗಬಹುದು. "ವಚನಕಾರರು ಈ ಯಾವ ಸರಸ, ಸಬಲ, ಸುಲಭ, ಸರಲ ಸಾಧನೆವನ್ನು ಕೆಡುಕನ್ನು ಕೊಲ್ಲಲಿಕ್ಕೆ ದುರ್ಜನರನ್ನು ಜರಿಯಲಿಕ್ಕೆ ಶಲ್ಯದಂತೆ, ಸಿಡಿಲಂತೆ, ಬಾಣದಂತೆ ಬರ್ಚಿಯಂತೆ ಎಸೆದಿರುವರು. ಒಳಿತನ್ನು ವರ್ಧಿಸಲಿಕ್ಕೆ ಗುಣವನ್ನು ಬೆಳೆಸಲಿಕ್ಕೆ ನಿರ್ಮಲ ನಿರ್ಝರದಂತೆ, ನೀರ ತೊರೆಯಂತೆ, ಮಳೆಯ ಕರೆಯಂತೆ ಅವರು ಅದನ್ನು ಉಪಯೋಗಿಸಿರುವರು ಅಮೃತಾನುಭವದ ಧನ್ಯತೆಯನ್ನು ವರ್ಣಿಸುವಾಗ ಅವರ ವಚನಗಳು ಬಂಡುಂಡ ತುಂಬಿಯ ಝೇಂಕಾರದಂತೆ, ವಸಂತದ ಕೋಗಿಲೆಯ ಕುಕಿಲಿನಂತೆ ಕಂಗೊಳಿಸುವವು. ಭಕ್ತನ ಅಂತರ್ಯದಲ್ಲಿ ಉಕ್ಕುವ ಭಾವಲಹರಿಗಳನ್ನು ಸುರುವಾಗ ವಚನಗಳಿಗೆ ಮುನ್ನೀರ ಅಲೆಗಳಂತೆ, ವಿರಹಿಣಿಯ ಗದ್ಗದಿತ ಉಲಿವಿನಂತೆ, ವೀಣೆಯ ಮಧುರ ಸ್ವರದಂತೆ ಅವರು ರೂಪ ಕೊಟ್ಟಿರುವರು. ಧರ್ಮ ಮಾರ್ಗವನ್ನು ತೋರಿಸಲಿಕ್ಕೆ ಹೊಡೆಮಿಂಚಿನಂತೆ, ನಿರ್ಮಲ ಜ್ಯೋತಿಯಂತೆ ಆ ವಚನಗಳ ಉಪಯೋಗವನ್ನು ಅವರು ಮಾಡಿರುವರು."

೬

# ಅಕ್ಕನ ಅಣ್ಣ

ಮಾನವನ ಜೀವನದ ಹೋರಾಟ ಒಳ್ಳೇ ತೀವ್ರಸ್ವರೂಪದಲ್ಲಿದ್ದಾಗಿನಿಂದ, ಪರಸ್ಪರ ಸಹಕಾರದಿಂದ ಆ ತೀವ್ರತೆಯನ್ನು ಕಡಿಮೆ ಮಾಡುವದಕ್ಕಾಗಿ ಗುಂಪಾದ ವ್ಯಕ್ತಿಗಳ ಸಮೂಹವೇ ಕುಟುಂಬ. ಈ ಕುಟುಂಬ ಸಂಸ್ಥೆಯಲ್ಲಿ ಬೆಳೆದು ಬಂದ ಮಧುರ ಭಾವನೆಗಳು ಸೂಕ್ಷ್ಮ ತಂತುಗಳು ಕುಟುಂಬದಲ್ಲಿನ ಪ್ರತಿಯೊಂದು ಘಟಕವನ್ನೂ ಸಹಜವಾಗಿ ಸುತ್ತುವರಿದಿವೆ. ಚದುರಿ ನಿಂತಂತಿದ್ದ ವ್ಯಕ್ತಿಗಳನ್ನು ಅತಿ ಪ್ರಾಚೀನ ಕಾಲದಿಂದಲೂ ಒಂದೊಂದು ರೀತಿಯಲ್ಲಿ ಆಕರ್ಷಣೆಗಳನ್ನೊಡ್ಡುತ್ತ ಒಂದುಗೂಡಿಸಿ ಹಿಡಿದಿವೆ ಆ ತಂತುಗಳು. ಎಷ್ಟೋ ಸಾವಿರ ವರುಷ ವಿಷಮತೆ ಸೇರದೆ ಬೆಳೆದು ಬಂದ ಮಾನವೀ ಸಂಸ್ಥೆಗಳಲ್ಲಿ ಕುಟುಂಬ ಸಂಸ್ಥೆ ಹಿರಿಯದು. ಮಾತ್ರ ಇದಕ್ಕೆ ವಿಷಮತೆಯ ಗಾಳಿ ಬಡಿಯದೇ ಉಳಿಯಲಿಲ್ಲ. ಕುಟುಂಬದಲ್ಲಿನ ಹೆಣ್ಣು, ಗಂಡು ಎಂಬ ಸ್ವಾಭಾವಿಕವಾದ ಭೇದದಲ್ಲಿಯೇ, ಶ್ರೇಷ್ಠ ಕನಿಷ್ಠತೆಗಳು ಬೆರೆತ ದಿನವೇ ಕುಟುಂಬದ ಕೇಂದ್ರವಾದ ಹೆಣ್ಣಿನ ಸ್ವಾತಂತ್ರ್ಯಕ್ಕೆ ಧಕ್ಕೆ ಬರಹತ್ತಿತು. ವಂಶ ಸಂರಕ್ಷಣೆಗೆ ಗಂಡು ಹೆಣ್ಣಿನ ಸಹಕಾರ ಆಗ ಅಗತ್ಯವಿತ್ತು. ಹಾಗೆಯೇ ವಂಶ ವರ್ಧನೆಗೆ ಪರಸ್ಪರ ಆಕರ್ಷಣೆಯೂ ಅವಶ್ಯವಿತ್ತು. ಅದರಲ್ಲಿಯೇ ಒಂದು ಹೆಚ್ಚು, ಇನ್ನೊಂದು ಕಡಿಮೆ ಎನ್ನುವ ಭಾವ ಬೆರೆಯಬೇಕಾಗಿರಲಿಲ್ಲ. ಅದು ಬೆರೆತಾಗಲೇ ಹೆಣ್ಣು ಜನ್ಮ ಪ್ರತ್ಯಕ್ಷವಾಗಿ ಆ ಕೃತ್ರಿಮ ಉರಿಯಲ್ಲಿ ಒತ್ತಾಯದಿಂದ ಇಲ್ಲವೇ ಮೋಹಜಾಲದಿಂದ ಬಿದ್ದು ಬೇಯುತ್ತಿರುವಾಗ ಧೈರ್ಯವಾಗಿ ಹೆಣ್ಣಿನ ಹಿರಿತನವನ್ನು ಬೆನ್ನು ಕಟ್ಟಿದವರೆಂದರೆ ಮಹಾತ್ಮಾ ಬಸವಣ್ಣನವರು. ಭಾರತದಲ್ಲಿ ಹೆಣ್ಣಿನ ಸ್ವಾತಂತ್ರ್ಯಕ್ಕೆ ಮನ್ನಣೆಯಿತ್ತ ಮಹಾ ಪುರುಷರಲ್ಲಿ ಬಸವಣ್ಣನವರು ಅಗ್ರಗಣ್ಯರು.

ಆರ್ಥಿಕ ಅಸಹಾಯತೆಯಿಂದ ಹೆಣ್ಣು ಅಬಲೆಯಾದಾಗ ಬಲುಮೆಯಿಂದ ಪಡೆದ ಸೇವೆಗೆ ಸಹಕಾರವೆಂದು ಹೆಸರಿಟ್ಟರೆ, ಯೋಗ್ಯ ವ್ಯಕ್ತಿ ವಿಕಾಸಕ್ಕವಕಾಶವಿಲ್ಲದೇ ಜೀವನ ನಿರ್ವಾಹಕ್ಕೆ ಪುರುಷನನ್ನವಲಂಬಿಸಿಕೊಂಡಿದ್ದ ಹೆಣ್ಣು, ಮಾಡುವ ಹಾವ ಭಾವಗಳಿಗೆ ಪ್ರೇಮವೆಂದು ಕರೆದರೆ, ಕಳೆದುಹೋದ

ಹೆಣ್ಣಿನ ಸ್ವಾತಂತ್ರ್ಯ ಮತ್ತೆ ಸಿಕ್ಕಂತಾಯಿತೇ? ಕಾಡುಸ್ಥಿತಿಯಲ್ಲಿದ್ದಾಗಲೂ ಕೂಡ ಪರಸ್ಪರ ಜೀವನ ನಿರ್ವಾಹ, ಸ್ವತಂತ್ರವಾಗಿದ್ದದ್ದು ನಾಗರಿಕತೆಯ ಪರಮಪದ ಮುಟ್ಟಿದಾಗ ಹೆಣ್ಣು ಗುಲಾಮಳಾಗಬೇಕೇಕೆ? ಅದು ಗಂಡಿನ ಸ್ವಾರ್ಥವಲ್ಲವೇ? ಜೀವನ ನಿರ್ವಾಹದಲ್ಲಿ ಅಸ್ವತಂತ್ರಳಾದವಳು ಆಧ್ಯಾತ್ಮಿಕ ಆದರ್ಶದಲ್ಲಿಯೂ ಪುರುಷನ ಕೈಗೊಂಬೆಯಾದರೆ ಹೆಣ್ಣಿನ ಅಧಃಪಾತವಿನ್ನೇನಾಗಬೇಕು?

ಇಡೀ ನಾಡನ್ನೇ ಆದರ್ಶದ ಕಡೆಗೆ ಒಯ್ಯಲೆಳಸಿದ ಬಸವಣ್ಣನವರು ನಾಡಿನ ಅರ್ಧ ಅಂಗವಾದ ನಾರೀವರ್ಗವನ್ನು ಮರೆತು ಮುಂದರಿಯಬಹುದೇ? ಗಂಡು ಯಾವ ಸ್ವಾತಂತ್ರ್ಯದಿಂದ ಜೀವನ ಸಾಗಿಸುವದೋ ಅದೇ ಸ್ವಾತಂತ್ರ್ಯದಿಂದ ಹೆಣ್ಣಿಗೂ ಜೀವನ ನಿರ್ವಹಣೆ ನಿಸರ್ಗಸಿದ್ಧ ಹಕ್ಕೆಂಬುವಕ್ಕೆ ಒಂದು ಮಾತಿನಿಂದ ಸ್ಥಾಪಿತ ಸತ್ಯದ ಮುದ್ರೆಯನ್ನೊತ್ತಿದ್ದಾರೆ. ತಾವು ಕೊನೆಗೆ ಕೂಡಲ ಸಂಗಮನಲ್ಲಿ ತೆರಪು ಬೇಡುವವನ್ನಿಟ್ಟುಕೊಂಡಂತೆ ಅವನದೇ ಇನ್ನೊಂದು ನಾಮವಾದ ಚನ್ನಮಲ್ಲಿಕಾರ್ಜುನನಲ್ಲಿ ಕೂಡಿ ಹೋಗುವದ ಇನ್ನೊಂದು ವ್ಯಕ್ತಿಗೂ ಶಕ್ಯವಿದೆಯಾಗಿ ಜನಕ್ಕೆ ಕೃತಿಯಿಂದ ತಿಳಿಹೇಳಿದರು. ಅಂತೆಯೇ ಯಾರಿಗೂ ಗುರುವಾಗಲೊಪ್ಪದವರು ಅಕ್ಕ-ಮಹದೇವಿಯವರಿಗೆ ಗುರುವಾಗಿ ನಿಂತು ಕಳೆದುಹೋದಂತಿದ್ದ ಹೆಣ್ಣಿನ ಸ್ವಾತಂತ್ರ್ಯ-ಗೋಪುರಕ್ಕೆ ಹೊಂಗಳಸವನ್ನಿಟ್ಟರು.

ನರನು ಪೂರ್ಣಸತ್ಯದ ಆಧ್ಯಾತ್ಮಿಕ ಆದರ್ಶದ ಅವಿಚಲ ತಾರೆಯ ಕಡೆಗೆ ಸಾಗಿದ್ದರೆ ನಾರಿಯೂ ಅದೇ ಹಾದಿ ಹಿಡಿಯಬಹುದಲ್ಲದೇ ನರನೇ ನಾರಿಯ ಹಿರಿಗುರಿಯಾಗಲಾರನು. ಹಾಗೆ ನೋಡಿದರೆ ಹೆಣ್ಣು ಗಂಡುಗಳಲ್ಲಿ ಒಂದು ಶ್ರೇಷ್ಠವಿರಲೇ ಬೇಕೆಂಬ ಹಟವಿದ್ದರೆ ಹೆಣ್ಣೇ ಹಿರಿತನ ಪಡೆಯುವದು. ಎಷ್ಟೋ ಜನ ಪುಣ್ಯಾತ್ಮರು ತಮ್ಮ ಹಿರಿಗುರಿಯನ್ನು ಮಾತೆಯ ಸ್ಥಾನದಲ್ಲಿಟ್ಟು ಪೂಜೆಗೈಯ್ಯುತ್ತಿರುವದನ್ನು ಇದೇ ಭಾರತದಲ್ಲಿ ನೋಡಬಹುದು. ಈ ಪುಣ್ಯಪೃಥ್ವಿ (ಗುಡ್ ಅರ್ಥ್) ಯನ್ನು ಪೂಜ್ಯ ಬುದ್ಧಿಯಿಂದಲೇ ನೋಡಬಯಸುವ ಸತ್ಯಪ್ರಿಯರು ಮಾತೆಯ ಸ್ಥಾನದಲ್ಲಿಯೇ ನೋಡಿದ್ದಾರೆ. ಆದರೆ ಮಗುವಿಗೆ ಮಾತೆಯು ಹಿರಿಗುರಿ ಎನ್ನಿಸಿದರೆ, ಪುಣ್ಯಸ್ಥಳವೆನ್ನಿಸಿದರೆ ಮಾತೆಯ ಮಾರ್ಗಸಿರಿ ಇನ್ನೊಂದು ಇದೆ. ಅದು ಪತಿನ ಗುರಿ ಯಾವುದೋ ಅದೇ. ಅದಕ್ಕೆ

ದೇವರೆನ್ನಬಹುದು. ಧ್ಯೇಯವೆನ್ನಬಹುದು. ಅದು ಬಸವಣ್ಣನವರಿಂದ ತಿಳಿದರೂ, ಅದನ್ನೇ ನಿಚ್ಚಳವಾಗಿ ನಿನ್ನಿನವರು ಉಳಿಸಿಕೊಂಡು ಇಂದಿನವರಿಗೀಯಲಿಲ್ಲ. ಯಾವ ಒಳ್ಳೆಯ ಮಾತೂ ಕೂಡ ಸತತವಾಗಿ ಧೃಢನಿಶ್ಚಯದಿಂದ ಆಚರಣೆಯಲ್ಲಿಟ್ಟುಕೊಂಡರೇ ಉಳಿದೀತು. ಇಲ್ಲವೋ! ಅದು ಮಲಿನವಾಗಬಹುದು. ವಿಕೃತವೂ ಆಗಬಹುದು.

ಮಹಾತ್ಮಾ ಬಸವಣ್ಣನವರು ತೋರಿದ ಕ್ರಮದಲ್ಲಿ ಸ್ತ್ರೀ ಸ್ವಾತಂತ್ರ್ಯದ ಹಾದಿ ಅವರ ಕನ್ನಡ ನಾಡಿನಲ್ಲಿಯೇ ಇಂದು ಸಾರ್ವತ್ರಿಕವಾಗಿ ಇಲ್ಲದೇ ಹೋದರೂ ಜಗತ್ತಿನಲ್ಲಿ ಕ್ರಮವಿಕಾಸ ಕ್ರಮದಂತೆ ಪ್ರಗತಿ ಸಾಧಿಸಿದ ಯಾವ ರಾಷ್ಟ್ರದಲ್ಲಿಯೂ ಅವರು ತೋರಿಸಿಕೊಟ್ಟ ಹಾದಿಯಲ್ಲಿಯೇ ಪ್ರಗತಿಶೀಲ ಹೆಣ್ಣು ನಡೆಯುತ್ತಿರುವದನ್ನು ಕಾಣಬಹುದು. ಭಾರತದಲ್ಲಿಯಾದರೂ ಅತಿ ಪ್ರಾಚೀನ ಕಾಲದಲ್ಲಿ ಇದೇ ಬಗೆಯ ಸ್ತ್ರೀ ಸ್ವಾತಂತ್ರ್ಯ ಅಸ್ತಿತ್ವದಲ್ಲಿದ್ದದ್ದು ನಿಜ. ಅಂದಿನ ಪ್ರಖರತೆ ಮಂದವಾಗುತ್ತ ಬಂದದ್ದಕ್ಕೆ ಪುರುಷ ವರ್ಗದ ಸ್ವಾರ್ಥಲೋಲುಪತೆಯೇ ಹೆಚ್ಚಾಗಿ ಕಾರಣವಾಗಿದೆ. ಉತ್ತರ ಹಿಂದುಸ್ಥಾನದಲ್ಲಿ ಕುತ್ತುಸಿರು ಬಿಡಹಚ್ಚಿದ ಜೀವನದಲ್ಲಿರ ಬೇಸತ್ತು ಎಷ್ಟೋ ಕುಟುಂಬಗಳು ದಕ್ಷಿಣಕ್ಕೆ ಸರಿಯ ಹತ್ತಿದವು. ಆಗ ಬಂದ ಅನೇಕ ಕುಟುಂಬಗಳಲ್ಲಿನ ಕೋಮಲ ಕಾಯದ ಸ್ತ್ರೀಯರಿಗೆ ಇಲ್ಲಿಯ ಹವೆ ತಡೆಯದೆಂದು ಯಜ್ಞದ ಸಂಗಡ ಸಿಕ್ಕುತ್ತಿದ್ದ ಸೋಮರಸಕ್ಕೆ ಮೊದಲು ಸಂಚಕಾರ ಬಂದಿತಂತೆ. ಸ್ವತಂತ್ರವಾಗಿ ಯಜ್ಞಕಾರ್ಯ ಸಾಗಿಸುವ ಸ್ತ್ರೀಯಳೇ ಮುಂದೆ ಒಂದೊಂದಾಗಿ ಉಪನಯನ, ವೇದಾಧ್ಯಯನಗಳಿಗೆರವಾಗುತ್ತ ಜನ್ಮಸಿದ್ಧ ಹಕ್ಕಾದ ಸ್ವತಂತ್ರ ಅಸ್ತಿತ್ವವನ್ನು ಕೂಡ ಕಳೆದುಕೊಂಡಳು. ಇದೇ ಕ್ರಮವಲ್ಲದೇ ಹೋದರೂ ಇನ್ನಾವ ಕ್ರಮದಲ್ಲಾಗಲೀ ಗಂಡು, ಹೆಣ್ಣಿನ ಸಮಾನ ಸಾಧನಭೂಮಿಯಲ್ಲಿ ಹೆಣ್ಣಿನ ಪಥಕ್ರಮ ಗಂಡಿನಿಂದ ನಿಯಂತ್ರಿತವಾದದ್ದು ನಿಜ. ಸಮಾಜದಲ್ಲಿನ ಶಿಷ್ಟ ವರ್ಗದಲ್ಲಿಯೇ ಈ ಗತಿಯಾದ ಮೇಲೆ ಕೆಳ ವರ್ಗದವರ ಗತಿ ಕೇಳುವದೇ ಬೇಡ.

ವ್ಯಕ್ತಿಯ ಸಾಧನಭೂಮಿ ಕುಟುಂಬವಾದರೆ, ಜನಾಂಗದ ಸಾಧನಭೂಮಿ ವಿಶ್ವಕುಟುಂಬವಾಗಿದೆ. ಈ ವಿಶ್ವಕುಟುಂಬದ ಕಲ್ಪನೆ ವ್ಯವಹಾರದಲ್ಲಿಳಿಯಬೇಕಾದರೆ, ಸಮಾಜ ಸುಧಾರಣೆಯ ಹೆಸರಿನಲ್ಲಿ ಸ್ವಧಾರಣೆಯನ್ನು ಮಾತ್ರ

ಬಯುಸುವ ಪುರುಷವರ್ಗ ಒಂದೇ, ಅಸಮರ್ಥನೆಂಬುದಾಗಿ ಬಸವಣ್ಣನವರ ಧೃಡ ನಿರ್ಧಾರವಿದ್ದಂತಿದೆ. ಎಲ್ಲೆಲ್ಲಿ ಅಂಥ ಸಂದರ್ಭಗಳು ಸಿಕ್ಕಿವೆಯೋ ಅಲ್ಲಲ್ಲೆಲ್ಲ ಅವರ ಈ ಮತ ವ್ಯಕ್ತವಾಗಿದೆ. ಒಂದು ಕಾಲಕ್ಕೆ ಕುಟುಂಬ ಸಂಸ್ಥೆ ಅನಿವಾರ್ಯವಾದ ಅವಶ್ಯಕತೆಯಾಗಿರಬಹುದು. ಮುಂದುವರಿದಂತೆ ಆ ಕುಟುಂಬಸಂಸ್ಥೆಯೇ ವಿಶಾಲವಾಗಿ ವಿಶ್ವಕುಟುಂಬವಾಗಬೇಕಾದರೆ ತಕ್ಕಂತೆ ಪರಿವರ್ತನೆ ಹೊಂದಲೇ ಬೇಕು. ಬೀಜವು ಬೆಳೆದು ಹೆಮ್ಮರವಾಗಬೇಕಾದರೆ, ಬೀಜದ ಕೇಂದ್ರವಾದ ಒಳಗಿನ ಅಂಕುರವು, ಮೇಲಿನ ಕವಚವನ್ನೊಡೆದು ಮೊದಲು ಹೊರಕ್ಕೆ ಬರಬೇಕು. ಅದರಂತೆಯೇ ನಿಸರ್ಗದಿಂದಲೇ ವಂಶ ವರ್ಧನೆಯ ಹೊಣೆ ಹೊರಿಸಲ್ಪಟ್ಟ ಕುಟುಂಬದ ಕೇಂದ್ರ ಹೆಣ್ಣು ಪರಿಶಿಷ್ಟ ಕುಟುಂಬ ಸಂಸ್ಥೆಯ ಕವಚವನ್ನೊಡೆದು ಹೊರಕ್ಕೆ ಬಂದು ವಿಶ್ವಕುಟುಂಬದ ಕೇಂದ್ರವಾಗಬೇಡವೇ ?

ಕನ್ನಡದಲ್ಲಿ ಅಕ್ಕ, ಅಣ್ಣ ಎಂದು ಹೆಣ್ಣು ಗಂಡುಗಳನ್ನು ಕರೆವ ಸಂಜ್ಞಾ ಚಿನ್ಹೆಗಳೇ ಹೆಣ್ಣಿನ ಹಿರಿತನವನ್ನು ತೋರಿಸುತ್ತವೆ. ಬೆಳೆಯುತ್ತಿರುವವರಿಗೆಲ್ಲರಿಗೂ ಅಣ್ಣನೆಂಬನೊಬ್ಬನಿದ್ದರೂ, ಹಿರಿಯಣ್ಣನಿಗೂ ಅಕ್ಕನೊಬ್ಬಳಿರಲು ಸಾಧ್ಯವಿದೆ. ಹಿರಿಯಕ್ಕನಿಗೆ, ಹಿರಿಯಣ್ಣನೂ ತಮ್ಮನಾಗಿರಬಹುದಾಗಿದೆ. ಭೂಮಿಯ ಮೇಲೆ ಹುಟ್ಟಿ ಬಂದ ಯಾವ ಹೆಣ್ಣೂ, ಯಾವ ಗಂಡೂ ತನ್ನ ಉನ್ನತಿ ಪಥವನ್ನು ಅಕ್ಕ, ಅಣ್ಣರೆಂಬ ಕೇಂದ್ರದಿಂದಲೇ ಪ್ರಾರಂಭಿಸುತ್ತಾರೆ. ಮುಂದೆ ಅವರ ಪಥಕ್ರಮ ಬೇರೆ, ಬೇರೆ ಅನ್ನಿಸಿದರೂ ಒಂದೇ ಗುರಿಗೆ ನಿಲುಕಲು ಸಾಗಿದ ಎರಡು ವ್ಯಕ್ತಿಗಳ ಎಂದೂ ಅಗಲದ ಜೋಡು ಮಾರ್ಗವೇ ಆದಾಗಿರುತ್ತದಲ್ಲದೇ ಗಂಡಿನ ಮಾರ್ಗದಲ್ಲಿ ಹೆಣ್ಣಿನ ಮಾರ್ಗ ಕೂಡಿ ಹೋಗುವದಿಲ್ಲ.

ಸ್ತ್ರೀಗೆ, ಆತ್ಮವಿಲ್ಲ. ಅವಳಿಗೆ ಸ್ವತಂತ್ರ ಅಸ್ತಿತ್ವವಿಲ್ಲ ಎಂದು ಹೇಳುತ್ತ ಹೆಣ್ಣಿನ ಹಿರಿಗುರಿಯನ್ನು ಮಾತೃಪದಕ್ಕೆ ನಿಲ್ಲಿಸಿಬಿಡುವ ಮನೋವೃತ್ತಿ ಮಾನವ ಕುಲದ ಕೆಲವರ್ಗಗಳಲ್ಲಿ ಎಂದಿನಿಂದಲೂ ಬೆಳೆದು ಬಂದಿದೆ. ಆದರೆ ಮಹಾತ್ಮಾ ಬಸವಣ್ಣನವರು ಅದಕ್ಕೆ ಸೊಪ್ಪು ಹಾಕಿಲ್ಲ. ಹೇಗೆ ವಂಶವರ್ಧನೆಯ ಪ್ರಾರಂಭಿಕ ಸ್ಥಿತಿಗೆ ಸತಿ, ಪತಿ ನಾಮವೋ, ಆ ಕಾರ್ಯದಲ್ಲಿನ ಯಶಸ್ಸಿಗೆ ಮಾತೆ, ಪಿತನೆಂಬ ಹೆಸರಿರುತ್ತದೆ. ಕೂಟಕ್ಕೆ ಸತಿ ಪತಿ ನಾಮವಲ್ಲದೇ ಅರಿವಿಂಗೆ ಬೇರೊಂದೊಡಲುಂಟೆ ? ಅದರಂತೆಯೇ ಜನ್ಮ ಕೊಟ್ಟ ಭೂಮಿಯ

ಋಣ ತೀರಿಸುವದಕ್ಕಾಗಿ ಪಡೆವ ಪುತ್ರ ಪ್ರಾಪ್ತಿಗಾಗಿ ಮಾತ್ರ ಮಾತೆ, ಪಿತರಲ್ಲದೇ ಮಾನವತೆಯ ಆದರ್ಶಪ್ರಾಪ್ತಿಗೆಲ್ಲಿಯ ಭೇದ? ಎಂದು ಕೇಳಬಹುದಲ್ಲವೆ? ಸತಿಪತಿಗಳಾದಾಗ ಮಾತ್ರ ಸಮಾನತೆಯ ತಳಹದಿಯ ಮೇಲೆ ನಿಂತವರು ಮಾತಾಪಿತರಾಗುತ್ತಲೇ ಸಮಾನತೆ ಅಳಿದು ಹೋಗುತ್ತದೆಯೇ? ಮಾತೃಸ್ಥಾನವನ್ನು ಎಷ್ಟೇ ಹೊಗಳಿದರೂ, ಅವಳ ಸ್ವಾತಂತ್ರ್ಯತೆಗೆ ಗಿಲೀಟು ಕೊಟ್ಟರೂ ಅದು ಹೆಂಡದಗಡಿಗೆಯನ್ನು ಮೇಲೆ ಮಾತ್ರ ತೊಳೆದಂತೆಯೇ ಸರಿ. ಬಸವಣ್ಣನವರ ಯಾವ ಒಂದು ವಚನವೂ ಕೂಡ ಮಾತೃಪದದ ಉಧೋ, ಉಧೋ ಮಾಡುವದಕ್ಕೆ ಮೀಸಲಾಗಿಲ್ಲ. ಅಂದಾಕ್ಷಣ ಅವರು ಮಾತೃಪದದ ಹಿರಿಮೆಯನ್ನು ಅರಿತಿರಲಿಲ್ಲವೆಂದಲ್ಲ. ಸಂದರ್ಭ ದೊರೆತಂತೆ ಆಚರಣೆಯಿಂದ, ವಚನದಿಂದ ಮಾತೃಪದದ ಮಹತಿಯ ಮರೆವಾಗದಂತೆ ಪುರುಷವರ್ಗಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ. ಪ್ರತಿಯೊಂದು ಪಿಳ್ಳೆಯಲ್ಲಿಯೂ ಸ್ವಾಭಾವಿಕವಾಗಿಯೇ ತನ್ನ ತಾಯಿಯ ಬಗ್ಗೆ ಗೌರವವಿರುತ್ತದೆ. ಮಾತೆಯ ಮಡಿಲೆಂದರೆ, ಪೃಥ್ವಿಯ ಮೇಲೆ ಜನಿಸಿದ ಪ್ರತಿಯೊಂದು ಜೀವಿಯ ಸಾರಭೂತ ಸುಖದ ಸಾಮಗ್ರಿಯೆ ಆಗಿರುತ್ತದೆ. ಒಂದು ವೇಳೆ ಪಿತನಿಗೆ ಮಗುವಿನ ನಗುವು ವಸಂತ ತಿಲಕದ ಮಟ್ಟಿನಲ್ಲಿ ಸುಂದರ ವಿಹಾಗರಾಗಿಣಿಯ ಆಲಾಪನೆಯಂತೆ ಭಾಸವಾದರೆ, ಮಾತೆಗೆ ಮಗುವಿನ ಅಳುವು ಕೂಡ ಸೋಹನಿಯಲ್ಲಿನ ಪಂಚಮದಿಂಚರವಾಗುತ್ತದೆ. ಆಹಾ! ಅದು ಮೃದು ಮಾತೃ ಹೃದಯ. ಅದನ್ನು ಯಾರು ಯಾಕೆ ಬಣ್ಣಿಸಬೇಕು? ಇಲ್ಲದ ಬಣ್ಣ ಬಳಿದು ಬಾಯಿಯಿಂದ ದೇವಿ ಎಂದು ಹೇಳಿ ದೇವಿಯ ಬಾಯಿ ಕಟ್ಟಿ, ಆ ದೇವಿಯನ್ನು ದಾಸಿಯಂತೆ ನಡೆಯಿಸಿಕೊಳ್ಳಲಿಚ್ಛಿಸುವ ಧೂರ್ತರು ಬಗೆಬಗೆಯಿಂದ ಬಣ್ಣಿಸಬೇಕಲ್ಲದೇ ಕಟ್ಟಿದ ಬಾಯಿಬಿಚ್ಚಿ ಧೈರ್ಯದಿಂದ ಬೆನ್ನು ಕಟ್ಟಿದ ಬಸವಣ್ಣನವರು ಯಾಕೆ ಹೊಗಳಬೇಕು ಬಾಯಿಂದ.

ಮಾನವ ಕೋಟಿಯ ಮಾತಿರಲಿ, ಸೃಷ್ಟಿಯಲ್ಲಿನ ಜೀವಕೋಟಿಯನ್ನಾದರೂ ನೋಡಿ ಬಸವಣ್ಣನವರು ಹೇಳಿದ ಹೆಣ್ಣಿನ ಸ್ವತಂತ್ರ ವ್ಯಕ್ತಿತ್ವ ತಿಳಿದುಕೊಳ್ಳಬಹುದು. ಪಶುತ್ವದಿಂದ ಮುಂದುವರಿದವರೆಂದರೆ ಮಾನವರು ಎಂಬ ಹೆಮ್ಮೆಯುಳ್ಳ ಹೆಣ್ಣು, ಗಂಡುಗಳಂತೆ ಯಾವ ಪಶು, ಪಕ್ಷಿಗಳಲ್ಲಿಯೂ ಹೆಣ್ಣುಗಂಡುಗಳು ಒಂದರ ಮೇಲೊಂದವಲಂಬಿಸಿ ಜೀವನ ಸಾಗಿಸುವದಿಲ್ಲ. ಅವುಗಳಲ್ಲಿಯೂ ಕೂಡ ವಂಶವರ್ಧನೆಯ ಹೊಣೆಯುಳ್ಳ ಹೆಣ್ಣು ಸ್ವತಂತ್ರವಾಗಿಯೇ

ಆ ಹೊಣೆಯನ್ನು ನಿರ್ವಹಿಸುತ್ತದಲ್ಲದೇ ಕೇವಲ ಅಷ್ಟಕ್ಕಾಗಿ ಇಡೀ ಆಯುಷ್ಯವನ್ನು ಗಂಡಿನ ಮೇಲೆ ಅವಲಂಬಿಸಿ ಪರಾವಲಂಬಿಯಾಗುವದಿಲ್ಲ. ಗೋಡೆಯಿಂದ ಗಿಡಕ್ಕೆ, ಗಿಡದಿಂದ ಮರಕ್ಕೆ ಮರಿಯನ್ನು ಎದೆಗವಚಿಕೊಂಡು ಜಿಗಿಯುವ ಪ್ರಾಣಿ, ಯಾರನ್ನವಲಂಬಿಸುತ್ತದೆ. ಮಾನವನ್ನಾಕರ್ಷಿಸುವ ಸೌಂದರ್ಯವೇ ಭೂಮಿಗಿಳಿದಂತಿದ್ದ ನವಿಲು ಕೂಡ ತನ್ನ ಗರಿಗಳ ಗರ್ವವನ್ನು ಜೀವನ ನಿರ್ವಾಹಕ್ಕೆ ಮಾರಿಕೊಳ್ಳುವದಿಲ್ಲ. ಕೋಕಿಲೆಯು ತನ್ನ ಕಂಠವನ್ನು ತೂರಿಕೊಳ್ಳುವದಿಲ್ಲ. ಅಂದ ಮೇಲೆ ಅವು ನೈಸರ್ಗಿಕ ಜೀವನ ಸಾಗಿಸುವವೋ? ಮನುಷ್ಯನು ಸಾಗಿಸಿದ್ದು ನೈಸರ್ಗಿಕ ಜೀವನವೋ? ಪಶುತ್ವದಿಂದ ಮಾನವತೆಗೆ ಸಾಗುವ ಬುದ್ಧಿವಂತಿಕೆಯನ್ನು ಪಡೆದ ಮಾನವ ಕುಲದ ಪ್ರಗತಿ ಎಂದರೆ ತನ್ನದೇ ಆದ ಮಹತ್ವದ ಅರ್ಧ ಅಂಗವನ್ನು ದಾಸ್ಯದಲ್ಲಿ ಕೊಳೆಯಗೊಟ್ಟಿದ್ದೇನು?

ಮಹಾತ್ಮ ಬಸವಣ್ಣನವರು ಕೇವಲ ಸ್ತ್ರೀಸ್ವಾತಂತ್ರ್ಯದ ಕೆಲ ಅಂಗಗಳನ್ನು ಹೇಳಿ ಉಳಿದದ್ದನ್ನು ಕಡೆಗಂಡಿಲ್ಲ. ಹೆಣ್ಣಿನ ಸ್ವಾತಂತ್ರವನ್ನು ಪ್ರತಿಪಾತಿಸಿದಷ್ಟೇ ಜೋರಿನಿಂದ, ಸ್ವಾತಂತ್ರ್ಯವೆಂದರೆ ಒಳ್ಳೆಯದನ್ನು ಮಾಡುವ ಸ್ವಾತಂತ್ರ್ಯವೆಂಬ ಮಾತನ್ನೂ ಹೇಳಿದ್ದಾರೆ. ಆಯಾ ಕಾಲಕ್ಕೆ ತಕ್ಕಂತೆ ಸಮಾಜ ಧಾರಣೆಗೆ ಅವಶ್ಯವಿದ್ದ ರೂಡಿ ಜನ್ಯ ಸಂಸ್ಕಾರಗಳುಳ್ಳ ಸದ್‌ವ್ರತಗಳ ಬಗ್ಗೆ ಮತ್ತೆ ಮತ್ತೆ ಜಾಗ್ರತೆ ವಹಿಸಿದ್ದಾರೆ. ಪಾತಿವ್ರತ್ಯದಂತಹ ಸದ್‌ವ್ರತದ ಬಗ್ಗೆ ಇದ್ದ ಅವರ ತೀವ್ರಕಟಾಕ್ಷ ಅಲ್ಲಲ್ಲಿ ವಚನಗಳಲ್ಲಿ ವ್ಯಕ್ತವಾಗಿದೆ. ಅಲ್ಲದೆ ಅವಶ್ಯವಾಗಿ ಆಚರಣೆಯಿಂದ ಬೋಧಿಸಿದ ಬೋಧೆ ಬೇರೆ. "ನಂಬಿದ ಹೆಂಡತಿಗೆ ಗಂಡನೊಬ್ಬನೇ ಕಾಣಿರೋ" ಅನ್ನುವಲ್ಲಿ ಒಂದು ಹೆಣ್ಣಿಗೆ ಒಬ್ಬನೇ ಗಂಡನೆಂದು ಹೇಳದೇ ನಂಬಿದ ಹೆಂಡತಿಗೆ ಎಂದು ಹೇಳಿದ್ದು ವೈಶಿಷ್ಟ್ಯಪೂರ್ಣವಾಗಿದೆ. ಇನ್ನೊಂದೆಡೆ "ಪರಮ ಪತಿವ್ರತೆಗೆ ಗಂಡನೊಬ್ಬನೇ ಕಾಣಿರೋ" ಎಂದು ಹೇಳುತ್ತ ಲಗ್ನ ಸಂಸ್ಥೆಯಲ್ಲಿ ಹೆಣ್ಣಿನ ಸ್ಥಾನವನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದರೆಂಬುದನ್ನು ತಿಳಿಸಿದ್ದಾರೆ. ಗಂಡು ತನ್ನ ಹಂತವನ್ನು ಬಿಟ್ಟು ಕೆಳಕ್ಕಿಳಿಯಿತೆಂದು ಹೆಣ್ಣು ಇಳಿಯಲಾಗದು ಸಹನೆಯ ತವರೂರಾದ ಹೆಣ್ಣು ತನ್ನ ಸ್ಥಾನವನ್ನು ಅಚಲವಾಗಿ ಕಾಯ್ದುಕೊಳ್ಳಬೇಕೆಂದೇ ಅವರ ಮನೀಷೆ ಇದ್ದಿತು. ಅದನ್ನು ಅವರ ಕಾಲದ ಶಿವಶರಣೆಯರು ಆಚರಿಸಿ

ತೋರಿಸಿದ್ದಾರೆ. ಕ್ಷಣಿಕ ಸುಖಕ್ಕಾಗಿ ಗಂಡು ತನ್ನ ಆತ್ಮವನ್ನೂ ಮಾರಿಕೊಳ್ಳಲು ಸಿದ್ಧವಾಗಬಹುದು. ಹೆಣ್ಣು ಈ ವರೆಗೂ ಕ್ಷುದ್ರ ಸುಖಕ್ಕಾಗಿ ಎಂದೂ ತನ್ನ ತನವನ್ನು ಕಳೆದುಕೊಂಡ ಉದಾಹರಣೆ ಕಡಿಮೆ. ಅವಳಿಗೆ ವಿಶ್ವಾಸವಿದೆ, ತನ್ನಲ್ಲಿ ಮನುಷ್ಯತ್ವ ಇರುವವರೆಗೆ ಜಗತ್ತಿನಲ್ಲಿ ಮನುಷ್ಯರೂ ಇದ್ದಾರೆ, ಮನುಷ್ಯತ್ವವೂ ಇದೆ ಎಂಬುದು. ಅಕ್ಕನಲ್ಲಿನ ಈ ವಿಶ್ವಾಸ, ಅಣ್ಣನಿಂದ ಬಂದದ್ದು.

ಕೂಡಿ ಸಾಗಿದ ಜೋಡಿಕಾರನು ನಡುವೆ ಇಲ್ಲವಾದರೆ ಇನ್ನೊಬ್ಬನನ್ನು ಕೂಡಿ ಗುರಿಯ ಕಡೆಗೆ ಸಾಗಬಾರದೆನ್ನುತ್ತ, ಬೌದ್ಧ ಭಿಕ್ಷುಗಳ ಅನುಕರಣವೇನೋ ಅನ್ನುವಂತೆ ವಿಧವೆಯರ ಕೇಶವಪನ ಅದೇ ಭಾರತದಲ್ಲಿ ರೂಢವಾಗುತ್ತಲಿತ್ತು. (ವಿಧವೆಯರು ಕೇಶವಪನ ಮಾಡಿಸಿಕೊಂಡು ಸನ್ಯಾಸಿಗಳಾದರೆ ವೈಯಕ್ತಿಕವಾಗಿ ಆಧ್ಯಾತ್ಮಿಕ ಉನ್ನತಿ ಪಡೆಯಬಹುದೆಂಬ ಆಸೆ ಹಚ್ಚಿ ಹಾಗೆ ಮಾಡಲಾಗುತ್ತಿತ್ತೆಂದು ಕೆಲ ಇತಿಹಾಸಕಾರರ ತರ್ಕವಿದೆ.) ಅವರ ಕಡೆಗೆ ಲಕ್ಷ್ಯಕೊಡದೆ ಏನಾದರೂ ಈ ಪ್ರಪಂಚದಲ್ಲಿದ್ದುಕೊಂಡೇ ತನ್ನ ಆದರ್ಶವನ್ನು ಯಾರೂ—ಹೆಣ್ಣಿರಲಿ, ಗಂಡಿರಲಿ—ಸಿಲುಕಬಹುದು. "ಹಾವಿನ ಹಲ್ಲು ಕಳೆದು ಹಾವನಾಡಿಸಬಲ್ಲೊಡೆ ಹಾವಿನ ಸಂಗವೇ ಲೇಸು ಕಂಡಯ್ಯಾ" ಅಕ್ಕನ ನುಡಿ ಇದನ್ನೇ ಹೇಳುತ್ತದೆ. ಎಲ್ಲರಿಗೂ ಈ ಪ್ರಪಂಚವೇ ಪರಮಾರ್ಥ. ಯಾವ ಕಾರಣಕ್ಕೂ ಯಾರೂ ವಿಕೃತ ರೂಪಿಗಳಾಗುವ ಕಾರಣವಿಲ್ಲವಾಗಿ ಧೈರ್ಯಕೊಡುವ ಬಸವಣ್ಣನವರು ಇದ್ದರೆಂತಲೇ ಕನ್ನಡದ ಬಹುಜನ ಸಮಾಜದಲ್ಲಿ ಸ್ತ್ರೀಸ್ವಾತಂತ್ರ್ಯ ಎಷ್ಟೇ ಕ್ಷೀಣವಾಗಿ ಕಂಡರೂ ಇನ್ನೂ ಜೀವ ಹಿಡಿದಿದೆ; ಅದು ಯಾವ ಕ್ರಾಂತಿಯಲ್ಲಿಯೂ ಸಾಧಿಸದ ಮುಖ್ಯಕಾರ್ಯ. ಸ್ವಾರ್ಥಾಂಧತೆಯ ಪರಮಾವಧಿಗೆ ಮುಟ್ಟಿದ ಪುರುಷವರ್ಗಕ್ಕೆ ತಮ್ಮ ಆಚರಣೆಯಿಂದ ಹಾಗೂ ಚುಚ್ಚುಮಾತು, ಬಿಚ್ಚು ಮಾತುಗಳಿಂದ ಬೋಧಿಸಿದ ಬಸವಣ್ಣನವರು ಸ್ವಧರ್ಮವನ್ನೇ ಸ್ವಭಾವಧರ್ಮವನ್ನಾಗಿ ಮಾಡಿಕೊಳ್ಳಬಲ್ಲ ಪವಿತ್ರ ಹೃದಯದ ಹೆಣ್ಣುಜೀವನದ ವಿಷಯ, ವಿಶೇಷವಾಗಿ ಹೇಳಿರದಿದ್ದರೂ, ಹೇಳಿದ್ದರಲ್ಲಿಯೇ ಇರುವ ವಿಶೇಷ ಅತಿ ಮಹತ್ವದ್ದಾಗಿದೆ.

೭

# ಯುಗಪ್ರವರ್ತಕ ಬಸವಣ್ಣನವರು

ಜೀವನದ ಹೋರಾಟದಲ್ಲಿ ಕೈದುಗಳನ್ನು ಕಳೆದುಕೊಂಡ ಕನ್ನಡಿಗನ ಕಲಿತನವನ್ನೂ ಕಳೆದುಕೊಳ್ಳಲಿಲ್ಲ. ಕಲಿತನವನ್ನು ತೋರಿಸುವದಕ್ಕೆ ಕೈದುಗಳನ್ನು ಬಿಟ್ಟು ಇನ್ನೊಂದು ಸಾಧನವಿಲ್ಲವೆಂಬ ಕಲ್ಪನೆ ಬಹು ದಿನದ ರೂಢಿಯಿಂದ ಬಂದಿದ್ದರಿಂದ, ಕೈದುಗಳು ಹೋಗುತ್ತಲೇ ಅದರ ಸಂಗಡ ಕಲಿತನವೂ ಹೊಯಿತೇನೋ! ಎಂಬ ಶಂಕೆ ಕೆಲಕಾಲ ಕನ್ನಡಿಗನಿಗಾವರಿಸಿತ್ತು. ಶುದ್ಧವಾದ ಸಾಧನದಿಂದ ತನ್ನ ಕಲಿತನವನ್ನು ವ್ಯಕ್ತಗೊಳಿಸದ ಅಸಹಾಯಕ ಸಾಧನವೆಂದರೆ ಕೈದುಗಳೆಂಬ ಅರಿವು ಬಂದ ದಿನ, ಶುದ್ಧವಾದ ಸಾಧನದ ಪರಿಚಯವಾದ ದಿನ ಕನ್ನಡಿಗರು ತಮ್ಮಲ್ಲಿದ್ದ ಕಲಿತನವನ್ನು ಯಶಸ್ವಿಯಾಗಿ ಪ್ರಕಾಶಕ್ಕೆ ತಂದು ಭರತಖಂಡವನ್ನೇ ಚಕಿತಗೊಳಿಸಿದರು. ಭಾರತವನ್ನು ಚಕಿತಗೊಳಿಸಿದವನು ವಿಶ್ವದ ಲಕ್ಷವನ್ನು ತನ್ನ ಕಡೆಗೆಳೆದುಕೊಳ್ಳಲಾರನೇ? ವಿಶ್ವಕರ್ನಾಟಕವಾಗುವಷ್ಟು ಯೋಗ್ಯತೆಪಡೆಯಬಲ್ಲ ಕನ್ನಡನಾಡು ಸಂಯುಕ್ತ ಕರ್ನಾಟಕವಾಗುವದು ಕ್ಷಣದ ಮಾತು.

“ಹೇಡಿತನಕ್ಕಿಂತಲೂ ಹಿಂಸೆ ಶ್ರೇಷ್ಠವೆನ್ನಿಸಬಹುದಾದರೂ, ಅದೇ ಸರ್ವಶ್ರೇಷ್ಠವಲ್ಲ”ವೆನ್ನುವ ಮಹಾತ್ಮಾ ಗಾಂಧಿಯವರ ಮಾತು ಕನ್ನಡಿಗರಿಗೆ ಚಿರಪರಿಚಿತವಾದದ್ದು. ಭಾರತದ ಯಾವ ಭಾಗಕ್ಕಿಂತಲೂ ಕರ್ನಾಟಕಕ್ಕೆ ಮಾತ್ರ ಅವರ ಈ ಮಾತು ಕೂಡಲೇ ಹಿಡಿಯಿತೆಂಬದಕ್ಕೆ ಅಹಿಂಸೆಯ ಅಂದೋಲನದಲ್ಲಿ ಆತ್ಮಬಲದ ಶುದ್ಧಸಾಧನವಾದ ಸತ್ಯಾಗ್ರಹದಲ್ಲಿ—ತಮ್ಮ ಕಲಿತನವನ್ನು ಪ್ರಕಟಗೊಳಿಸುವದರಲ್ಲಿ—ಸಮರ್ಥವಾದುದೇ ಸಾಕ್ಷಿ.

ಆತ್ಮಬಲದಿಂದ ವ್ಯಕ್ತಗೊಳಿಸಲಾಗುವ ಈ ಕಲಿತನ ಕನ್ನಡಿಗನಲ್ಲಿ ಮಾತ್ರ ಹೆಚ್ಚಾಗಿ ಬೆಳೆದು ಬಂದುದು ಹೇಗೆ? ಅದು ಈ ವರೆಗೆ ಗುಪ್ತವಾಗಿರಲು ಕಾರಣವೇನು? ಮೊದಲಾದ್ದನ್ನು ವಿಚಾರ ಮಾಡುತ್ತಿದ್ದಂತೆಯೇ ಅವನ ಭೌತಿಕ ಬೆಳವಣಿಗೆಯ ನಿಜವಾದ ಇತಿಹಾಸ, ಹಾಗೂ ಶುದ್ಧಸಂಸ್ಕೃತಿಗಳ ಕಡೆಗೆ ಯಾರ ಲಕ್ಷವೂ ಹೋಗಿಯೇ ತೀರುವದು. ಕನ್ನಡಿಗರ ಇತಿಹಾಸ

ವನ್ನು ಇಡಿಯಾಗಿ ನೋಡುವಾಗ ಒಂದು ಮಾತು ಹೆಚ್ಚು ಎದ್ದು ಕಾಣುತ್ತದೆ. ಭಾರತದಲ್ಲಿ ಪರದಾಳಿಯು ಪ್ರವೇಶದ ಪೂರ್ವ, ದೇಶದ ಸ್ಥಿತಿ ಹೇಗಿದ್ದರೂ ಇರಲಿ. ಮುಂದೆ ಬಂದ ಪರಚಕ್ರದ ಪ್ರಭಾವಕ್ಕೆ ಭಾರತದ ಎಷ್ಟೋ ಭಾಗ ಬಲಿ ಬಿದ್ದಿದ್ದರೂ, ಬಲಿಗೆ ಸಿಕ್ಕದೇ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡವುಗಳಲ್ಲಿ ಕನ್ನಡನಾಡು ಅಗ್ರಗಣ್ಯವೆಂಬದನ್ನು ಯಾರೂ ಅಲ್ಲಗಳೆಯಲಾರರು. ಉತ್ತರ ಭಾರತದಲ್ಲಿ ವಿರಾಜಿಸುತ್ತಿದ್ದ ಸಾಮ್ರಾಜ್ಯಗಳು ಮಣ್ಣು ಮುಕ್ಕಿದಾಗ ಕರ್ನಾಟಕದಲ್ಲಿ ಕನ್ನಡ ವಿಜಯನಗರ ಸಾಮ್ರಾಜ್ಯದ ಹೊಸಯುಗ ಪ್ರಾರಂಭವಾಯಿತು. ಪರದಾಳಿಯು ಹೊಡೆತಕ್ಕೆ ಆರ್ಯಾವರ್ತವೇ ಗದಗುಟ್ಟಿ ನಡುಗಿದಾಗ ಕರ್ನಾಟಕದಲ್ಲಿ ಮಾತ್ರ ಅಂತಹ ಸಂಕ್ರಮಣ ಕಾಲದಲ್ಲಿಯೂ ಹೊಸಯುಗ ಪ್ರಾರಂಭವಾಗಬೇಕಾದರೆ ಸರ್ವಸಾಮಾನ್ಯರಿಂದ ಸಾಧ್ಯವೇ? ಮೇಲಾಗಿ ಒಂದು ಸಾಮ್ರಾಜ್ಯವನ್ನು ಕಟ್ಟುವ ಕಾರ್ಯ ಒಂದು ದಿನದಲ್ಲಾಗಲೀ, ಒಂದು ವರ್ಷದಲ್ಲಾಗಲೀ ಆಗುವ ಮಾತಲ್ಲ. ಸುರಂಗಕ್ಕಿಟ್ಟ ಕಿಡಿ ಹೊತ್ತಲು ಒಂದುಕ್ಷಣ ಸಾಕು. ಆದರೆ ಸುರಂಗ ಸಿದ್ಧಗೊಳಿಸುವದಕ್ಕೆ ಹತ್ತುವ ವೇಳೆಗೂ, ಅದು ಹೊತ್ತುವ ವೇಳೆಗೂ ಮಹದಂತರ. ದುರ್ದಿನಗಳೆಂದೆನ್ನಿಸಿಗೊಂಡ ಅಂತಹ ದಿನಗಳಲ್ಲಿಯೂ ಕನ್ನಡನಾಡಿನಲ್ಲಿ ಕುರುಬ ವೇಷದಿಂದ ಮೈಮರೆಯಿಸಿಕೊಂಡು ತಿರುಗುತ್ತಿದ್ದ ಕ್ಷಾತ್ರತೇಜ, ಹೊಡೆ ಮಿಂಚಿನಂತೆ, ಬರಸಿಡಿಲಂತೆ ಅರಿಗಳೆದೆ ಗುಡುಗು ಹೊಗಿಸಲಿಲ್ಲವೇ? ಈ ಕ್ಷಾತ್ರತೇಜದ ಕಿಡಿ ಸಿಡಿಯ ಬೇಕಾದರೆ ಅದರ ಸಿದ್ಧತೆಗಾಗಿ ಹತ್ತಿದ ದಿನಗಳನ್ನು ಲಕ್ಷಿಸಬೇಕು. ಆಗ ಯುಗ ಪ್ರಾರಂಭದ ಕಲ್ಪನೆ ಬರುವುದು. ಹೊಸಯುಗ ಬರುವುದಾದರೆ ಆದರ ಪ್ರಾಣಪ್ರತಿಷ್ಠೆಗೆ ಯುಗ ಪುರುಷರೇ ಬೇಕಷ್ಟೆ? ಯುಗ, ಯುಗಗಳ ಪರಿವರ್ತನೆಗೆ ಯುಗಪ್ರವರ್ತಕರೇ ಬೇಕು. ಅಂತಹ ಯುಗ ಪರಿವರ್ತಕರು ಆರ್ಯಾವರ್ತದಲ್ಲೆನ್ನೆಯೂ ಅಲ್ಲ. ಕನ್ನಡಿಗರ ಕರ್ನಾಟಕದಲ್ಲಿಯೇ ಹುಟ್ಟಿದರು. ಅವರೇ ದೇವಲೋಕದಿಂದ ಮಾನವ ಲೋಕಕ್ಕವತರಿಸಿ ಬಂದ ಮಹಾತ್ಮಾ ಬಸವಣ್ಣನವರು.

ಅವರು ಅವತರಿಸಿದ ಕಾಲಕ್ಕೆ ಅಂದರೆ ೧೨ನೇ ಶತಮಾನದಲ್ಲಿ ವಿಶ್ವವನ್ನೇ ಆರ್ಯಮಯವನ್ನಾಗಿ ಮಾಡಹೊರಟ ಆರ್ಯಾವರ್ತ, ತಾನೇ ಆರ್ಯಾವರ್ತವಾಗಿ ಉಳಿದಿರಲಿಲ್ಲ. ಭಾರತಕಾಲದದಿಂದ ಈಚೆಗೆ ಈ ಭರತ

ಖಂಡದಲ್ಲಿ ಆರ್ಯ, ಅನಾರ್ಯವೆಂಬ ಕಲ್ಪನೆ ಕುಪ್ಪಳಿಸಿಬಿದ್ದಿತ್ತು. ಗೀತೆಯಲ್ಲಿ ಶ್ರೀ ಕೃಷ್ಣನು ಹೇಳಿದಂತಿದ್ದ "ಅನಾರ್ಯ ಅಕೀರ್ತಿಕರ" ಎಂಬ ಮಾತುಗಳಿದ್ದರೂ ಭಾರತಯುದ್ಧದ ತುಮುಲದಲ್ಲಿ ಅನಾರ್ಯರ ಪಕ್ಷವನ್ನೇ ಶ್ರೀ ಕೃಷ್ಣನು ಎತ್ತಿ ಹಿಡಿದಿದ್ದನೆಂದು ಹೇಳಬಹುದು. ಪಾಂಡವರು ಪಂಡುರಾಜನಿಗೆ ಹುಟ್ಟಿದ ಮಕ್ಕಳಲ್ಲದ ಕಾರಣ ಅವರಿಗೆ ಸೂಜಿಯ ತುದಿಗೆ ಹತ್ತಿದ ಮಣ್ಣು ಕೂಡ ಸಿಕ್ಕಲಾರದೆಂದು ಆರ್ಯತನದ ಅಭಿಮಾನೀ ಕುಲಪುತ್ರನಾದ ಕೌರವನು ಹೇಳಿದ ಉತ್ತರಕ್ಕೆ ಸುಮ್ಮನೆ ಕೂಡಬೇಕಾಗಿತ್ತಲ್ಲವೇ? ಪಂಚಪ್ರಾಣದಂತಿದ್ದ ಪಂಚಪಾಂಡವರ ನ್ಯಾಯಪಕ್ಷದ ಕಡೆಗೆ ನಿಂತು ಸರ್ವಶಕ್ತಿಯಿಂದ ಹೋರಾಡಲು ಅವರಿಗೆ ಅನುವುಮಾಡಿಕೊಡಲಿಲ್ಲವೇ ಶ್ರೀ ಕೃಷ್ಣ? ಆರ್ಯ ಅನಾರ್ಯವೆಂಬ ಕಲ್ಪನೆಯೇ ಬಸವಣ್ಣನವರ ಕಾಲಕ್ಕೆ ಬರಲವಕಾಶವಿರಲಿಲ್ಲ. ಭಾರತದಲ್ಲಿನ ವಿವಿಧಜನಾಂಗಗಳ ಸಂಸ್ಕೃತಿಗಳು ಹಾಸುಹೊಕ್ಕಾಗಿ ಹೆಣೆದುಕೊಂಡು ಸುಯಂತ್ರಿತ ರಾಜ್ಯವ್ಯವಸ್ಥೆಯಲ್ಲಿ ಅನೇಕ ಕಾಲ ಬಾಳಿದ್ದವು. ಅದರಲ್ಲಿಯೇ ಅನಿಯಂತ್ರಿತತೆಯು ಕೈವಾಡ ಹೆಚ್ಚಾದಂತೆ ಶಾಸನ ಸಂಸ್ಥೆ ಹೊಯ್ದಾಡಹತ್ತಿತು. ಅದು ಒಮ್ಮೆ ಮಾಂಡಲೀಕರೂ, ಸರದಾರರೂ ಮೊದಲಾದವರ ಬೆಂಬಲವಾಗಿ ನಿಂತರೆ ಇನ್ನೊಮ್ಮೆ ಸಮಾಜದಲ್ಲಿನ ಪ್ರತಿಷ್ಠಿತ ವರ್ಗದ ಬೆಂಬಲಕ್ಕೆ ನಿಲ್ಲುತ್ತಿತ್ತು. ಈ ಬಗೆಯ ಶಾಸನಸಂಸ್ಥೆಯು ಹೊಯ್ದಾಟದಲ್ಲಿ ಇಡಿಯಾದ ಸಮಾಜಸಂಸ್ಥೆ ಗಾಸಿಯಾಗುತ್ತಿತ್ತು. ಶಾಸನಸಂಸ್ಥೆಯಲ್ಲಿನ ಅದಲುಬದಲು ಹಳೆ ನೀಚನ ಬದಲು ಹೊಸ ನೀಚನು ಬರುವದರಲ್ಲಾಗುತ್ತಿದ್ದಿತೇ ವಿನಹ ಈ ವರ್ಗಸತ್ತೆಗಳ ಕೈಯ್ಯಲ್ಲಿ ಸಿಕ್ಕು ಜರ್ಜರಿತವಾಗುತ್ತಿದ್ದ ಸಮಾಜದ ಯಾವ ಹಿಡಿತದ ಕೃತಿಯೂ ಅದರಿಂದಾಗುತ್ತಿರಲಿಲ್ಲ. ಇಂದಿನ ಯುರೋಪದಲ್ಲಿ ಸರಂಜಾಮುಶಾಹಿಯು, ಬಂಡವಲು ಶಾಹಿಯಲ್ಲಿ ಪರಿವರ್ತನವಾದರೂ ಪಾರ್ಶ್ವಭಾಗದಲ್ಲಿದ್ದ ಸಮಾಜ, ಮೊದಲಿದ್ದ ಕೊಳಚಿಯಲ್ಲಿಯೇ ಉಳಿದಂತೆ ಭಾರತದ ಆಗಿನ ದಿನಗಳಲ್ಲಿನ ಸಮಾಜದ ಸ್ಥಿತಿಯಾಗಿತ್ತು. ಅಂತಲೇ ಅದಕ್ಕೆ ರಾಜ್ಯಸಂಸ್ಥೆಯಲ್ಲಿ ಆಸ್ಥೆ ಉಳಿದಿರಲಿಲ್ಲ, ಜನಾಂಗದ ವಿಶ್ವಾಸವನ್ನು ಕಳೆದುಕೊಂಡ ರಾಜ್ಯಸಂಸ್ಥೆಗಳು ಪರಚಕ್ರದ ದಾಳಿಬರುತ್ತಲೇ ಹೇಗೆ ಉರುಳಿಬೀಳುವವೆಂಬದನ್ನು ಪ್ರತ್ಯಕ್ಷ ಕಾಣುತ್ತಿರವ ಈಗಿನ ಕಾಲದವರಿಗೆ ತುರುಷ್ಕರ ದಾಳಿಯಿಂದಾದ ಭಾರತದ ಅಂದಿನ ರಾಜ್ಯಸಂಸ್ಥೆಗಳ ಅವ

ಸ್ಥೆಯ ಕಲ್ಪನೆ ಸಹಜವಾಗಿ ಬರುವದು. ಅದನ್ನರಿತೇ ಬಸವಣ್ಣನವರು ಪ್ರಜೆಗಳಿಂದ, ಪ್ರಜೆಗಳಿಗಾಗಿಯೇ ನಿರ್ಮಿತವಾಗಬಹುದಾದ ರಾಜ್ಯಸಂಸ್ಥೆಯ ರೂಪರೇಗಳಷ್ಟನ್ನೆಳೆದರು.

ಯಾವ ಅನಿಯಂತ್ರಿತ ಪ್ರಭುಶಕ್ತಿಯೂ ಸರಳವಾಗಿ, ಸಹಜವಾಗಿ ಪರಿವರ್ತನೆ ಹೊಂದಿದಂತೆ ಇತಿಹಾಸದಲ್ಲಿಲ್ಲ. ರಕ್ತಪಾತವಿಲ್ಲದೇ ಯಾವ ಕ್ರಾಂತಿಗಳೂ ಯಶಸ್ವಿಯಾಗಿಲ್ಲ. ವರ್ಗದಿಂದ ಇನ್ನೊಂದು ವರ್ಗಕ್ಕೆ ಸತ್ತೆಯು ಅದಲು ಬದಲಾಗಬೇಕಾದರೂ ರಕ್ತದ ಕಾಲುವೆಗಳು ಹರಿದಾಗ, ಇಡಿಯಾದ ರಾಜ್ಯಸಂಸ್ಥೆಯೇ ಪುನರ್ನಿರ್ಮಾಣವಾಗುವಾಗ, ಸುಲಭವಾಗಿ ಸಾಧಿಸಲು ಸಾಧ್ಯವೇ ? ಆದರೂ ಬಸವಣ್ಣನವರು ಹಿಂಸಾಮಯ ಕ್ರಾಂತಿಯನ್ನು ಪ್ರಾರಂಭಿಸದೇ, ಅಥವಾ ತಮ್ಮ ಕಣ್ಣೆದುರು ಪ್ರಾರಂಭವಾದ ಸಶಸ್ತ್ರಕ್ರಾಂತಿಯ ಮುಂದಾಳುಗಳಾಗಿ ನಿಲ್ಲದೇ ಒಂದು ರಾಜ್ಯಸಂಸ್ಥೆಯ ಅಂಗವಾಗಿ ನಿಂತು ಜನಸಾಮಾನ್ಯರು ನಿರ್ಮಿಸಬಲ್ಲ ರಾಜ್ಯಸಂಸ್ಥೆಯ ಅಡಿಗಲ್ಲನ್ನು ಹಾಕಿದರೆಂದರೆ ಅದು ಪವಾಡವೇ ಸರಿ, ಎಂದು ಅನೇಕರು ಅಚ್ಚರಿಪಡಬಹುದು. ಆದರೆ ಇದರಲ್ಲಿ ಅಚ್ಚರಿಪಡಬೇಕಾದ್ದೇನೂ ಇಲ್ಲ. ಯುಗ ಪ್ರವರ್ತಕರು ಹೇಳಿದ ಯುಗಧರ್ಮವನ್ನು ತಿಳಿದುಕೊಳ್ಳದೇ ಅಜ್ಞಾನದಿಂದ ಅದಕ್ಕೊಂದು ಬಣ್ಣ ಬಳಿಯುವದರಿಂದೇನೂ ಆಗುವದಿಲ್ಲ. ಎಷ್ಟು ಹೃದಯ ಬಿಚ್ಚಿ ಜನತೆಗೆ ತಿಳಿಯುವಂತೆ ಹೇಳಿದ್ದರೂ ಅದು ಕಗ್ಗಂಟಾಗಿಯೇ ಉಳಿಯುವದೆನ್ನಿಸಿದರೆ, ಅವರನ್ನು ಪುರಾಣಪುರುಷರ ಸಾಲಿನಲ್ಲಿ ಕೂಡಿಸಿ ನಮ್ಮ ಗತಿಯು ನಮಗೆ ತಪ್ಪಿದ್ದಲ್ಲವೆಂದು ದೈವವನ್ನಪ್ಪಿದರೆ ಹೊಟ್ಟೆಯ ಮೇಲೆ ರೊಟ್ಟೆಯನ್ನು ಕಟ್ಟಿಕೊಂಡು ಹಸಿವೆ ಹಿಂಗದಲ್ಲಾ ಎಂದು ಚಿಂತಿಸಿದಂತೆಯೇ ಸರಿ.

ಯುಗ ಪರಿವರ್ತನೆಯ ಕ್ರಾಂತಿಯಲ್ಲಿ ಅಹಿಂಸೆಯ ಉಪಯೋಗವನ್ನು ತಿಳಿಯುವಾಗ ರಾಜ್ಯಸಂಸ್ಥೆಯ ಬಗ್ಗೆ ಕೊಂಚ ವಿಚಾರಿಸುವದವಶ್ಯವಾಗಿದೆ. ಭೀಷ್ಮನು ಧರ್ಮರಾಯನಿಗೆ ಹೇಳಿದ ರಾಜ್ಯಸಂಸ್ಥೆಯ ಉದಯದ ಕಲ್ಪನೆಯಂತೆ " ರಾಜ್ಯವಿಲ್ಲ ರಾಜನಿಲ್ಲ, ದಂಡಿಸುವವರಿಲ್ಲ, ದಂಡಿಸಿಕೊಳ್ಳುವವರಿಲ್ಲ " ಅಂತಹ ಸಮಾಜರಚನೆಯಲ್ಲಿ ಅನುಕೂಲತೆಗಾಗಿ ರಾಜ್ಯಸಂಸ್ಥೆ ಬಂದಿತು. ತಾವೇ ರಚಿಸಿದ ಸಮಾಜದ ಕಟ್ಟು ಸಡಿಲಾಗಿ ಅವ್ಯವಸ್ಥೆಗಿಟ್ಟುಕೊಳ್ಳಬಾರದೆಂತಲೇ ಶಾಸನಸಂಸ್ಥೆಯ ಬಿಗುಹನ್ನು ನಂಬಿದ್ದಾಯಿತು. ಪ್ರಜೆಗಳ ಮಾನ

ಧನರಕ್ಷಣೆಗಾಗಿ ನಿರ್ಮಿತವಾದ ಈ ಶಾಸನಸಂಸ್ಥೆ ರಕ್ಷಣೆಯ ಕಾರ್ಯಬಿಟ್ಟು ಭಕ್ಷಣೆಯ ಕಾರ್ಯ ಪ್ರಾರಂಭಿಸಿತು. ಸಮಾಜದಲ್ಲಿನ ಕೆಲವೇ ವರ್ಗಗಳ ಸ್ವಾರ್ಥರಕ್ಷಣೆಗುಪಯೋಗವಾಗ ಹತ್ತಿತು. ಆಗ ಅದನ್ನು ಸ್ಥಾನಭ್ರಷ್ಟ ಗೊಳಿಸಿ ಮಾನವ ಜನಾಂಗದ ಹಿತದ ದೃಷ್ಟಿಯಿಂದ ಯೋಗ್ಯವಾದ ಸಮತಾ ವಾದದ ಸುಯಂತ್ರಿತ ಸಮಾಜರಚನೆಯ ಬೆಂಬಲಕ್ಕೆ ನಿಲ್ಲುವಂತೆ ಮಾಡು ವದೇ ಬಸವಣ್ಣನವರ ನಿಶ್ಯಸ್ತ್ರಕ್ರಾಂತಿಯ ಉದ್ದೇಶವಾಗಬೇಕಾಯಿತು. ಅದು ಸಶಸ್ತ್ರವಾಗಿ ಸಾಗದೇ ಶಾಂತಿಮಾರ್ಗದಿಂದ ಸಾಗಬೇಕೆಂದು ಬಸವಣ್ಣನವರ ಯೋಚನೆ ಇದ್ದಿತು. ಶಸ್ತ್ರಬಲವನ್ನೆದುರಿಸಬೇಕಾದರೆ ನಿಶ್ಯಸ್ತ್ರರಾಗಿ ಹೋದರೆ ಹೇಗೆ ಯಶಸ್ಸು ಸಿಕ್ಕಬೇಕೆನ್ನುವವರಿಗೆ ಒಂದು ಮಾತಿನ ಅರಿವೇ ಇರುವದಿಲ್ಲ. ಶಸ್ತ್ರವು ಸ್ವತಃ ಹಿಂಸೆಯನ್ನು ಮಾಡುತ್ತಿರುವದಿಲ್ಲ. ಶಸ್ತ್ರಧಾರಿಯ ಕೈ ಅದಕ್ಕೆ ಆಧಾರವಾಗಿರುತ್ತದೆ. ಅಂದಮೇಲೆ ಶಸ್ತ್ರಕ್ಕೆ ಬೆದರಬೇಕೇಕೆ? ಶಸ್ತ್ರ ಧಾರಿಯಾದರೂ ನಮ್ಮಂತೆ ಮನುಷ್ಯನೇ ಇರುವದರಿಂದ ಅವನಲ್ಲಿನ ಮನುಷ್ಯ ತ್ವದ ಮೇಲೆ ವಿಸ್ವಾಸವಿಟ್ಟು ನ್ಯಾಯವಾದ ಕಾರ್ಯವನ್ನು ನ್ಯಾಯವಾದ ಮಾರ್ಗದಲ್ಲಿ ನಡೆಯಿಸುವ ಮುಂದೆ ಅವನ ಶಸ್ತ್ರ ಒಮ್ಮೆಲೆ ಅಲ್ಲದಿದ್ದರೂ ತೀವ್ರವೇ ಕಳಚಿ ಬೀಳುವದರಲ್ಲಿ ಸಂಶಯವಿಲ್ಲ. ಸುದೈವದಿಂದ ಬಸವಣ್ಣ ನವರಿಗೆ ಶಸ್ತ್ರಧಾರಿ ಶಾಸನಸಂಸ್ಥೆಯೂ ಎದುರಾಗಿ ನಿಲ್ಲುವಷ್ಟು ಶಕ್ತಿವಂತವಾಗಿ ಉಳಿದಿರಲಿಲ್ಲ. ನಿಂತಿದ್ದರೆ ಮೇಲೆ ಹೇಳಿದಂತೆ ಅದನ್ನು ನಿರ್ವಹಿಸುತ್ತಿದ್ದ ರೆಂಬುದು ನಿರ್ವಿವಾದ. ಕೆಲರೆನ್ನುವಂತೆ "ಕ್ರಾಂತಿ ಎಂದರೆ ಒಂದು ರಾಜ್ಯಸಂಸ್ಥೆ ಯನ್ನು ತಮ್ಮ ಬೆಂಬಲಕ್ಕೆ ನಿಲ್ಲಿಸಿಕೊಂಡ ಸ್ವಾರ್ಥೀ ವರ್ಗವನ್ನೇ ನಿರ್ಮೂಲ ಮಾಡುವದಿರುತ್ತದೆ." ಎಂಬ ಮಾತು ಕೆಲಮಟ್ಟಿಗೆ ನಿಜವಿರಬಹುದು. ಆದರೆ ಯಾವುದೊಂದು ವರ್ಗವು ರಾಜ್ಯಸಂಸ್ಥೆಯ ದುರ್ಲಾಭ ಪಡೆಯಲವಕಾಶವಿದೆ ಎಂದರೆ ಹಾಗೆ ಪಡೆಯುವ ಪರಿಸ್ಥಿತಿ ನಿರ್ಮಿಸಿಕೊಟ್ಟ ತಪ್ಪನ್ನು ತಿದ್ದಿ ಕೊಳ್ಳದೇ ಶಸ್ತ್ರಬಲದಿಂದ ಒಮ್ಮೆಲೆ ಒಂದು ವರ್ಗಸತ್ತೆಯನ್ನು ನಿರ್ನಾಮಗೊಳಿ ಸಿದರೆ ಅದರ ಸ್ಥಾನದಲ್ಲಿ ಮತ್ತೊಂದು ಪಕ್ಷಸತ್ತೆಯು ಹುಟ್ಟೀತಲ್ಲದೇ ಶುದ್ಧ ವಾದ ಸಮಾಜಸತ್ತೆ ಹುಟ್ಟೀತೆಂದು ಇತಿಹಾಸ ಹೇಳುವದಿಲ್ಲ. ಪೃಥ್ವಿಯು ಸೂರ್ಯನ ಸುತ್ತ ತಿರುಗುವಾಗ ತನ್ನ ಸುತ್ತಲೂ ತಿರುಗುತ್ತಿರುವಂತೆ ಕ್ರಾಂತಿ ರಂಗದ ಶುದ್ಧ ಹೋರಾಟದಲ್ಲಿ ತನ್ನ ಅಜ್ಞಾನದ ಪಾಪವನ್ನು ತೊಳೆದು

ಕೊಂಡು ಪರಿಶುದ್ಧವಾದ ಸಮಾಜವೇ ಮುಂದಿನ ನಿಷ್ಕಲಂಕ ಸಮಾಜಸತ್ತೆಯನ್ನು ಪಡೆಯಬಲ್ಲದು.

ಬಸವಣ್ಣನವರು ಒಂದು ರಾಜ್ಯಸಂಸ್ಥೆಯಲ್ಲಿ ನಿಂತುಕೊಂಡು ಆ ರಾಜ್ಯಸಂಸ್ಥೆಗೆ ಶುದ್ಧವಾದ ಪ್ರಜಾಸತ್ತೆಯ ಸ್ವರೂಪ ತಂದುಕೊಡುವಂತಹ ಕ್ರಾಂತಿಕಾರ್ಯ ನಡೆಯಿಸಿದ್ದಾಗ, ಸ್ವಾರ್ಥಸಾಧನೆಯನ್ನು ನಿರಾಯಾಸವಾಗಿ ಸಾಧಿಸಿಕೊಳ್ಳಲಾರದೇ ಚಡಪಡಿಸುವ ವರ್ಗವು ಬಿಜ್ಜಳನನ್ನು ಬೇಕಾದಂತೆ ಕೆಣಕಿತು. ಬಸವಣ್ಣನವರ ವಿರುದ್ಧವಾಗಿ ಸಾಕಷ್ಟು ಇಲ್ಲದ ದೋಷಾರೋಪಣೆಗಳನ್ನು ಮಾಡಿತು. ಆದರೆ ಎರಕಹೊಯ್ದ ಮಿತ್ರತ್ವದ ಬೆಸಿಗೆ ಬಿಜ್ಜಳನನ್ನು ಚಂಚಲಚಿತ್ತನನ್ನಾಗಿ ಮಾಡಲು ಬಹುಕಾಲ ಸಾಧ್ಯವಾಗಲಿಲ್ಲ. ರಾಜ್ಯಸಂಸ್ಥೆಗಾದರೂ ಕೆಲಧ್ಯೇಯಧೋರಣೆಗಳಿವೆ. ಅವುಗಳನ್ನು ಬಿಟ್ಟು ಸಹಸಾ ಅದು ಅತ್ತಿತ್ತ ಹೋಗಲಾಗುವದಿಲ್ಲ. ಜನತೆಯು ಜಾಗ್ರತವಿಲ್ಲದ ಕಾಲದಲ್ಲಿ ಆ ಸಂಸ್ಥೆಯ ಶಾಸನ ಶಕ್ತಿಯನ್ನು ಧೂರ್ತವರ್ಗವು ದುರುಪಯೋಗ ಮಾಡಿಕೊಳ್ಳಬಹುದಲ್ಲದೇ ಜನತೆ ಎಚ್ಚತ್ತಾಗ ಏನು ಮಾಡಲೂ ಅದಕ್ಕೆ ಸಾಧ್ಯವಾಗುವದಿಲ್ಲ. ಬಸವಣ್ಣನವರ ಕ್ರಾಂತಿಕಾರ್ಯದ ಪರಿಪಕ್ವ ಕಾಲದಲ್ಲಿ ಶಾಸನ ಸಂಸ್ಥೆಯು ದುಷ್ಟರ ದುರ್ಬೋಧನೆಯ ಕೈಲಿಸಿಕ್ಕು, ನಿಶ್ಶಸ್ತ್ರಕ್ರಾಂತಿಯ ಶುದ್ಧಸ್ವರೂಪಕ್ಕೆ ದೃಷ್ಟಿಯ ಬೊಟ್ಟನ್ನಿಟ್ಟಂತೆ ಕೊನೆಗೆ ಪ್ರಜರ ತಾಳ್ಮೆಯನ್ನು ಕೆಣಕಿ ಅದು ಶಸ್ತ್ರಧಾರಿಯಾಗುವಂತೆ ಮಾಡಿತು. ಜನಜೀವನದಲ್ಲಿ ಬರುವ ರಸ ನಿಮಿಷಗಳಂತೆ ಅದೊಂದು ರಾಷ್ಟ್ರಜೀವನದಲ್ಲಿನ ವಿಷನಿಮಿಷ. ಅದೊಂದು ಕ್ಷಣವೇ ಇರಲಿ ಅದರ ಪ್ರಭಾವ ಮುಂದಿನ ಸಮಾಜ ರಚನೆಯಲ್ಲಿ ಮೂಡದೇ ಬಿಡಲಿಲ್ಲ.

ಈ ಕೊನೆಯ ಕ್ರಾಂತಿಯ ನಂತರ ಬಂದ ವಿಜಯನಗರ ಸಾಮ್ರಾಜ್ಯವು ಎಚ್ಚತ್ತ ಪ್ರಜಾಶಕ್ತಿಯ ದ್ಯೋತಕವಾದರೂ, ಅಂತ್ಯದ ವಿಷನಿಮಿಷದಪ್ರಭಾವವೋ ಏನೋ; ಆ ಸಾಮ್ರಾಜ್ಯದಲ್ಲಿಯೂ ಶುದ್ಧ ಪ್ರಜಾಸತ್ತೆಯನ್ನುಪಭೋಗಿಸುವ ಸಂಧಿ ಕನ್ನಡದ ಪ್ರಜಾಕೋಟಿಗೆ ಇಲ್ಲದೇ ಹೋಯಿತು. ವಿಜಯನಗರ ಸಾಮ್ರಾಜ್ಯದಲ್ಲಿ ಅನಿಯಂತ್ರಿತ ವರ್ಗಸತ್ತೆಯು ಮೆರೆಯದೇ, ಪ್ರಜಾಸತ್ತೆಯ ಲಕ್ಷಣವಾದ ಸತ್ತೆಯ ವಿಕೇಂದ್ರೀಕರಣವು ಆಚರಣೆಯಲ್ಲಿ ಬಂದಿದ್ದರೂ ಇಂದಿನ ಬಂಡವಲು ಶಾಹೀ ಪ್ರಜಾಸತ್ತೆಯಲ್ಲಿದ್ದ ಲೋಪದೋಷಗಳು ಅದರಲ್ಲಿಯೂ ತುಂಬಿದ್ದವು. ಯೂರೋಪದೊಳಗಿನ ಕ್ರಾಂತಿ ವಿರೋಧೀ

ತತ್ವಜ್ಞಾನವು ರಾಷ್ಟ್ರವಾದದ ರೂಪದಲ್ಲಿ, ಧರ್ಮ ಆಧ್ಯಾತ್ಮಗಳ ಹೆಸರಿನಲ್ಲಿ ಸಮಾಜಸತ್ತೆ, ಪ್ರಜಾಸತ್ತೆಗಳಿಗೆ ವಿರೋಧ ಮಾಡಿದಂತೆ ವಿಜಯನಗರದ ಅಳಿಗಾಲದ ಕಾಲಕ್ಕೆ ಕಾರಣವಾಗುವಂತೆ ಧರ್ಮ ಆಧ್ಯಾತ್ಮಗಳು ಹಣಿಕಿಕ್ಕದೇ ಬಿಡಲಿಲ್ಲ. ಪ್ರಜೆಗಳ ಹಿತದ ಲಕ್ಷ್ಯ ಅವಕ್ಕೆಷ್ಟು ಮಾತ್ರವೂ ಇರಲಿಲ್ಲ. ಕೊನೆ ಕೊನೆಗಂತೂ ಪ್ರಜಾನುರಾಗವನ್ನು ತೀರ ಕಳೆದುಕೊಂಡದ್ದರಿಂದ ಯಾವ ಪ್ರಜರ ಸಹಾಯದಿಂದ ಸಾಮ್ರಾಜ್ಯವು ಕಟ್ಟಲಾಗಿತ್ತೋ ಅದೇ ಪ್ರಜೆಗಳಲ್ಲಿನ ನೊಂದ ಪ್ರತಿಷ್ಠಿತರು, ಅದರ ಪತನಕ್ಕೆ ಕಾರಣವಾದ ಪರದಾಳಿಯಲ್ಲಿ ಪಾಲು ಗಾರರಾಗಿದ್ದರಾಗಿ ತಿಳಿದು ಬರುತ್ತದೆ. ಕ್ರಿ. ಶ. ೧೫೬೫ರಲ್ಲಿ ನಡೆದ ತಾಳೀ ಕೋಟೆಯ ಕಾಳಗದಲ್ಲಿ ನೀರಗಣಾಚಾರ ವಿಠ್ಠಪ್ಪ ಗೌಡನು ವಿಜಯನಗರದ ರಾಮರಾಜನ ಕತ್ತನ್ನು ಕೊಯ್ದು ತಂದನೆಂದು ಇತಿಹಾಸದಿಂದ ತಿಳಿಯುತ್ತದೆ. ಅದಕ್ಕೆ ಧಾರ್ಮಿಕ ಹಿನ್ನೆಲೆ ಇದೆಯಾಗಿ ನೋಡುವವರು ಮೂರ್ತಿಭೇದಕರಾದ ಮುಸಲ್ಮಾನರು ಇಂದಿನ ಹಾಳು ಹಂಪೆಯಲ್ಲಿನ ವೈಷ್ಣವ ವಿಗ್ರಹಗಳನ್ನು ಮಾತ್ರ ಒಡೆದು ಶೈವ ವಿಗ್ರಹಗಳಿಗೆ ಕೈ ಹಚ್ಚದ ಕಾರಣ ತೋರಿಸಬಹುದು. ಅದರ ಕಾರಣ ಮಿಮಾಂಸೆ ಮಾಡದೇ, ಉತ್ತರ ಕೊಡಲಾರದ ನಿರುತ್ತರ ಬಾಣಕ್ಕೆ ಹಾಸ್ಯದ ಹೂವನ್ನಿಟ್ಟು ಹೊಡೆದರೆ ಬಾಣಬಿಟ್ಟ ಸ್ಥಳದಲ್ಲಿ ನೆನಪು ಸಹ ಉಳಿಯದಿದ್ದರೂ ನಟ್ಟ ಸ್ಥಳದಲ್ಲಿ ಕೊನೆ ಬಾಳುವ ಕಲೆ ಬೀಳುತ್ತದೆ. ಚದುರಂಗ ದಾಟದ ರಂಗಪಟದ ಮೇಲಿದ್ದಾಗ ಕೃತಕ ಆನೆ, ಕುದುರೆ, ಒಂಟೆಗಳು ವೈರಿ ಗಳಂತೆ ಬಡಿದಾಡಿದರೂ, ಬುಟ್ಟಿಯಲ್ಲಿ ಬಿದ್ದಾಗ ಮಿತ್ರರಾಗುವವೇನು ? ಇಲ್ಲ. ಅವುಗಳ ವೈರತ್ವ, ಮಿತ್ರತ್ವ ಮುಖ್ಯವಿರದೆ ಅವುಗಳನ್ನು ರಂಗದ ಮೇಲೆ ನಡೆಯಿ ಸುತ್ತಿರುವ ಮನೋವೃತ್ತಿಗಳ ಹಿನ್ನೆಲೆ ಮುಖ್ಯವಾಗಿರುತ್ತದೆ. ಸಣ್ಣ ಪುಟ್ಟ ಕಾರಣಗಳೇನೆ ಇರಲಿ ದಿಗಂತದಲ್ಲಿ ತನ್ನ ಕೀರ್ತಿ ಧ್ವಜವನ್ನು ಮೆರೆಯಿಸಿದ ವಿಜಯನಗರದ ಸಾಮ್ರಾಜ್ಯದ ಕೊನೆಗಾಲದಲ್ಲಿ ಪ್ರಜರವಿಶ್ವಾಸ ಉಳಿದಿರಲಿಲ್ಲ ವೆಂಬುದು ಬಹುಮಟ್ಟಿಗೆ ನಿಜ. ಯುಗ ಪರಿವರ್ತನದಲ್ಲಿ ಬಂದ ಸಶಸ್ತ್ರಕ್ರಾಂತಿಯು ಒಂದು ಕ್ಷಣವೂ ತನ್ನ ಪ್ರಭಾವವನ್ನೀ ರೀತಿ ತೋರಿಸಲು ಸಮರ್ಥವಾದಾಗ ಸಶಸ್ತ್ರಕ್ರಾಂತಿಯಿಂದಲೇ ಹೊಸ ಯುಗವನ್ನು ಪಡೆಯುವೆನೆಂಬವರು ಎಂತಹ ಘೋರ ಸಂಕಟವನ್ನೆದುರಿಸಬೇಕಾಗುವದೆಂಬದನ್ನು ಹೇಳುವದೇ ಬೇಡ. ಭಾರತದಲ್ಲಿ ಹಿಂದೆ ನಡೆದ ಹಿಂಸಾಯುದ್ಧಗಳಿರಲಿ. ಇಂದು ಪ್ರಜಾಸತ್ತೆಯ ಘೋಷಣೆ ಹೊತ್ತು ಯುರೋಪದ ತುಂಬೆಲ್ಲ ಗುಡುಗಾಡಿದ ಹಿಂಸಾಮಯ

ಕ್ರಾಂತಿಯಿಂದ ಯಾವ ದೇಶದಲ್ಲಿಯೂ ಶುದ್ಧ ಸಮಾಜಸತ್ತೆ ಬೆಳೆದು ಬರಲಿಲ್ಲ. ಶುದ್ಧ ಸಂಸ್ಕೃತಿಯ ಮಾತಂತೂ ದೂರೇ ಉಳಿಯಿತು.

ಒಂದು ಕಟ್ಟಿನಿಂದ ಇನ್ನೊಂದು ಚೌಕಟ್ಟಿನಲ್ಲಿ ಸಮಾಜವನ್ನು ಕೂಡಿಸ ಲೆಳಸಿದಾಗ ಅದರ ಸಂಸ್ಕೃತಿಯು ಶುದ್ಧತೆಯನ್ನು ಜಾಗೃತವಿಡಬೇಕು. ಬಸ ವಣ್ಣವವರು, ಶುದ್ಧವಾದ ಸಮಾಜಸತ್ತೆಯ ಉಪಯೋಗ ಪಡೆಯಬಲ್ಲ ಸಮಾಜ ರಚನೆಯಲ್ಲಿ ತೊಡಗಿದಾಗ ಅದರ ಸಂಸ್ಕೃತಿಯ ಸಂವರ್ಧನೆಯ ಕಡೆಗೆ ಮೊಟ್ಟಮೊದಲಿನ ಮಹತ್ವ ಕೊಟ್ಟಿದ್ದರು. ಯೋಗ್ಯ ರೀತಿಯಿಂದ ತಕ್ಕ ಶಿಕ್ಷಣವನ್ನು ಸಮಾಜಕ್ಕೆ ಕೊಡುವದಕ್ಕಾಗಿ ನಾಡಿನ ತುಂಬೆಲ್ಲ ಅನು ಭವಮಂಟಪದ ಅನುಭಾವಿಗಳ ಗುಂಜಾರವವು ಹಬ್ಬುವಂತೆ ಮಾಡಿದರು. ಜಂಗಮರೆಂಬ ಪ್ರಾಧ್ಯಾಪಕರು ದಯದ ಧರ್ಮದ ಆಚರಣೆಯನ್ನು ಕೃತಿ ಯಿಂದ ಬೋಧಿಸುತ್ತಿದ್ದರು. ಹಿಂಸೆಗೆ ಹೇಸಿದ ಶರಣಗಣವು ಶಾಸನ ಸಂಸ್ಥೆ ಯ ಶಸ್ತ್ರಬಲದ ಸಹಾಯವಿಲ್ಲದೇ, ಅಹಿಂಸೆಯ ಆತ್ಮಬಲದ ಸಹಾಯದಿಂದಲೇ ಅನ್ಯಾಯ ನಿವಾರಣೆಯ ದಾರಿಯನ್ನು ತೋರಿಸಿಕೊಡುತ್ತಿತ್ತು. ಎಲ್ಲೆಲ್ಲಿ ಮಾಲಿನ್ಯವು ಹಣಿಕಿ ಹಾಕುವದೋ ಅಲ್ಲೆಲ್ಲ ಕಡೆಗಳಲ್ಲಿ ಮುಳ್ಳಾವಿಗೆ ಕಾಯ ಕದವರು, ತೆಕ್ಕೆಯ ಕಾಯಕದವರು—ಇಂದಿನ ಭನಸಾಲಿಗಳಂತೆ—ಆತ್ಮ ಕ್ಲೇಷವನ್ನು ಸಹಿಸುತ್ತ ಜನತೆಯಲ್ಲಿ ನ್ಯಾಯ ಬುದ್ಧಿಯನ್ನು ಜಾಗ್ರತಗೊಳಿಸು ತ್ತಿದ್ದರು. ಸ್ವಯಂ ಪೋಷಣೆ, ಸ್ವಾವಲಂಬನೆಗಳಂತೂ ಜನತೆಯ ಜೀವಾಳ ವಾಗಿದ್ದುವು.

ಜಗನ್ನಿಯಾಮಕನೇ, ಜಗದುತ್ಪತ್ತಿಯ ಕಾಯಕಮಾಡಿ ಕಾಯಕವೇ ಕೈಲಾಸವೆಂಬದನ್ನು ತೋರಿಸಿ ಕೊಟ್ಟಾಗ, ಸಮಾಜದ ಘಟಕಗಳಲ್ಲೊಬ್ಬ ನಾದ ಯಾವ ವ್ಯಕ್ತಿಯೂ ಕಾಯಕವಿಲ್ಲದೇ ಜೀವಿಸಲಾಗದೆಂದು ಬಸವಣ್ಣ ನವರ ಕಟಾಕ್ಷವಿತ್ತು. 'ಜಗದ ಹಂಗಿಗರು ಜಂಗಮರು' ಎಂದು ಹೇಳಿ ಕೇವಲ ಆತ್ಮಜ್ಞಾನದಿಂದ ವೈಯಕ್ತಿಕ ಉನ್ನತಿ ಬಯಸುವವರು ಕೂಡ ಕಾಯಕ ವಿಲ್ಲದೇ ಸಮಾಜಕ್ಕೆ ಭಾರನಾಗಬಾರದಾಗಿ ನೋಡಿಕೊಂಡರು. ತನ್ನ ತಾನರಿ ತರೆ ತನ್ನರಿವೆಗುರು, ಸ್ವಯಂಮನ್ಯಗುರುವಿಗಿಂತಲೂ ನಿನ್ನನ್ನು ನೀನು ಅರಿ ತುಕೋ ಆ ನಿನ್ನರಿವೇ ನಿನಗೆ ಗುರುವಾಗಿ ನಿಲ್ಲುವದಾಗಿ ಧೈರ್ಯವನ್ನು ತುಂಬಿ ದರು. ಪಾಠಸಾಲೆಯಂತಿದ್ದ ಸೃಷ್ಟಿ ರಚನೆಯಲ್ಲಿ ಪ್ರತ್ಯಕ್ಷ ಪ್ರಮಾಣಗಳಿರು

ವಾಗ ಪುಸ್ತಕ ಪ್ರಮಾಣಗಳ ಮೋಹವನ್ನು ತಡೆಹಿಡಿದರು. "ಬುಡಕ್ಕೆ ನೀರೆರೆದರೆ ಮೇಲೆ ಪಲ್ಲಿಸಿವಿತ್ತು ನೋಡಾ" ನುಡಿಯಿಂದ ಮೇಲು ಮೇಲಿನ ಸುಧಾರಣೆಗಳಿಂದೇನೂ ಸಾಧಿಸಲಾರದೆಂಬದನ್ನು ಸ್ಪಷ್ಟಗೊಳಿಸಿದರು. ಮರದ ಬಾಯಿ, ಬೇರು. ಬೇರಿಗೆ ನೀರೆರೆಯದೇ ಟೊಂಗೆಗಳ ಮೇಲೆ ನೀರು ಸುರುವಿದರೆ ಮರ ಫಲಿಸಲಾರದು. ಸಮಾಜದ ಬೇರಿಗೆ ಅಂದರೆ ಪ್ರಜಾವರ್ಗಕ್ಕೆ ಆತ್ಮವಿಕಾಸದ ನೈಜಶಕ್ತಿಯನ್ನು ಕೊಡದೆ ಯಾವ ಸಮಾಜದಲ್ಲಿಯೂ ಪ್ರಸನ್ನತೆ ಬೆಳೆದು ಬರಲಾರದು. ಸಮತೆ, ಬಂಧುಭಾವ, ಸ್ವಾತಂತ್ರ್ಯಗಳ ವಿಕಾಸದಲ್ಲಿ ಅಡ್ಡ ಬರಬಹುದಾದ ಯಾವ ತೊಂದರೆಗಳೂ ಇಲ್ಲದಂತೆ ಮಾಡಿ, ಶಾಸನ ಸಂಸ್ಥೆಯ ಅವಶ್ಯಕತೆಯನ್ನೇ ನಿರ್ನಾಮಗೊಳಿಸಿ ಶುದ್ಧವಾದ ಸಮಾಜಸತ್ತೆಯ ವಾಸ್ತವದಾರಿಯಿಂದ ಅ-ರಾಜ್ಯ ಅವಸ್ಥೆಗೆ ನಿಲುಕುವ ಶಕ್ತಿ ಬರುವಂತೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಬಸವಣ್ಣನವರು ಸೂತ್ರಬದ್ಧತೆಯನ್ನಿಟ್ಟಿದ್ದರೆಂಬದು ಸಹಜವಾಗಿಯೇ ತಿಳಿಯುವದು. ಹೀಗೆ ವಚನಧರ್ಮದಿಂದ ಅರ್ಥಾತ್ ಅಹಿಂಸಾತ್ಮಕ ಸಮಾಜರಚನೆಯಿಂದ ಶುದ್ಧ ಸಮಾಜಸತ್ತೆಯ ರಾಷ್ಟ್ರವಾಗಿ ಇನ್ನೊಂದು ರಾಷ್ಟ್ರದ ಆಕ್ರಮಣಕ್ಕೆ ಅನುವಿಲ್ಲದಂತೆ ಮಾಡಿ, ಸುವ್ಯವಸ್ಥೆ ಕಾಯ್ದುಕೊಳ್ಳುವದಲ್ಲದೇ ಅನ್ಯರಾಷ್ಟ್ರಗಳ ಮೇಲೆ ಆಕ್ರಮಣ ಮಾಡುವ ದುಷ್ಟಬುದ್ಧಿಗೂ ಅನುವಿಲ್ಲದಂತೆ ಮಾಡಲಾಗಿತ್ತು. ತನ್ನ ಮೇಲೆ ಇನ್ನೊಬ್ಬನ ಅನ್ಯಾಯ ಮಾಡಲಾಗದೆಂಬ ಬಯಕೆಯಲ್ಲಿ, ಇನ್ನೊಬ್ಬನ ಮೇಲೆ ತಾನೂ ಅನ್ಯಾಯ ಮಾಡಲಾಗದೆಂಬ ಆದರ್ಶದ ಕಡೆಗೆ ಕಣ್ಣುಮುಚ್ಚಿದರೆ ಶುದ್ಧತೆ ಎಂದಿಗೂ ಉಳಿಯದು. ನಿಜವಾದ ಯೋಧ ಜನಾಂಗದ ಲಕ್ಷಣಗಳು ವಚನಧರ್ಮದ ಮೂಲತತ್ವಗಳಾಗಿವೆ.

ಸಾಮಾಜಿಕ ಸಮತೆಯು, ಬಸವಣ್ಣನವರ ಕ್ರಾಂತಿಯ ಮಧ್ಯಬಿಂದುವಾಗಿತ್ತು. ಸಮಾಜದಲ್ಲಿನ ಸ್ವಾಭಾವಿಕವಾದ ಭೇದಗಳಿಗೆ ಎಲ್ಲಿಯೂ ಪ್ರತ್ಯೇಕವಾದ ಮಹತ್ವಕೊಡುವ ಅಗತ್ಯವಿರುವದಿಲ್ಲ. ಮಾತ್ರ, ಸ್ವಾಭಾವಿಕ ಭೇದಗಳಿಂದಲೇ ರೂಢಿಜನ್ಯಜಾತಿ ಭೇದಗಳಿಗೆ ಹಾಗೂ ಧನದೌಲತ್ತಿನಿಂದ ಬರುವ ವರ್ಗ ಕಲ್ಪನೆಗಳಿಗೆ, ಮೂರ್ತಸ್ವರೂಪ ಬಂದಿರುವದಿಲ್ಲವೆಂಬದು ಗಮನಾರ್ಹವಾಗಿದೆ. ಸಮಾಜದೊಳಗಿನ ಪ್ರತಿಯೊಂದು ವ್ಯಕ್ತಿಯೂ ಸ್ವಪ್ರಯತ್ನದಿಂದ ತನ್ನಲ್ಲಿದ್ದ ಗುಣಗಳ ಪೂರ್ಣವಿಕಾಸ ಮಾಡಿಕೊಳ್ಳುವ ಮಾರ್ಗದಲ್ಲಿ ಅವನ

ಜಾತಿ, ಕುಲ, ಧರ್ಮಗಳು ಅಡ್ಡ ಬರಲಾಗದು. ಅರಸನ ಮಗ ಜಾಣನಿರಲಿ ಇಲ್ಲದಿರಲಿ ಅರಸನೆಂದೇ ಮುಂದೆ ಬರುತ್ತಾನೆ. ಬಡವನ ಮಗ ಎಂಥ ಜಾಣನಿದ್ದರೂ ಅದರ ವಿಕಾಸಕ್ಕವನಿಗೆ ಮಾರ್ಗವಿಲ್ಲ. ಇಂತಹ ಸ್ಥಿತಿಯೇ ಸಮಾಜದಲ್ಲಿನ ವಿಷಮತೆಗೆ ಕಾರಣವಾಗಿರುತ್ತದೆ. ಈ ವಿಷಮತೆ ಎಂದರೆ ಬ್ರಾಹ್ಮಣನ ಮಗ ಬ್ರಾಹ್ಮಣನೆಂದು ಶ್ರೇಷ್ಠ, ಶೂದ್ರನ ಮಗ ಶೂದ್ರನೆಂದು ಕನಿಷ್ಟ ಎಂಬ ಶ್ರೇಷ್ಠ ಕನಿಷ್ಟ ಭಾವನೆಯು ಬಾಡವೇ ಆಗಿರುತ್ತದೆ. ಹಾರುವ ಮೊದಲಾಗಿ ಶ್ವಪಚ ಕಡೆಯಾಗಿ ಎಲ್ಲರೂ ಒಂದೆ ಸ್ಥಾನದಲ್ಲಿ ನಿಂತು ಅವರವರ ಕರ್ತೃತ್ವಕ್ಕೆ ಯೋಗ್ಯ ಅವಕಾಶ ಸಿಕ್ಕು ತಮತಮಗುಚಿತಸ್ಥಾನಕ್ಕೆ ನಿಲುಕುವಂತೆ ಬಸವಣ್ಣನವರ ರಚನೆಯಲ್ಲಿ ಮುಕ್ತದ್ವಾರವಿತ್ತು.

ಕೇವಲ ವ್ಯಕ್ತಿವಿಕಾಸಕ್ಕೆ ಮಾತ್ರ ಅವಕಾಶವಿದ್ದು ಬಂಧುಭಾವವಿಲ್ಲದಿದ್ದರೆ ಸಮಾಜಕ್ಕೆ ಸ್ವಾತಂತ್ರ್ಯೋಪಭೋಗ ಶಾಂತಿಯಿಂದ ಲಭಿಸದು. ನೈಸರ್ಗಿಕವಾದ ವ್ಯಕ್ತಿವಿಕಾಸದಲ್ಲಿ ಸ್ವಾಭಾವಿಕವಾಗಿಯೇ ಬರಬಹುದಾದ ವಿಷಮತೆಗಳನ್ನು ಬಂಧುಭಾವದಿಂದ, ಪರಸ್ಪರ ಸಹನೆಯಿಂದ ಬಗೆ ಹರಿಸಿಕೊಳ್ಳುವ ಭಾವ ಬೆಳೆದು ಬರಬೇಕು. ಅಂದರೇನೇ ಆ ಸಮಾಜವು ಆದರ್ಶವಾಗಿ ಜಗದೆದುರು ನಿಲ್ಲಲು ಸಮರ್ಥವಾಗುವದು. ಅದನ್ನು ಬಿಚ್ಚಿ ಹೇಳುವಂತೆಯೇ ೧೨ನೆಯ ಶತಮಾನದಲ್ಲಿಯೂ ಕೂಡ ಯುಗಪ್ರವರ್ತಕರ ಹೆಸರು "ಬಸವೇಶ್ವರ" "ಬಸವಪ್ರಭು" ಎಂಬದಾಗಿ ವಿಶೇಷ ಪರಿಚಯವಾಗದೇ 'ಬಸವಣ್ಣ'—ವೆಂಬ ವಿಶ್ವಬಂಧುತ್ವದ ದ್ಯೋತಕ ಚಿನ್ಹವೇ ಇಂದಿನವರೆಗೂ ಜನಜಂಗುಳಿಯ ಕಿವಿಯಲ್ಲಿ ನಾದಗೊಡುತ್ತ ಬಂದಿದೆ.

ಕರ್ನಾಟಕದ ರಾಜಕೀಯ, ಸಾಮಾಜಿಕ, ಧಾರ್ಮಿಕ ಎಲ್ಲ ದೃಷ್ಟಿಯಿಂದಲೂ ಬಸವಣ್ಣನವರು ಸಾಗಿಸಿದ ಮಂದಕ್ರಾಂತಿಯೇ ಮುಂದಿನ ಉತ್ಕ್ರಾಂತಿಗೆ ಕಾರಣವಾಯಿತು. ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯದ ಪತನದಿಂದೀಚೆಗೆ ರಾಜ್ಯಸಂಸ್ಥೆಯು ಅನ್ಯರ ಪಾಲಾದದ್ದು ತಿರುಗಿ ಜನತೆಯ ಕೈಲಿ ಈವರೆಗೂ ಸಿಕ್ಕಿಲ್ಲ. ಆದರೂ ಶುದ್ಧ ಸಮಾಜಸತ್ತೆಯ ಕಡೆಯು ಎಳೆತ, ಹಾಗೂ ಆತ್ಮಬಲದ ತೇಜ, ಬೂದಿ ಮುಚ್ಚಿದ ಕೆಂಡದಂತೆ ಜನತೆಯ ಹೃದಯಾಂತರಾಳದಲ್ಲಿ ಹುದುಗಿಕೊಂಡಿದೆ. ಭಾರತದ ಇನ್ನುಳಿದ ಪ್ರಾಂತಗಳ

ಕೆಳವರ್ಗದವರ ಸಂಸ್ಕೃತಿಗೂ ಕನ್ನಡನಾಡಿನ ಕೆಳವರ್ಗದ ಸಂಸ್ಕೃತಿಗೂ ಇರುವ ಅಂತರವೇ ಆ ಮಾತನ್ನು ಎತ್ತಿ ತೋರಿಸುತ್ತದೆ.

ಅಂದಿನ ಪರಿವರ್ತನಗೊಂಡ ಯುಗದಿಂದ ಮತ್ತೆ ಪರಿವರ್ತನವಾಗಬೇಕಾಗಿರುವ ಇಂದಿನ ಯುಗಕ್ಕೆ ಬರೋಣ. ಇಂದಿನ ಕರ್ನಾಟಕದ ಸ್ಥಿತಿಗತಿಗಳನ್ನವಲೋಕಿಸೋಣ. ಅಂದಿನ ಪರಿವರ್ತನೆಯಲ್ಲಿ ಉಳಿದ ಅಪೂರ್ಣತೆಯನ್ನು ಇಂದು ಹೇಗೆ ತುಂಬಿಕೊಳ್ಳಬಹುದೆಂಬುದಕ್ಕೆ ಯುಗಪ್ರವರ್ತಕ ಬಸವಣ್ಣನವರ ಕ್ರಾಂತಿತಂತ್ರವು ಹೇಗೆ ದಾರಿತೋರಿಸಬಹುದೆಂಬದು ತಿಳಿಯುವದು.

ಕನ್ನಡನಾಡು ೧೨ನೆಯ ಶತಮಾನದಲ್ಲಿ ಎಲ್ಲಿ ಇದ್ದಿತೋ ಅಲ್ಲಿಯೇ ಇದ್ದರೂ, ಕನ್ನಡ ಸಮಾಜರಚನೆ ಮಾತ್ರ ಬಸವಣ್ಣನವರ ಕಾಲದ ಹಿಂದಿನ ಸ್ಥಿತಿಗಿಂತ ತೀರ ದೈನ್ಯಾವಸ್ಥೆಗಿಳಿದದ್ದು ಸುಳ್ಳಲ್ಲ. ಇಂದಿನ ಸಂಘಟಿತ ಸ್ವಾರ್ಥಕ್ಕೆ ಬೆಂಬಲವಾಗಿ ನಿಂತ ಸಂಘಟಿತ ಶಸ್ತ್ರಬಲವೆಂದರೆ ಶಾಸನ ಸಂಸ್ಥೆ ಎನ್ನುತ್ತಿದ್ದರೆ, ವಸ್ತುವಿನಿಮಯದ ಮಧ್ಯದಲ್ಲಿನ ಸುಲಿಗೆಗೆ ನ್ಯಾಯವಾದ ವ್ಯಾಪಾರವೆನ್ನುತ್ತಿದ್ದರೆ, ಅಂಜಿಕೆ, ಆಶೆಗಳಿಂದ ಜನತೆಯ ಭಾವನೆಯನ್ನು ಸುಲಿಯುವದಕ್ಕುಪಯೋಗವಾಗುತ್ತಿರುವ ವ್ರತವೈಕಲ್ಯಗಳಿಗೆ ಧರ್ಮವೆನ್ನುತ್ತಿದ್ದರೆ ಇಂತಹ ಸಮಾಜರಚನೆ ಕರ್ನಾಟಕದಲ್ಲಿ ಹಿಂದೆ ಆಗಿಲ್ಲ ಮುಂದೆ ಆಗುವದಿಲ್ಲವೆಂದು ದೃಢವಾಗಿ ಹೇಳಬಹುದು. ಯಾವ ಕ್ಷೇತ್ರದಲ್ಲಿ ನೋಡಿದರೂ ಮುಸುಕು, ಮರೆಗಳ ಸುಳಿದಾಟವೇ ಹೆಚ್ಚಾಗಿದೆ. ಭಾಷೆ, ಮನದ ಮಾತನ್ನು ಬಚ್ಚಿಡುವ ಸಾಧನವಾಗದೇ ಬಚ್ಚಿಡುವ ಸಾಧನವಾಗುತ್ತಿದೆ. ಶಿಕ್ಷಣ, ಗುಲಾಮಗಿರಿಯ ಸಂಸ್ಕೃತಿಯನ್ನು ಕಾಯುವದಕ್ಕಾಗಿ ಗುಲಾಮರನ್ನು ಸಿದ್ಧಗೊಳಿಸುವ ಯಂತ್ರವಾಗಿದೆ. ಜಾತಿ, ಕುಲಗಳು ಕನ್ನಡಕುಲಕ್ಕೇ ಕೊಡಲಿಯಾಗಿ ನಿಂತಿವೆ. ಇವೆಲ್ಲಕ್ಕೂ ಕಳಸವನ್ನಿಟ್ಟಂತೆ ಪರಕೀಯಸತ್ತೆಯು ಧರ್ಮದಲ್ಲಿ ಕೈ ಹಾಕಲಾರೆನೆನ್ನುತ್ತ ಹೃದಯದಲ್ಲಿಯೇ ಕೈ ಹಾಕಲೆಳಸುತ್ತಿದೆ. ಹೊಟ್ಟೆಯ ಹಿಟ್ಟಿಗಾಗಿ, ಗೇಣು ಬಟ್ಟೆಗಾಗಿ ರಟ್ಟೆಯ ಶಕ್ತಿಯನ್ನು ಸಿಕ್ಕಸಿಕ್ಕಂತೆ ಮಾರಿಕೊಂಡು ಜೀವಿಸುವ ದುರ್ದೆಶೆ ಬಂದಿದೆ. ನೈಸರ್ಗಿಕ ಅವಶ್ಯಕತೆಗಳಾದ ಅನ್ನ, ವಸ್ತ್ರ, ವಸತಿಗಳಿಗೂ ತುಟ್ಟಿಯಾಗಿ ಭಿಕಾರಿಗಳಂತೆ ಜೀವಿಸುವರ ಸಂಖ್ಯೆ ದಿನದಿನಕ್ಕೆ ಬೆಳೆಯತ್ತಲಿದೆ, ಒಂದೆಡೆ ಧನಮತ್ತತೆ, ಇನ್ನೊಂದೆಡೆ ದರಿದ್ರರ ಅತೃಪ್ತತೆ ನಾಡಿನ ತುಂಬೆಲ್ಲ ತಾಂಡವ ನಡೆಯಿಸಿವೆ. ಈ ಪರಿಸ್ಥಿತಿಯು ಕನ್ನಡ

ನಾಡಿಗೆ ಏಕೆ ಬಂದಿತು? ಅದರ ನಿವಾರಣೆಯಲ್ಲಿನ ಸಾಧನಗಳಾವು ಎಂಬದನ್ನು ನೋಡಬೇಡವೇ?

ಅವರವರ ಪುಣ್ಯಾ ಪಾಪಗಳಿಂದ, ಕೃತಕರ್ಮದಿಂದ ಪಡೆದದ್ದನ್ನನುಭವಿಸುತ್ತಾರೆನ್ನುವ ಸಮಾಧಾನದಲ್ಲಿನ ಜೊಳ್ಳುತನ ಇಂದು ಪ್ರತಿಯೊಂದು ಕನ್ನಡ ಪಿಳ್ಳೆಗೂ ತಿಳಿದಿದೆ. ದರಿದ್ರತನವು ನೈತಿಕ ಅಧಃಪತನಕ್ಕೆ ಕಾರಣವಾಗುವದು ಎಷ್ಟು ನಿಜವೋ, ಧನಿಕರಲ್ಲಿ ಧನಿಕನೂ ಕೂಡ ವಿಶಿಷ್ಟ ಪರಿಸ್ಥಿತಿಯಲ್ಲಿ ಸಿಕ್ಕಾಗ ಅವನಲ್ಲಿಯೂ ನೈತಿಕಹ್ರಾಸವಾಗುವದು ಅಷ್ಟೇ ಸತ್ಯವಿದೆ. ಈ ವಿಷಮತೆಯು ಸಮಾಜದಲ್ಲಿ ಬಂದದ್ದು ಯಾಕೆ ಎಂಬದಕ್ಕೆ ಭಾರತ ವಿಧಾತರಾದ ಮಹಾತ್ಮಾ ಗಾಂಧಿಯವರ ಮಾತಿನಲ್ಲಿಯೇ ಚೆನ್ನಾಗಿ ತಿಳಿದುಕೊಳ್ಳಬಹುದು. "ನಿಸರ್ಗದ ನಿರ್ದಯದಿಂದ ಈ ಪರಿಸ್ಥಿತಿಯು ನಿರ್ಮಾಣವಾದದ್ದಿರದೆ, ಕೇವಲ ಹಿಂದುಸ್ಥಾನದ್ದಷ್ಟೇ ಅಲ್ಲದೇ ಅಖಿಲ ಮಾನವ ಕುಲದ ಹಿತಕ್ಕಾಗಿ ಯಾವ ಅಮಾನುಷ ಪದ್ಧತಿಯನ್ನು ನಷ್ಟಗೊಳಿಸುವದವಶ್ಯವಾಗಿದೆಯೋ ಅಂಥ ದುಷ್ಟ ಪದ್ಧತಿಯಿಂದ ಅದು ನಿರ್ಮಾಣವಾಗಿದೆ."

ಭಾರತದಲ್ಲಿಯೇ ನಿರ್ನಾಮವಾಗಲವಶ್ಯವುಳ್ಳ ದುಷ್ಟ ಪದ್ಧತಿ ಬೆಳೆದು ನಿಂತಿರುವಾಗ ಭಾರತದ ಒಂದು ಘಟಕವಾದ ಕರ್ನಾಟಕವು ಅದರಿಂದ ಹೊರಗಿರಲು ಸಾಧ್ಯವಿಲ್ಲ. ಅದರ ನಿವಾರಣೋಪಾಯದಲ್ಲಿ ಕರ್ನಾಟಕವು ಹೆಚ್ಚು ಭಾಗವಹಿಸಿದಂತೆ ಶಕ್ತಿವಂತವಾಗಿ ತನ್ನ ಉದ್ಧಾರ ಮಾರ್ಗವನ್ನು ಸುಗಮ ಮಾಡಿಕೊಳ್ಳಬಲ್ಲದು. ಒಬ್ಬ ವ್ಯಕ್ತಿಯು ಯಾವ ಪಾಪಕ್ಕೂ ಹೋಗದಿದ್ದರೂ ಸಮಾಜದಲ್ಲಿನ ಅನ್ಯಾಯಗಳ ಕಡೆಗೆ ದುರ್ಲಕ್ಷ್ಯ ಮಾಡುವದರಿಂದ ಅನೇಕ ಅನ್ಯಾಯಗಳಿಗೆ ತಲೆಗೊಡಬೇಕಾಗುತ್ತಿರುವಂತೆ, ಕನ್ನಡನಾಡು ಯಾವ ಪಾಪದಲ್ಲಿಯೂ ಪಾಲುಗಾರವಲ್ಲದಿದ್ದರೂ ಇಡೀ ರಾಷ್ಟ್ರದಲ್ಲಿ ನಡೆದ ದುಷ್ಟಪದ್ಧತಿಗಳ ಕಡೆಗೆ ದುರ್ಲಕ್ಷಿಸಿದರೆ ತನ್ನ ಪ್ರಗತಿ ಪಥದಲ್ಲಿಯೂ ಅಡ್ಡಗಾಲುಗಳು ಬರದಿರವು.

ಆಳವಾಗಿ ಬೇರುಬಿಟ್ಟು ನಿಂತ ಪರಕೀಯಸತ್ತೆಯ ಕಪಿಮುಷ್ಟಿ ಸಡಿಲಾದ ದಿನ ಸ್ವಾತಂತ್ರ್ಯ ಲಭಿಸಬಹುದೆನ್ನೋ ನಿಜವಾದರೂ ಸ್ವಾತಂತ್ರ್ಯವೆಂದರೆ ಸ್ವೈರ ಸ್ವಾತಂತ್ರ್ಯವಲ್ಲವೆಂಬದನ್ನು ತತ್ಪೂರ್ವದಲ್ಲಿಯೇ ಲಕ್ಷದಲ್ಲಿಡುವದು ಅವಶ್ಯವಿದೆ. ಇಲ್ಲದೇ ಹೋದರೆ ಸತ್ತಾಧಾರಿಗಳ ಅದಲು ಬದಲು ಮಾತ್ರ ಆಗಿ ಪ್ರಜರ

ಪ್ರಚಲಿತ ಸ್ಥಿತಿಯು ಯಥಾಪ್ರಕಾರ ಉಳಿದುಬಿಡಬಹುದು. ಅಸ್ತಿತ್ವದಲ್ಲಿದ್ದ ಶಾಸನಸಂಸ್ಥೆಯನ್ನು ಮೊದಲಿನ ಕ್ರೂರ ಸ್ಥಳದಿಂದ ಕಿತ್ತಿ ತೆಗೆದು ಶಾಂತಿಮಯ ಸಮಾಜರಚನೆಯ ಬೆಂಬಲಕ್ಕೆ ನಿಲ್ಲಿಸಬೇಕಾದರೆ ಮೊದಲೇ ಇನ್ನೊಂದು ಯೋಗ್ಯಸ್ಥಿತಿ ಸಮಾಜಕ್ಕೆ ಬಂದಿರಬೇಕಿರುತ್ತದೆ. ಅದು ಪರಕೀಯ ಸತ್ತೆಯನ್ನು ಕಿತ್ತಿ ಒಗೆದ ಮೇಲೆ ಆಗುವ ಘಟನೆಯಾಗದೇ ಮೊಲಿನಿಂದಲೇ ಆದಿಕ್ಕಿನಲ್ಲಿ ಪ್ರಯತ್ನ ನಡೆದಿದ್ದರೆ ತೀವ್ರವಾಗಿ ಸ್ವತಂತ್ರ್ಯ ಲಭಿಸುವದಲ್ಲದೇ, ಪಡೆದ ಸ್ವತಂತ್ರ್ಯದಿಂದ ಸಮಾಜದ ಸ್ವಾಭಾವಿಕ ವಿಕಾಸಕ್ಕೂ ಅನುವಾಗುವದು ಅದಕ್ಕಾಗಿಯೇ ರಾಜಕೀಯ ಆಂದೋಲನದೊಂದಿಗೆ ನಾಡಿನ ಸಮಾಜರಚನೆಯ ಶುದ್ಧತೆಗೆ ಸಹಾಯಕವಾಗುವಂತೆ ಸಾಂಸ್ಕೃತಿಕ ಚಟುವಟಿಕೆಗಳೂ ಸಾಗಿರುತ್ತವೆ. ಕರ್ನಾಟಕದಲ್ಲಿ ಈ ದಿಸೆಯ ಪ್ರಯತ್ನಗಳು ತೀರ ಮಂದಗತಿಯಿಂದ ಸಾಗಿರುವದಕ್ಕೆ ಇಂದಿನ ಕನ್ನಡನಾಡಿನಲ್ಲಿನ ಸಮಾಜರಚನೆ ಸರಿಯಾಗಿಲ್ಲದ್ದೇ ಕಾರಣವಾಗಿರುತ್ತದೆ

ಕರ್ನಾಟಕವು ಕನ್ನಡಿಗರದು. ಎಂದಿಗೂ ಕನ್ನಡಿಗರದೇ. ಆದರೆ ಕನ್ನಡಿಗರೆಂದರೆ ಪಟ್ಟಣಗಳಲ್ಲಿ ವಾಸವಾಗಿದ್ದ ಕೆಲ ಸುಶಿಕ್ಷಿತರದೇ? ಹಳ್ಳಿಗಳಲ್ಲಿ ವಾಸಿಸುತ್ತಿರುವ ಬಹು ಸಂಖ್ಯಾಕರದೇ? ಅರಾಷ್ಟ್ರೀಯ ವಾದದ ಸಂಕುಚಿತತನವನ್ನು ಬಿಟ್ಟು ವಿಚಾರಿಸಿದಾಗ ಕರ್ನಾಟಕವು, ನಾಡಿನಲ್ಲಿರುವ ೬೭ ಪಟ್ಟಣಗಳದಾಗಿರದೇ ೭೭೫೦ ಹಳ್ಳಿಗಳದಾಗಿರುತ್ತದೆಂಬದು ನಿರ್ವಿವಾದವೆನ್ನಿಸದಿರದು. ಕರ್ನಾಟಕವು ಏಕೀಕೃತವಾಗುವದಾದರೆ, ಏಕೀಕೃತ ನಾಡಿನ ಬಹುಜನರ ರಾಜ್ಯ ಅಲ್ಲಿ ಸ್ಥಾಪಿತವಾಗಬಹುದಾದರೆ ಮಾತ್ರ ಸಮಗ್ರ ಕರ್ನಾಟಕದ ಜನಮನದಲ್ಲಿ ಜಾಗೃತಿಯಾಗಿ ಏಕೀಕರಣವು ಕ್ಷಣದಲ್ಲಿ ಸಾಧಿಸುವದು. ವಂಗ ಭಂಗದಂತಹ ಒಂದು ಪ್ರಾಂತದ ಸಮಸ್ಯೆ ಅಖಿಲ ಭಾರತದ ಸಮಸ್ಯೆಯಾಯಿತಾದರೆ ಛಿನ್ನವಿಚ್ಛಿನ್ನವಾದ ಕನ್ನಡ ನಾಡಿನ ಸಮಸ್ಯೆಯ ಬಗ್ಗೆ ನಮ್ಮ ನಾಡಿನಲ್ಲಿಯೇ ಉತ್ಸಾಹವಿಲ್ಲದ ಕಾರಣವೇನು? ಮೊದಲೇ ನಿಶ್ಶಕ್ತವಿದ್ದ ಜನತೆಯಲ್ಲಿ ಇನ್ನಷ್ಟು ಒಡಕನ್ನುಂಟು ಮಾಡುವ ಮಾತು ಬಂದಾಗ ಬಂಗಾಲದ ಬಗ್ಗೆ ಭಾರತೀಯರ ಲಕ್ಷವೆಳೆಯಿತಲ್ಲದೇ ಒಂದು ಪ್ರಾಂತದ ಇದ್ದ ಸ್ಥಿತಿಯ ಸುಧಾರಣೆಗಾಗಿ ಮೂಲಸುಧಾರಣೆಯನ್ನೇ ಕಾಣದೆ ಕುಳಿತ ದೇಶ ಏನು ಮಾಡಬಲ್ಲದು? ಸಾಮಾಜಿಕ ಸಮಸ್ಯೆಗಳನ್ನು ಸಾಮಾಜಿಕ ಹಿತದ

ದೃಷ್ಟಿಯಿಂದ ನೋಡಬಹುದಲ್ಲದೇ ಒಬ್ಬರ ಹಿತದ ದೃಷ್ಟಿಯಿಂದ ಸಾಮಾಜಿಕ ಸಮಸ್ಯೆಗಳನ್ನು ನೋಡಲಾಗುವದಿಲ್ಲ. ಕನ್ನಡನಾಡಿನ ಉದ್ಧಾರದ ಹೊರತು ಭಾರತದ ಉದ್ಧಾರ ಸಾಧ್ಯವಿಲ್ಲ. ಭಾರತದ ಉದ್ಧಾರದ ಹೊರತು ಜಗತ್ತಿಗೆ ಶಾಂತಿ ಲಭಿಸಲು ಸಾಧ್ಯವಿಲ್ಲವೆಂಬದು ನಿಸ್ಸಂಶಯ. ಆದರೆ ಉದ್ಧಾರವೆಂದರೆ ಬಹುಜನ ಸಮಾಜದ ಉದ್ಧಾರವೆಂಬದನ್ನು ಮರೆಯುವಂತಿಲ್ಲ

ಏನು ಮಾಡಿದರೆ ಕರ್ನಾಟಕದ ಈ ಸಮಸ್ಯೆ ಸಡಿಲಾಗುವದೆಂದು ಕೇಳಿದಾಗ ಅನೇಕ ಮೂಲೆಗಳಿಂದ ಅನೇಕ ಉತ್ತರಗಳು ಬರಬಹುದು. ಕನ್ನಡ ಸಾಹಿತ್ಯ ಬೆಳೆಯದೇ ನಾಡಿನ ಬೆಳವಣಿಗೆ ಸಾಧ್ಯವಿಲ್ಲವೆಂದೊಬ್ಬರೆಂದರೆ, ಕರ್ನಾಟಕದ ಮೂಲೆಮೂಲೆಗಳಲ್ಲಿ ಶರೀರ ಸಂವರ್ಧನೆಯ ಸಂಸ್ಥೆಗಳುದ್ಭವಿಸದೇ ನಾಡಿನೇಳ್ಗೆ ಸಾಧ್ಯವಿಲ್ಲವೆಂದಿನ್ನೊಬ್ಬರು ಹೇಳಬಹುದು. ನಿಜವಾದರೀತಿ ಎಂದರೆ, ನಾಡಿನಲ್ಲಿಯ ಬಹುಜನ ಸಮಾಜದ ಸಹಜ ವಿಕಾಸವು ಸಾಧಿಸದೇ ಯಾವ ಮಾತೂ ಸಾಧಿಸಲಶಕ್ಯ.

ಬಹುಜನ ಸಮಾಜದ ಸ್ಥಿತಿಯು ತಂತಾನೆ ಸುಧಾರಿಸುತ್ತಿರುವದಿಲ್ಲ. ಅದರ ನೇತೃತ್ವಕ್ಕಾಗಿ ಜಾಣರ ಅವಶ್ಯಕತೆ ಇರುತ್ತದೆ. ಅಂಥ ಜಾಣರಿಂದಲೇ ಸಮಾಜದ ಕಲ್ಯಾಣದೊಂದಿಗೆ ನಾಡಿನ ಉನ್ನತಿಯೂ ಸಾಧಿಸುತ್ತಿರುತ್ತದೆ. ಈ ಮಾತು ನೂರಕ್ಕೊ ನಿಜ. ಮಾತ್ರ, ನೇತೃತ್ವಕ್ಕೆ ಬರುವ ಜಾಣರು ಸಮಾಜವನ್ನಾಳುವದಕ್ಕಾಗಿ ಬರದೇ ಸೇವೆ ಮಾಡುವದಕ್ಕಾಗಿ ಬಂದರೆ ಅವರ ಜಾಣತನ, ಸತ್ಯ ಸೃಷ್ಟಿಯಲ್ಲಿಳಿಯಬಹುದು. ಹೀಗಂದಾಕ್ಷಣ ಅಜ್ಞರಾದ ಬಹು ಸಂಖ್ಯಾಕರ ಕೈಲಿ, ಜಾಣರ ಜುಟ್ಟುವಿರಲೇಬೇಕೆಂದು ಅರ್ಥಮಾಡಲಾಗದು. ವೈದ್ಯವೃತ್ತಿಯ ಬಗ್ಗೆ ಅಜ್ಞಾನಿಯಾದ ವ್ಯಾಪಾರಿಯು ತನಗೆ ಬೇಕಾದ ವೈದ್ಯನನ್ನು ತಾನೇ ಆರಿಸುವದಿಲ್ಲವೇ? ಹಾಗೆಯೇ ಸಮಾಜವು ತನಗೆ ಬೇಕಾದ ಮುಂದಾಳುವನ್ನು ತಾನೇ ಆರಿಸುವದೆಂದರೆ ಬಹುಜನ ಜಾಣರಲ್ಲಿ ತನ್ನ ಸೇವೆಯನ್ನು ವಿಶ್ವಾಸದಿಂದ ಮಾಡಬಲ್ಲವರ ನೇತೃತ್ವವನ್ನೊಪ್ಪುವದಾಗಿದೆ. ಜಾಣನಿದ್ದವನು, ಸಂಪನ್ನನೂ ಇರುವದು ನಿಯಮವಿಲ್ಲದ್ದರಿಂದಲೇ ತನ್ನ ಕುತ್ತಿಗೆ ಕೊಯ್ಯಲಾರನೆಂಬ ವೈದ್ಯನನ್ನೇ ವ್ಯಾಪಾರಿಯು ಆರಿಸುವನು. ಹಾಗಿರದೇ ಸ್ವಯಂಪ್ರತಿಷ್ಠಿತ ಜಾಣರ ಸತ್ತೆಯು ಪ್ರಜಾಸತ್ತೆಯಾಗುವದಾದರೆ ಅದು ಅನಿಯಂತ್ರಿತ ವರ್ಗ ಸತ್ತೆಯಾಗಬಹುದಲ್ಲದೇ

ಶುದ್ಧ ಸಮಾಜಸತ್ತೆ ಆಗಲಾರದು. ಅದರಂತೆಯೇ ಬಹು ಸಂಖ್ಯಾಕರ ಸತ್ತೆ ಎಂದರೆ ಬಹುಸಂಖ್ಯಾಕ ಜಾತಿಯವರ ಸತ್ತೆಯಾದರೂ ಅದೂ ಕೂಡ ಅಲ್ಪ ಸಂಖ್ಯಾಕರ ದೃಷ್ಟಿಯಲ್ಲಿ ಅನಿಯಂತ್ರಿತ ಪಕ್ಷಸತ್ತೆಯೇ ಆಗಬಹುದು. ಈ ಎರಡೂ ಬಗೆಯ ಅನಿಯಂತ್ರಿತ ಸತ್ತೆಗಳು ಕರ್ನಾಟಕದಲ್ಲಿ ಸಂಧಿ ಸಿಕ್ಕಾಗೆಲ್ಲ ಮೂಗು ಮೇಲೆ ಮಾಡಬಯಸಿದರೂ ದೇಶಸೇವಕರ ತ್ಯಾಗಬಲದಿಂದ ಅವುಗಳಿಗೆ ಎಲ್ಲಿಯೂ ಸ್ಥಿರವಾದ ಸ್ಥಾನ ಸಿಕ್ಕಿಲ್ಲ.

ಈ ವಿಷಯವನ್ನು ಇನ್ನೊಂದು ದೃಷ್ಟಿಯಿಂದ ನೋಡುವ ವಿಚಾರಸರಣಿಯಿಂದಲೂ ಕರ್ನಾಟಕದ ಸಮಸ್ಯೆಗಳ ಮೇಲೆ ಹೆಚ್ಚು ಪ್ರಕಾಶ ಬೀಳುವಂತಿದೆ. "ಅವನು ಬ್ರಾಹ್ಮಣನಿದ್ದರೂ ಸಂಪನ್ನನಿದ್ದಾನೆ. ಇನ್ನೊಬ್ಬನು ಹರಿಜನನಿದ್ದರೂ ಜಾಣನಿದ್ದಾನೆ" ಅನ್ನುವ ರೂಢಿಯ ಮಾತುಗಳಿಂದಲೇ ಕರ್ನಾಟಕದ ರಾಷ್ಟ್ರೀಯ ಪ್ರಗತಿಗೆ ಕಂಟಕಪ್ರಾಯವಾಗಿರುವ ಬ್ರಾಹ್ಮಣ, ಬ್ರಾಹ್ಮಣೇತರ ಬಡಿದಾಟದ ಪೊಳ್ಳುತನ ಬಯಲಿಗೆ ಬರುವದು. ಇಲ್ಲಿ ನಿಜವಾದ ಜಾತೀಯ ಬಡಿದಾಟವಿರದೆ ಎರಡು ಪ್ರತಿಸ್ಪರ್ಧೀ ಮಧ್ಯಮ ವರ್ಗಗಳ—ಕೆಳವರ್ಗಗಳ ಸುಲಿಗೆಯ ಪಾಲುಗಾರಿಕೆಯಲ್ಲಿನ—ತೀವ್ರಸ್ಪರ್ಧೆಯಾಗಿರುತ್ತದೆ. ಕರ್ನಾಟಕದಲ್ಲಿ ೧೨ ನೇ ಶತಮಾನದಲ್ಲಿ ಆರ್ಯ, ಅನಾರ್ಯತ್ವದ ಸ್ಮೃತಿಮಾತ್ರವಿದ್ದಂತೆ ಇಂದಿನ ಕಾಲದಲ್ಲಿ ಜಾತಿಗಳ ಜಾತಿವಂತತನ ಎಂದೋ ನಿರ್ನಾಮವಾಗಿದೆ. ಎಲ್ಲಿ ನೋಡಿದಲ್ಲಿ ಕುದುರೆಯ ಜಾತಿಯ ಪ್ರಾಣಿಗಳು ಸಿಕ್ಕಬಹುದಲ್ಲದೇ ಜಾತಿವಂತ ಕುದುರೆಗಳ ದರುಶನವೇ ದುರ್ಲಭವಾಗಿದೆ. ಜನಾಂಗದ ಮಧ್ಯಮ ವರ್ಗವೆಂದು ಗಣಿಸಲಾಗುತ್ತಿದ್ದ ಬ್ರಾಹ್ಮಣ ವರ್ಗದಲ್ಲಿಯೇ ಕನಿಷ್ಟ ಮಧ್ಯಮ ವರ್ಗನಿರ್ಮಾಣವಾಗಿದೆ. ಸ್ವಾವಲಂಬನೆಯ ಸಹಾಯವೆಂದು ನಿರ್ಮಿತವಾದ ವೈದಿಕ, ಗೃಹಸ್ಥ ಸೂತ್ರವು ಸಾಲದಾಗಿ ಕಾಲು ಭಾಗವನ್ನಾದರೂ ಉಳಿಸಿಕೊಳ್ಳುವ ಸೂಚನೆಯ ಸುಳಿದಾಟ ನಡೆದಿದೆ. ಅಕಷ್ಟಾರ್ಜಿತ ಧನೋಪಭೋಗವು ಯಾರಿಗೂ ಸಾಧ್ಯವಾಗದಂತಹ ಸಮಾಜರಚನೆಯನ್ನು ಬೇಡುವವರು ಕಾಲು ಭಾಗವನ್ನಾದರೂ ಸಮಾಜಕ್ಕೆ ಭಾರರಾಗುವಂತಿಡಲು ಶಕ್ಯವಾಗುವುದೇ ?

ಬ್ರಾಹ್ಮಣೇತರರಲ್ಲಿನ ಮಧ್ಯಮ ವರ್ಗವು ಕೂಡ ಇದೇ ಧೋರಣೆಯಿಂದ ಮುಂದೆ ಸಾಗಿತು. ಮಧ್ಯಮ ವರ್ಗದಿಂದ ಸುಲಿಗೆಗೊಳ್ಳುವದೇ ಬಹುಜನ

ಸಮಾಜದ ಹಣೆಯು ಬರಹದಲ್ಲಿದ್ದರೆ ಅದೇ ವರ್ಗದಲ್ಲಿನ ನಾವೇಕೆ ಅದರ ಲಾಭ ಪಡೆಯಬಾರದೆಂದು, ಅದು ಬಹುಜನಸಮಾಜದ ಅಜ್ಞಾನದ ದುರ್ಲಾಭ ಪಡೆಯುತ್ತಿದ್ದ ಸುಲಿಗೆಗಾರರ ಕೂಡ ಸ್ಪರ್ಧೆ ಹೂಡಿತು. ಇದರಿಂದ ಒಂದು ಲಾಭ ಬಹುಜನಸಮಾಜಕ್ಕಾಯಿತು. ತಾನು ದುರ್ದೆಶೆಯನ್ನನುಭವಿಸುತ್ತಿದ್ದುದರ ಕಾರಣ ಅಳಿಯುದ ಸ್ಥಿತಿಯಿಂದ ಯಾರದೋ ಸುಲಿಗೆಗೆ ತಾನು ಈಡಾಗುತ್ತಿರುವೆನೆಂಬ ಅರಿವು ಬಂದಿತು. ಈ ಅರಿವಿನಿಂದ ಜನತೆಯಲ್ಲಿ ಜಾಗ್ರತೆಯಾದಂತೆ ಎರಡೂ ಪ್ರತಿಸ್ಪರ್ಧೀ ವರ್ಗಗಳು ಒಂದು ಒಪ್ಪಂದಕ್ಕೆ ಬಂದವು. ಅಂತಲೇ ಕರ್ನಾಟಕದಲ್ಲಿ ಇಂದು ಬ್ರಾಹ್ಮಣ, ಬ್ರಾಹ್ಮಣೇತರ ವಾದವು ಉಗ್ರತೆಯನ್ನು ಕಳೆದುಕೊಂಡಿದೆ. ಆದಕ್ಕೆ ನಾಡಿನಲ್ಲಿಯ ತ್ಯಾಗವೀರರ, ನಿಜವಾದ ಜನಸೇವೆಯ ಫಲವೂ ಕಾರಣವಾಗದೆ ಇಲ್ಲ.

ಕರ್ನಾಟಕವು ಇಂದು ಅನೇಕ ಸಮಸ್ಯೆಗಳನ್ನೆದುರಿಸಬೇಕಾದಂತಹ ಸ್ಥಿತಿಯಲ್ಲಿದ್ದರೂ ಜನತೆಯಲ್ಲಿ ಗುಪ್ತವಾಗಿದ್ದ ಕಲಿತನದ ಆಶೆಯ ಕಿರಣಗಳು ತಡೆ ತೊಂದರೆಗಳ ಮೋಡಗಳ ಮಧ್ಯದಿಂದ ತೂರಿಬರುತ್ತಿವೆ. ದೇಹರೂಪೀ ಕರ್ನಾಟಕವನ್ನು ಪಾಶ್ಚಿಮಾತ್ಯರ ಅಸುರೀ ಸಂಸ್ಕೃತಿಯು ಆವರಿಸಿಕೊಂಡಿದ್ದರೂ ಕನ್ನಡಿಗನ ಹೃದಯು, ಮಿದುಳು ಸ್ಥಿಮಿತದಲ್ಲಿವೆ. ಕನ್ನಡ ದೇವಿಯ ಸುಪುತ್ರರಾದ—ಸರ, ಕಂಬಳಿ ಅವರನ್ನೇ ನೋಡೋಣ. ಅವರ ದೇಹವು ಪಾಶ್ಚಿಮಾತ್ಯ ಉಡುಪಿನಿಂದ ಆಚ್ಛಾದಿತವಾಗಿದ್ದರೂ ಹೃದಯದ ಮೇಲೆ, ತಲೆಯ ಮೇಲೆ ಕನ್ನಡತನವೇ ಮೆರೆಯುತ್ತಿದೆ. ಮಂತ್ರಿಪದದಲ್ಲಿದ್ದಾಗಲೂ ತಲೆಯ ಮೇಲಿನ ಕನ್ನಡ ರುಮಾಲ, ಡಬರಿಯ ಹ್ಯಾಟಾಗಿ ಒಂದು ಕ್ಷಣವೂ ಪರಿವರ್ತನೆ ಪಡೆದಿಲ್ಲ.

ಭಾರತೀಯ ಮುಂದಾಳುಗಳು ಯಾರ ಕಣ್ಣಿನಿಂದ ಕರ್ನಾಟಕವನ್ನು ನೋಡುವರೋ ಅಂಥ ಕನ್ನಡ ಸಿಂಹರಾದ, ಗಂಗಾಧರರಾಯರ ಮೇಲೆ ಕನ್ನಡದ ಬಗ್ಗೆ ಅನಾಸ್ಥೆ ತೋರಿಸಿದ ಆರೋಪದ ಕಟುಟೀಕೆ ಮಾಡಿದ ವರ್ಗವೇ ಕರ್ನಾಟಕಕ್ಕೆ ರಾಜಕೀಯ ಸಂಸ್ಥೆಯಾದ ಕಾಂಗ್ರೆಸ್ಸಿನಿಂದ ಮಾನ್ಯವಾದ ಗಡಿನಾಡನ್ನು ಕೂಡ ಜಾಗೃತ ಸ್ಥಿತಿಯಲ್ಲಿಡಲು ಸಮರ್ಥವಾಗಿಲ್ಲ. ಆದರೂ ಕರ್ನಾಟಕದ ರಾಜಕೀಯ ಮುಂದಾಳುಗಳಿಂದ ಅಖಿಲ ಕನ್ನಡ ಕುಲದ ನಿಜಜಾಗೃತಿಯ ಕಾರ್ಯ ಅವ್ಯಾಹತವಾಗಿ ಸಾಗಿದೆ. ಕೇವಲ ಶುದ್ಧಜ್ಞಾನದ ಮಹತ್ವ ಬಣ್ಣಿ

ಸುತ್ತ, ನಮ್ಮ ಪೂರ್ವಜರ ಪರಾಕ್ರಮದ ನಿಷ್ಫಲ ಬಣ್ಣನೆಯಲ್ಲಿಯೇ ಕಾಲ ಕಳೆಯದೇ ಕನ್ನಡದ ಸಂಸ್ಕೃತಿ ಸಂರಕ್ಷಣೆ, ಸಂವರ್ಧನೆಯ ಪ್ರತ್ಯಕ್ಷ ವಿಧಾಯಕ ಕಾರ್ಯ ಕೈಕೊಂಡ ಕರ್ಮವೀರ ದಿವಾಕರರಂತಹರ ಸೇವೆಯ ಫಲವಾಗಿ ಕರ್ನಾಟಕವು ದ್ವಿಗುಣಿತ ಶಕ್ತಿಯಿಂದ ತನ್ನ ಆದರ್ಶದ ಕಡೆಗೆ ಧಾವಿಸುತ್ತಿದೆ.

ಯುದ್ಧೋತ್ತರ ಪುನರ್ರಚನೆಯ ಬಗ್ಗೆ ಇನ್ನುಳಿದ ನಾಡುಗಳು ಏನೇ ಆಶೆ, ಆಕಾಂಕ್ಷೆಗಳನ್ನಿಟ್ಟುಕೊಂಡಿದ್ದರೂ ಕನ್ನಡನಾಡಿನ ಪಾತ್ರ ಸ್ಪಷ್ಟವಾಗಿದೆ. ಉಚ್ಚ ನಾಗರಿಕತೆಯ, ಶ್ರೇಷ್ಠ ಆದರ್ಶವಾದ ಶುದ್ಧಸಮಾಜಸತ್ತೆಯನ್ನು ಪಡೆದು, ಯುಗಪ್ರವರ್ತಕ ಬಸವಣ್ಣನವರ ಸಂದೇಶದಂತೆ ಸ್ವಾವಲಂಬೀ ಅಹಿಂಸಾತ್ಮಕ ಸಮಾಜರಚನೆಯನ್ನು ಪಡೆಯಬೇಕು. ಮಹಾತ್ಮಾ ಗಾಂಧಿಯವರು ಒಂದೆಡೆ ಹೇಳಿದಂತ ರಾಜಕೀಯ ಸ್ವಾತಂತ್ರ್ಯದೊಂದಿಗೆ ಅಹಿಂಸಾತ್ಮಕ ಸಮಾಜರಚನೆಯ ಕಾರ್ಯ ಕೈಕೊಳ್ಳುವದಾದರೆ ನೈಸರ್ಗಿಕವಾಗಿಯೇ ಆ ಗುಣಗಳನ್ನು ಪಡೆದ ಕರ್ನಾಟಕವನ್ನೇ ಅವರು ಆರಿಸುವಂತೆ ನಾವು ಮುಂದುವರಿಯಬೇಕು. ಅದೇ ಇಂದು ನಾವು ಬಸವಣ್ಣನವರಿಗೆ ಸಲ್ಲಿಸಬೇಕಾದ ಸೇವೆಯಾಗಿದೆ